ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 16 ಮಂಗಳವಾರ 2024

ಸಂಪುಟ: 45 | ಸಂಚಿಕೆ: 91 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವಾಲ್ಮೀಕಿ ನಿಗಮದ ಹಗರಣ ವಿಧಾನಸಭೆಯಲ್ಲಿ ಪ್ರಸ್ತಾಪ
ಕಟಾಕಟ್ ದಲಿತರ ಹಣ ಲೂಟಿ
ವಾಕ್ಸಮರ

ಬೆಂಗಳೂರು: ವಿಧಾನಮಂಡಲ ಅಧಿವೇಶನದ ಮೊದಲ ದಿನವೇ ವಾಲ್ಮೀಕಿ ನಿಗಮದ ಹಗರಣ ಪ್ರತಿಧ್ವನಿಸಿದೆ. ವಿಧಾನಸಭೆಯ ಕಲಾಪ ಆರಂಭವಾಗುತ್ತಿದ್ದಂತೆ ಪ್ರತಿಪಕ್ಷ ನಾಯಕ ಆರ್. ಅಶೋಕ್, ನಿಯಮ 69ರ ಅಡಿಯಲ್ಲಿ ವಾಲ್ಮೀಕಿ ನಿಗಮದಲ್ಲಿ 187 ಕೋಟಿ ಅಕ್ರಮ ಪ್ರಕರಣ ಕುರಿತು ಚರ್ಚೆಗೆ ಅವಕಾಶ ಕೋರಿದರು. ಪ್ರಶ್ನೋತ್ತರ ಕಲಾಪ ಬಳಿಕ ಚರ್ಚೆಗೆ ಅವಕಾಶ ನೀಡಲಾಯಿತು.

ಬಳಿಕ ಮಾತು ಆರಂಭಿಸಿದ ಆರ್. ಅಶೋಕ್, ದಲಿತರ ಹಣ ಲೂಟಿ ಮಾಡಲಾಗಿದೆ. ಲೂಟಿ ಹೊಡೆದು ಬೇರೆ ರಾಜ್ಯಗಳಿಗೆ ಕಳಿಸಿಕೊಡಲಾಗಿದೆ. ಈ ತರಹದ ಹಗರಣ ರಾಜ್ಯದಲ್ಲಿ ಇದೇ ಮೊದಲು. ಕಟಾಕಟ್ ಅಂತ ನೂರಕ್ಕೆ ನೂರು ದಲಿತರ ಹಣ ಲೂಟಿ ಆಗಿದೆ ಇದು ಕರ್ನಾಟಕ ಇತಿಹಾಸಕ್ಕೆ ಕಪ್ಪು ಚುಕ್ಕೆ. ನಿಗಮದಲ್ಲಿ ಬೇಲಿಯೇ ಎದ್ದು ಹೊಲ ಮೇಯ್ದಿದೆ ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಹೆಡ್ ಮಾಸ್ಟರ್ ಕೈಚೆಲ್ಲಿ ಕೂತಿದ್ರು: ವಾಲ್ಮೀಕಿ ನಿಗಮದ ಹಣ ಲೂಟಿ ಹೊಡೆದಿದ್ದು ಹಲ್ಕಾ ಕೆಲಸ. ಸತ್ತಿರುವ ಚಂದ್ರಶೇಖರನ್ ದಲಿತ, ಲೂಟಿ ಆಗಿರೋದು ದಲಿತರ ಹಣ. 187 ಕೋಟಿ ರೂ. ಕಟಾಕಟ್ ಅಂತ ವರ್ಗಾವಣೆ ಆದಾಗ ಸರ್ಕಾರ ಕಣ್ಮುಚ್ಚಿ ಕೂತಿತ್ತು. ಸರ್ಕಾರದ ಹೆಡ್ ಮಾಸ್ಟರ್ ಸಿಎಂ ಅವರೇ ಕೈಚೆಲ್ಲಿ ಕೂತಿದ್ರು ಎಂದರು. ಇದಕ್ಕೆ ಗರಂ ಆದ ಸಿಎಂ ನಾನು ವರ್ಗಾವಣೆ ಮಾಡು ಅಂತ ಹೇಳಿದ್ನಾ ಎಂದು ತಿರುಗೇಟು ಕೊಟ್ಟರು. ಮತ್ತೆ ಮಾತು ಮುಂದುವರಿಸಿದ ಅಶೋಕ್, ವಾಲ್ಮೀಕಿ ನಿಗಮದ ಅಕ್ರಮದಲ್ಲಿ ಮಾಜಿ ಸಚಿವ, ಶಾಸಕ, ನಿಗಮದ ಅಧಿಕಾರಿಗಳು, ಹವಾಲಾ ದಂಧೆಕೋರರು, ಬ್ಯಾಂಕಿನವ್ರು ಈ ಐದು ವರ್ಗದವರೂ ಶಾಮೀಲಾಗಿದ್ದಾರೆ ಎಂದು ಆರೋಪಿಸಿದರು.



ಸದನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪ್ರತಿಪಕ್ಷ ನಾಯಕ ಆರ್.ಅಶೋಕ್ ಕಾವೇರಿದ ಚರ್ಚೆಯಲ್ಲಿ ತೊಡಗಿರುವುದು.

187 ಕೋಟಿ ಅಲ್ಲ, 89 ಕೋಟಿ: ಅಶೋಕ್ ಚರ್ಚೆ ವೇಳೆ ಮಧ್ಯ ಪ್ರವೇಶಿಸಿದ ಸಿಎಂ, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು ಜಾರಿ ನಿರ್ದೇಶನಾಲಯದವರು ಅಕ್ರಮದಲ್ಲಿ ಅವರ ಪಾತ್ರದ ಬಗ್ಗೆ ನಾಗೇಂದ್ರ ಒಪ್ಕೊಂಡಿಲ್ಲ. ಇದು ರಿಮ್ಯಾಂಡ್ ಅರ್ಜಿಯಲ್ಲಿ ಕೊಟ್ಟಿರುವ ಮಾಹಿತಿ. ಇದು ಒಪ್ಪಿತ ಸತ್ಯಾಂಶ ಅಲ್ಲ. ನಿಗಮದಲ್ಲಿ 187 ಕೋಟಿ ರೂ. ಅಕ್ರಮ ಆಗಿಲ್ಲ. 89.62 ಕೋಟಿ ರೂ. ಅಕ್ರಮ ಆಗಿದೆ. ತಪ್ಪು ಮಾಹಿತಿ ಹೋಗಬಾರದು ಅಂತ ಹೇಳಿದರು. ಈ ವೇಳೆ ಬಿಜೆಪಿ ಸದಸ್ಯರು ಘೋಷಣೆ ಕೂಗಿದಾಗ, ನಾನು ಯಾರನ್ನೂ ಡಿಫೆಂಡ್ ಮಾಡ್ತೊಳ್ತಿಲ್ಲ, ಯಾರ ರಕ್ಷಣೆಯೂ ಮಾಡ್ತಿಲ್ಲ. 187 ಕೋಟಿ ರೂ ಲೂಟಿಯಾಗಿರೋದನ್ನ ಯಾರೂ ಒಪ್ಪಿಕೊಂಡಿಲ್ಲ, ನಾನಾಗಲೀ, ನಾಗೇಂದ್ರ ಆಗಲೀ ಒಪ್ಪಿಕೊಂಡಿಲ್ಲ. ಇದು ಇಡಿಯವ್ರು ಹೇಳಿರೋದು, ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು ಅಂತ ಸಿಎಂ ಸ್ಪಷ್ಟನೆ ನೀಡಿದರು.

6 ಪುಟಗಳ ಡೆತ್ ನೋಟ್: ಮತ್ತೆ ಚರ್ಚೆ ಆರಂಭಿಸಿದ ಅಶೋಕ್, ವಾಲ್ಮೀಕಿ ನಿಗಮದ ಹಣ ವರ್ಗಾವಣೆ ಡೀಲ್ ನಡೆದಿದ್ದು ಶಾಂಗ್ರೀಲಾ ಹೋಟೇಲ್‌ನಲ್ಲಿ. ಈ ಲೂಟಿ ಹಣ ಚಂದ್ರಶೇಖರನ್ ಆತ್ಮಹತ್ಯೆಯಿಂದ ಬಯಲಿಗೆ ಬಂತು. ಆ ಆಪಾದನೆ ತಮ್ಮ ಮೇಲೆ ಬರಬಾರದು ಅಂತ ದಲಿತ ಚಂದ್ರಶೇಖರನ್ ಬಲಿದಾನ ಆಗಿದೆ ಎಂದರಲ್ಲದೇ ಸಾವಿಗೂ ಮುನ್ನ ಚಂದ್ರಶೇಖರನ್ ಬರೆದಿದ್ದ 6 ಪುಟಗಳ ಡೆತ್ ನೋಟ್ ಓದಿದರು.

■9ನೇ ಪುಟಕ್ಕೆ

ನಿಮ್ಮ ಪ್ರತಿ ಮಾತಿಗೂ ನನ್ನ ಬಳಿ ಉತ್ತರವಿದೆ...

ಬೆಂಗಳೂರು, ಜು.15(ಕೆಎಂಶಿ)– ಮುಡಾ ಹಾಗೂ ಮಹರ್ಷಿ ವಾಲ್ಮೀಕಿ ನಿಗಮದ ಹಗರಣಗಳಿಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳ ಆರೋಪಗಳು ಎಷ್ಟು ಸತ್ಯ, ಎಷ್ಟು ಸುಳ್ಳು ಎಂಬುದನ್ನು ಸದನದಲ್ಲೇ ಬಯಲು ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸವಾಲು ಹಾಕಿದ್ದಾರೆ.

ರಾಜಕೀಯ ದುರುದ್ದೇಶದ ಟೀಕೆಗಳಿಗೆ ಹೆದರಿ ಕೂರುವ ಜಾಯಮಾನ ನನ್ನದಲ್ಲ. ಎಲ್ಲದಕ್ಕೂ ಸದನದಲ್ಲೇ ಉತ್ತರ ನೀಡುವುದಾಗಿ ಟ್ವೀಟ್ ಮಾಡಿ ತಿಳಿಸಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ನಾಯಕರೇ, ನಿಮ್ಮ ಪ್ರತಿ ಮಾತಿಗೂ ನನ್ನ ಬಳಿ ಉತ್ತರವಿದೆ. ಇಷ್ಟು ದಿನ ಮಾಧ್ಯಮಗಳ ಎದುರು ಸುಳ್ಳು ಹೇಳುತ್ತಾ, ದೂರದಲ್ಲೆಲ್ಲೋ ನಿಂತು ಗಾಳಿಯಲ್ಲಿ ಗುಂಡು ಹೊಡೆಯುತ್ತಿದ್ದೀರಿ. ಇದು ಸದನ, ಇಲ್ಲಿ ನಿಮ್ಮ ಹಿಟ್ ಅಂಡ್ ರನ್‌ಗೆ ಅವಕಾಶವಿಲ್ಲ ಎಂದಿದ್ದಾರೆ.



ವಾಲ್ಮೀಕಿ ನಿಗಮ ಅವ್ಯವಹಾರ ಪ್ರಸ್ತಾಪ: ಪರಿಷತ್‌ನಲ್ಲಿ ಆರೋಪ–ಪ್ರತ್ಯಾರೋಪ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ಭ್ರಷ್ಟಾಚಾರ ನಡೆದಿರುವ ಕುರಿತಂತೆ ನಿಯಮ 59ರಡಿ ಚರ್ಚೆಗೆ ಅವಕಾಶ ನೀಡುವಂತೆ ಬಿಜೆಪಿ ಸದಸ್ಯ ಸಿ.ಟಿ.ರವಿ ವಿಧಾನಪರಿಷತ್‌ನಲ್ಲಿ ಪ್ರಸ್ತಾಪಿಸುತ್ತಿದ್ದಂತೆ ಆಡಳಿತ ಪಕ್ಷದ ಸದಸ್ಯರು ವಿರೋಧ ವ್ಯಕ್ತಪಡಿಸಿದರು.

ಸಭಾಪತಿಗಳು ಚರ್ಚೆಗೆ ಅನುಮತಿ ನೀಡಿಲ್ಲ, ಈಗ ಯಾಕೆ ಪ್ರಸ್ತಾಪ ಮಾಡುತ್ತೀರಿ ಎಂದು ಆಡಳಿತ ಪಕ್ಷದ ಸದಸ್ಯರು ಪ್ರಶ್ನಿಸುತ್ತಿದ್ದಂತೆ ವಿರೋಧ ಪಕ್ಷದ ಸದಸ್ಯರು ಎದ್ದು ನಿಂತು ಆಕ್ಷೇಪಿಸಿದರು. ಕೆಲಕಾಲ ಆಡಳಿತ ಹಾಗೂ ಪ್ರತಿಪಕ್ಷಗಳು ಆರೋಪ–ಪ್ರತ್ಯಾರೋಪದ ಸುರಿಮಳೆ ಸುರಿಸಿದರು.

ಈ ವೇಳೆ ಗೃಹ ಸಚಿವ ಪರಮೇಶ್ವರ್ ಅವರು ಮಧ್ಯಪ್ರವೇಶಿಸಿ ವಾಲ್ಮೀಕಿ ಅಭಿವೃದ್ಧಿ ನಿಗಮ ಅವ್ಯವಹಾರ ಸಂಬಂಧ ಎಸ್‌ಐಟಿ ತಂಡ ರಚಿಸಲಾಗಿದೆ. ಸಿಬಿಐ ಕೂಡಾ ಪ್ರತ್ಯೇಕವಾಗಿ ಎಫ್‌ಐಆರ್ ದಾಖಲಿಕೊಂಡು ತನಿಖೆ ನಡೆಸುತ್ತಿದೆ. ಜಾರಿ ನಿರ್ದೇಶನಾಲಯ ಸಹ ತನಿಖೆ ನಡೆಸುತ್ತಿದೆ. ಕರ್ನಾಟಕ ವಿಧಾನಸಭಾ ಕಾರ್ಯವಿಧಾನ ನಡವಳಿಕೆ ನಿಯಮ 59ರಡಿ ಚರ್ಚೆಗೆ ಅವಕಾಶ ನೀಡಕೂಡದು ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರಲ್ಲಿ ಮನವಿ ಮಾಡಿಕೊಂಡರು.

ಬಳಿಕ ಸಿ.ಟಿ.ರವಿ ರವಿ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ಅವ್ಯವಹಾರ ಸಂಬಂಧ ನೂರಾರು ಕೋಟಿ ಭ್ರಷ್ಟಾಚಾರವಾಗಿದೆ. ಇದರಿಂದ ವಾಲ್ಮೀಕಿ ಸಮುದಾಯಕ್ಕೆ ಅಪಾರ ನಷ್ಟವಾಗಿದೆ. ಈ ನಿಟ್ಟಿನಲ್ಲಿ ಚರ್ಚೆಗೆ ಅವಕಾಶ ನೀಡಬೇಕು. ನಿಲುವಳಿ ಮಂಡಿಸಲು ಅವಕಾಶ ಸಭಾಪತಿಯವರ ವಿವೇಚನೆಗಿದೆ. ಹೀಗಾಗಿ ನಿಲುವಳಿ ಮಂಡಿಸಲು ಅನುಮತಿ ನೀಡಬೇಕು ಎಂದು ಮನವಿ ಮಾಡಿದರು.

ಈ ಬಗ್ಗೆ ಮಾತನಾಡಿದ ಸಭಾಪತಿ ಬಸವರಾಜ ಹೊರಟ್ಟಿ, ಅವ್ಯವಹಾರದ ಬಗ್ಗೆ ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿವೆ. ಕರ್ನಾಟಕ ವಿಧಾನಸಭಾ ಕಾರ್ಯವಿಧಾನ ನಡವಳಿಕೆಯಂತೆ ನಿಯಮ 59ರಡಿ ಚರ್ಚೆಗೆ ಅವಕಾಶವಿಲ್ಲ. ಇದನ್ನ ಖಚಿತಪಡಿಸಿಕೊಳ್ಳಲು ಅಡ್ವೋಕೇಟ್ ಜನರಲ್ ಬಳಿ ಸಲಹೆ ಪಡೆದು ನಾಳೆಗೆ ಈ ಬಗ್ಗೆ ಸ್ಪಷ್ಟಪಡಿಸುತ್ತೇನೆ ಎಂದರು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ಪ್ರತಿಪಕ್ಷದ ಸದಸ್ಯರು ಸದನದ ಬಾವಿಗಿಳಿದು ಸರ್ಕಾರ ವಿರುದ್ಧ ಧಿಕ್ಕಾರ ಕೂಗಿದರು. ಈ ವೇಳೆ ಸಭಾಪತಿ ಅವರು 10 ನಿಮಿಷಗಳ ಕಾಲ ಸದನವನ್ನು ಮುಂದೂಡಿದರು.

ಆ.1ರಿಂದ 7ನೇ ವೇತನ ಆಯೋಗದ ಶಿಫಾರಸ್ಸು ಜಾರಿ

ಬೆಂಗಳೂರು: ಆಗಸ್ಟ್ 1 ರಿಂದ 7ನೇ ವೇತನ ಆಯೋಗದ ಶಿಫಾರಸ್ಸು ಜಾರಿಗೆ ಸರ್ಕಾರ ತೀರ್ಮಾನಿಸಿದೆ. ಮಾ.16 ರಂದು ಸುಧಾಕರ್ ರಾವ್ ನೇತೃತ್ವದ ರಾಜ್ಯ 7ನೇ ವೇತನ ಆಯೋಗದ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವೀಕಾರ ಮಾಡಿದ್ದರು. ಬಳಿಕ ವೇತನ ಆಯೋಗದ ಶಿಫಾರಸು ಜಾರಿ ಬಗ್ಗೆ ಹಣಕಾಸು ಇಲಾಖೆಯಿಂದ ಹಣದ ಹೊಂದಾಣಿಕೆ ಕುರಿತು ಮಾಹಿತಿ ಕೇಳಲಾಗಿತ್ತು. ಇದೀಗ ಹಣಕಾಸು ಇಲಾಖೆಯ ವರದಿ ಬಳಿಕ ಸರ್ಕಾರ ತೀರ್ಮಾನ ಕೈಗೊಂಡಿದೆ

ಆಯೋಗದ ಶಿಫಾರಸು ಜಾರಿ ಗೊಳಿಸುವ ತೀರ್ಮಾನವನ್ನು ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಪ್ರಕಟಿಸಿದ್ದಾರೆ. 27.5% ವೇತನ ಹೆಚ್ಚಳಕ್ಕೆ ವೇತನ ಆಯೋಗ ಶಿಫಾರಸ್ಸು ಮಾಡಿತ್ತು. 27% ವೇತನ ಹೆಚ್ಚಳ ಮಾಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಮಂಗಳವಾರ(ಜು.16) ಸದನದಲ್ಲಿ ಸಿಎಂ ಸಿದ್ದರಾಮಯ್ಯ ಅಧಿಕೃತವಾಗಿ ಈ ಬಗ್ಗೆ ಪ್ರಕಟ ಮಾಡುವ ಸಾಧ್ಯತೆ ಇದೆ. ರಾಜ್ಯ ಸರ್ಕಾರಿ ನೌಕರರ ಸಂಘ 7ನೇ ವೇತನ ಆಯೋಗದ ಶಿಫಾರಸ್ಸು ಜಾರಿಗೆ ಆಗ್ರಹಿಸಿ ಇತ್ತೀಚೆಗೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿತ್ತು. ವಿಳಂಬವಾದರೆ ಮುಷ್ಕರದ ಎಚ್ಚರಿಕೆಯನ್ನೂ ನೀಡಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಅವರ ಬೇಡಿಕೆ ಈಡೇರಿಕೆಗೆ ಮುಂದಾಗಿದೆ.

ಅಕ್ರಮ ಆಸ್ತಿ ಗಳಿಕೆ ಪ್ರಕರಣ
ಡಿ.ಕೆ.ಶಿವಕುಮಾರ್ ವಿರುದ್ಧದ ಸಿಬಿಐ FIR ರದ್ದುಗೊಳಿಸಲು 'ಸುಪ್ರೀಂ' ನಕಾರ

ಬೆಂಗಳೂರು, ಜು.15(ಕೆಎಂಶಿ)– ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ತಮ್ಮ ವಿರುದ್ಧ ಸಿಬಿಐ ದಾಖಲಿಸಿರುವ ಎಫ್‌ಐಆರ್ ರದ್ದುಗೊಳಿಸುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಇಂದು ವಜಾಗೊಳಿಸಿದೆ.



ಡಿ.ಕೆ.ಶಿವಕುಮಾರ್

ಕರ್ನಾಟಕದ ಮುಖ್ಯಮಂತ್ರಿಯಾಗಲು ಇನ್ನೊಂದು ಮೆಟ್ಟಿಲು ಬಾಕಿ ಇರುವಾಗಲೇ ನ್ಯಾಯಾಲಯದ ಈ ತೀರ್ಪು ಅವರನ್ನು ರಾಜಕೀಯವಾಗಿ ಇಕ್ಕಟ್ಟಿಗೆ ಸಿಲುಕಿಸಿದೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಕೈಗೆತ್ತಿಕೊಂಡು ವಾದ–ಪ್ರತಿವಾದ ಆಲಿಸಿದ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಎಸ್.ಸಿ.ಶರ್ಮಾ ಅವರನ್ನು ಒಳಗೊಂಡ ವಿಭಾಗೀಯ ಪೀಠ, ಕರ್ನಾಟಕ ಹೈಕೋರ್ಟ್ ನೀಡಿರುವ ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಹೇಳಿದೆ.

ಅಕ್ರಮ ಆಸ್ತಿ ಗಳಿಕೆ ಆರೋಪದಡಿ ತಮ್ಮ ವಿರುದ್ಧ ಸಿಬಿಐ ಆರಂಭಿಸಿರುವ ತನಿಖೆಯನ್ನು ಕೈಬಿಡುವಂತೆ ಶಿವಕುಮಾರ್ ಈ ಮೊದಲು ರಾಜ್ಯ ಹೈಕೋರ್ಟ್ ಮೊರೆ ಹೋಗಿದ್ದರು. ಶಿವಕುಮಾರ್ ವಾದ ಆಲಿಸಿದ್ದ ನ್ಯಾಯಾಲಯ ಇದನ್ನು ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದ್ದನ್ನು ಪ್ರಶ್ನಿಸಿ ಸುಪ್ರಿಂಕೋರ್ಟ್ ಮೆಟ್ಟಿಲೇರಿದ್ದರು.

ಹೈಕೋರ್ಟ್ ಮೊರೆ ಹೋಗುವುದಕ್ಕೂ ಮುನ್ನ ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆಗೆ ಹಿಂದಿನ ಸರ್ಕಾರದ ಅನುಮತಿಯನ್ನು ಸಿದ್ದರಾಮಯ್ಯ ಸಂಪುಟ ಹಿಂದಕ್ಕೆ ಪಡೆದುಕೊಂಡಿತ್ತು. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರ ಆರೋಪದ ಮೇಲೆ ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ರಹದಾರಿ ಮಾಡಿಕೊಟ್ಟಿತ್ತು ಇದನ್ನು ಸಿದ್ದರಾಮಯ್ಯ ಸರ್ಕಾರ ನಂತರದ ದಿನಗಳಲ್ಲಿ ಹಿಂದಕ್ಕೆ ಪಡೆದಿತ್ತು. ರಾಜ್ಯ ಸರ್ಕಾರ ಸಿಬಿಐಗೆ ನೀಡಿದ್ದ ಅನುಮತಿ ಹಿಂದಕ್ಕೆ ಪಡೆದಿರುವುದರಿಂದ ತಮ್ಮ ವಿರುದ್ಧದ ಸಿಬಿಐ ತನಿಖೆಯನ್ನು ರದ್ದುಪಡಿಸುವಂತೆ ಶಿವಕುಮಾರ್

■9ನೇ ಪುಟಕ್ಕೆ


ಖಾಸಗಿ ಆಸ್ಪತ್ರೆಗಳಲ್ಲಿ ಡೆಂಗ್ಯೂ ಚಿಕಿತ್ಸೆಗೆ ಸರ್ಕಾರದಿಂದಲೇ ದರ ನಿಗದಿ



ದಿನೇಶ್ ಗುಂಡೂರಾವ್

ಬೆಂಗಳೂರು: ಡೆಂಗ್ಯೂ ಅನ್ನು ಗಂಭೀರವಾಗಿ ಪರಿಗಣಿಸಿ ನೋಟಿಫೈಡ್ ಡಿಸೀಸ್ ಎಂದು ಘೋಷಿಸಲಾಗಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆ ಮತ್ತು ಚಿಕಿತ್ಸೆ ಉಚಿತವಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಸರ್ಕಾರವೇ ದರ ನಿಗದಿಪಡಿಸಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿ ಸದಸ್ಯ ಧನಂಜಯ ಸರ್ಜಿ ಬದಲು ಡಿ.ಎಸ್ ಅರುಣ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಳೆದ ಬಾರಿಗೆ ಹೋಲಿಸಿದಲ್ಲಿ ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಡೆಂಗ್ಯೂ ಕಾಣಿಸಿಕೊಂಡಿದೆ. ಕಳೆದ ಬಾರಿ



25 ಸಾವಿರ ಇದ್ದರೆ ಈ ಬಾರಿ 60 ಸಾವಿರ ದಾಟಿದೆ, ಡೆಂಗ್ಯೂ ಅನ್ನು ನೋಟಿಫೈಡ್ ಡಿಸೀಸ್ ಎಂದು ಘೋಷಿಸಿದ್ದೇವೆ ಎಂದರು.

ಡೆಂಗ್ಯೂ ಪ್ರಕರಣದ ಅಂಕಿ ಅಂಶಗಳಲ್ಲಿ ವ್ಯತ್ಯಾಸ ಮಾಡುತ್ತಿಲ್ಲ, ಗಂಭೀರವಾಗಿ ಪರಿಗಣಿಸಿದ್ದೇವೆ. ಕೋವಿಡ್ ರೀತಿ ಟ್ರ್ಯಾಕ್ ಮಾಡಲು ಸೂಚಿಸಲಾಗಿದೆ. ಒಂದೇ ಏರಿಯಾದಲ್ಲಿ ಎರಡು ಡೆಂಗ್ಯೂ ಕಂಡರೆ ಆ ಪ್ರದೇಶದಲ್ಲಿ ಫೀವರ್ ಕ್ಲಿನಿಕ್ ಆರಂಭಿಸಲಿದ್ದೇವೆ. ನಿಯಂತ್ರಣಕ್ಕೆ ಎಲ್ಲರ ಸಹಕಾರ ಅಗತ್ಯ. ಎಲ್ಲಾ ಜಿಲ್ಲೆಗಳಲ್ಲಿಯೂ ಪರೀಕ್ಷೆ ಸರಿಯಾಗಿ ಆಗುತ್ತಿದೆ.

■9ನೇ ಪುಟಕ್ಕೆ

ವಿಧಾನಸಭೆಗೆ ಶಾಸಕ ನಾಗೇಂದ್ರ ಇಡಿ ಬಂಧನ ಮಾಹಿತಿ ನೀಡಿದ ಸ್ಪೀಕರ್

ಬೆಂಗಳೂರು, ಜು.15(ಕೆಎಂಶಿ)– ಕಾಂಗ್ರೆಸ್ ಶಾಸಕ ಹಾಗೂ ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು ಜಾರಿ ನಿರ್ದೇಶನಾಲಯ (ಇಡಿ) ಬಂಧಿಸಿರುವ ಮಾಹಿತಿಯನ್ನು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಇಂದು ಸದನಕ್ಕೆ ತಿಳಿಸಿದರು.

ನಾಗೇಂದ್ರ ಅವರನ್ನು ಜುಲೈ 12 ರಂದು ದಸ್ತಗಿರಿ ಮಾಡಲಾಗಿದ್ದು, ಇ.ಡಿ. ವಶದಲ್ಲಿ ವಿಚಾರಣೆ ನಡೆಸಲಾಗುತ್ತಿದೆ ಎಂಬ ಮಾಹಿತಿ ನೀಡಿರುವುದಾಗಿ ಸದನಕ್ಕೆ ತಿಳಿಸಿದರು. ಅಕ್ರಮ ಹಣ ವರ್ಗಾವಣೆ ನಿಯಂತ್ರಣ ಕಾಯ್ದೆಯಡಿ ನಾಗೇಂದ್ರ ಅವರನ್ನು ಬಂಧಿಸಲಾಗಿದೆ ಎಂದು ಮಾಹಿತಿ ಇರುವುದಾಗಿ ಯು.ಟಿ.ಖಾದರ್ ತಿಳಿಸಿದರು.

ಕೊಡಗಿನಲ್ಲಿ ಮುಂದುವರೆದ ಮಳೆ ಅಬ್ಬರ

● ಹಾರಂಗಿ ಭರ್ತಿಗೆ 5 ಅಡಿಯಷ್ಟೇ ಬಾಕಿ ● ಜಲಾಶಯದ ಒಳಹರಿವಿನ ಪ್ರಮಾಣ ಏರಿಕೆ ಹಿನ್ನೆಲೆ 20 ಸಾವಿರ ಕ್ಯುಸೆಕ್ ನೀರು ಬಿಡುಗಡೆ

ಮಡಿಕೇರಿ, ಜು.15–ಕೊಡಗು ಜಿಲ್ಲಾದ್ಯಂತ ಪುನರ್ವಸು ಮಳೆಯ ಅಬ್ಬರ ಮುಂದುವರೆದಿದ್ದು, ಕಳೆದ ಎರಡು ದಿನಗಳಿಂದ ಜಿಲ್ಲೆಯಲ್ಲಿ ಮಳೆ ಬಿರುಸುಗೊಂಡಿದೆ.

ನದಿ, ತೊರೆ, ಹಳ್ಳಕೊಳ್ಳ, ಜಲಾಶಯಗಳಲ್ಲಿನ ನೀರಿನ ಮಟ್ಟ ಏರಿಕೆಯಾಗಿದೆ. ಶಾಂತಳ್ಳಿ, ಭಾಗಮಂಡಲ, ಸೋಮವಾರಪೇಟೆ, ಮಡಿಕೇರಿ, ಸುಂಟಿಕೊಪ್ಪ ನಾಪೋಕ್ಲು, ಶನಿವಾರಸಂತೆ, ಶ್ರೀಮಂಗಲ, ಸಂಪಾಜೆ ಸೇರಿದಂತೆ ವಿವಿಧೆಡೆ ವ್ಯಾಪಕ ಮಳೆಯಾಗುತ್ತಿದೆ. ಹಾರಂಗಿ ಜಲಾಶಯದ ಜಲಮೂಲ ಪ್ರದೇಶಗಳಾದ ಮಡಿಕೇರಿ, ಗಾಳಿಬೀಡು, ವಣಚಲು, ಕಾಲೂರು, ಸೂರ್ಲಬ್ಬಿ, ಹಮ್ಮಿಯಾಲ, ಮುಟ್ಲು ಕುಂಬಾರಗಡಿಗೆ, ಮಾದಾಪುರ ಸೇರಿದಂತೆ ವಿವಿಧೆಡೆ ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯದ ಒಳಹರಿವಿನಲ್ಲಿ ತೀವ್ರಗತಿಯ ಏರಿಕೆಯಾಗಿದೆ. ಮಾದಾಪುರ ಬಳಿ ಹಾರಂಗಿ ಹಿನ್ನೀರು ಸಂಗ್ರಹವಾಗಿದ್ದು, ಸಮುದ್ರದಂತೆ ಕಾಣುತ್ತಿದೆ.

ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಗೆ ಭಾಗಮಂಡಲ ತ್ರಿವೇಣಿ ಸಂಗಮ ತುಂಬಿ ಹರಿಯುತ್ತಿದ್ದು, ಕಾವೇರಿ ನದಿ ಪಾತ್ರದಲ್ಲಿ ನೀರಿನ ಹರಿವು ಹೆಚ್ಚಳವಾಗಿದೆ. ಕೃಷಿ ಚಟುವಟಿಕೆ ಸಹ ಬಿರುಸಿನಿಂದ ನಡೆಯುತ್ತಿದೆ. ತಹಸೀಲ್ದಾರ್‌ಗಳಾದ ಕಿರಣ್ ಗೌರಯ್ಯ, ಪ್ರವೀಣ್ ಕುಮಾರ್, ರಾಮಚಂದ್ರ, ಪೌರಾಯುಕ್ತ ವಿಜಯ್, ತಾಲೂಕು ಕಾರ್ಮಿಕ ಅಧಿಕಾರಿ ಎಂ.ಎಂ.ಯತ್ನಟ್ಟಿ ತಮ್ಮ ವ್ಯಾಪ್ತಿಯ ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು. ಮಳೆಗಾಲ ಹಿನ್ನೆಲೆಯಲ್ಲಿ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡುವಂತೆ ಕಾರ್ಮಿಕರಿಗೆ ತಾಲೂಕು ಕಾರ್ಮಿಕಾಧಿಕಾರಿ ಯತ್ನಟ್ಟಿ ಸಲಹೆ ನೀಡಿದ್ದಾರೆ.





ಸೋಮವಾರ ಹಾರಂಗಿ ಜಲಾಶಯದಿಂದ 20 ಸಾವಿರ ಕ್ಯುಸೆಕ್ ನೀರು ಬಿಟ್ಟಿರುವುದು.

ಕ್ಷಣ ಕ್ಷಣಕ್ಕೂ ಏರಿಕೆ: ಕೊಡಗು ಜಿಲ್ಲಾದ್ಯಂತ ಧಾರಾಕಾರ ಮಳೆಯಾಗುತ್ತಿದ್ದು, ಹಾರಂಗಿ ಜಲಾಶಯದ ಒಳಹರಿವಿನ ಪ್ರಮಾಣ ಏರಿಕೆಯಾಗಿದೆ. ಸೋಮವಾರ ಜಲಾಶಯದಿಂದ 20 ಸಾವಿರ ಕ್ಯುಸೆಕ್ ನೀರು ಬಿಡಲಾಯಿತು.

ಹಾರಂಗಿ ಜಲಾಶಯದ ಒಳಹರಿವಿನಲ್ಲಿ ಕ್ಷಣಕ್ಷಣಕ್ಕೂ ಏರಿಕೆಯಾಗುತ್ತಿದ್ದು, ಜಲಾಶಯದ ಸುರಕ್ಷತೆಯ ದೃಷ್ಟಿಯಿಂದ ನದಿ ಪಾತ್ರಕ್ಕೆ ನೀರನ್ನು ಹರಿಯಬಿಡಲಾಗುತ್ತಿದೆ. ಸೋಮವಾರ ಬೆಳಗ್ಗೆ 8 ಗಂಟೆ ವೇಳೆಗೆ ಜಲಾಶಯಕ್ಕೆ 8666 ಕ್ಯುಸೆಕ್ ನೀರಿನ ಒಳಹರಿವು ದಾಖಲಾಗಿತ್ತು. ಈ ಸಂದರ್ಭ ನದಿ ಪಾತ್ರಕ್ಕೆ 5933 ಕ್ಯುಸೆಕ್ ನೀರನ್ನು ಹರಿಸಲಾಗಿತ್ತು. 10 ಗಂಟೆ ವೇಳೆಗೆ ಒಳಹರಿವಿನಲ್ಲಿ ಮತ್ತೆ ಏರಿಕೆಯಾಗಿ 13 ಸಾವಿರ ಕ್ಯುಸೆಕ್ ತಲುಪಿದರೆ, ಮಧ್ಯಾಹ್ನ 12 ಗಂಟೆಗೆ ಒಳ

■9ನೇ ಪುಟಕ್ಕೆ

ಕೆಂಪನಂಜಮ್ಮಣಿ ಪುಣ್ಯಸ್ಮರಣೆ; ಮುಮ್ಮಡಿ ಕೃಷ್ಣರಾಜ ಒಡೆಯರ್ ಜನ್ಮದಿನ; ವೃದ್ಧಾಶ್ರಮದಲ್ಲಿ ಹಣ್ಣು ವಿತರಣೆ



ಎಸ್.ಪ್ರಕಾಶ್ ಪ್ರಿಯಾದರ್ಶನ್ ಸ್ನೇಹ ಬಳಗದಿಂದ ಮೈಸೂರಿನ ಭಾರತೀ ವೃದ್ಧಾಶ್ರಮದ ಹಿರಿಯ ನಾಗರಿಕರಿಗೆ ಹಣ್ಣು ಹಂಪಲು ವಿತರಿಸಲಾಯಿತು.

ಮೈಸೂರು, ಜು. 15– ಮೈಸೂರಿನ ಎಸ್.ಪ್ರಕಾಶ್ ಪ್ರಿಯಾದರ್ಶನ್ ಸ್ನೇಹ ಬಳಗದಿಂದ ಮೈಸೂರಿನ ಕನಕಗಿರಿ ಸಿವೇಜ್ ಫಾರಂ ರಸ್ತೆಯಲ್ಲಿರುವ ಭಾರತೀ ವೃದ್ಧಾಶ್ರಮದ ಹಿರಿಯ ನಾಗರಿಕರಿಗೆ ಹಣ್ಣುಗಳನ್ನು ವಿತರಿಸುವ ಮೂಲಕ ಮಹಾರಾಣಿ ಕೆಂಪನಂಜಮ್ಮಣಿ ಪುಣ್ಯಸ್ಮರಣೆ ಹಾಗೂ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಜನ್ಮದಿನವನ್ನು ಆಚರಿಸಲಾಯಿತು.

ಈ ವೇಳೆ ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯಾದರ್ಶನ್, ಭಾರತಿ ವೃದ್ಧಾಶ್ರಮದ ಮುಖ್ಯಸ್ಥರಾದ ನಾಗೇಶ್, ಕರ್ನಾಟಕ ಮಹಿಳಾ ರತ್ನ ಪ್ರಶಸ್ತಿ ಪುರಸ್ಕೃತರು ಸಮಾಜ ಸೇವಕಿ ವಿದ್ಯಾ, ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ, ಭುವನೇಶ್ವರಿ ಸೇವಾ ಟ್ರಸ್ಟ್ ಅಧ್ಯಕ್ಷ ನಾಗಶ್ರೀ ಸುಚಿಂದ್ರ, ಸುಚಿಂದ್ರ, ಸುಬ್ರಮಣಿ, ಪುರುಷೋತ್ತಮ್, ಛಾಯಾ, ಯಶವಂತ್‌ಕುಮಾರ್, ಮಹದೇವ್, ಮಹೇಶ್, ಚಂದ್ರಶೇಖರ್, ಎಸ್.ಪಿ.ಅಕ್ಷಯ ಪ್ರಿಯಾದರ್ಶನ್, ಸ್ವಾಮಿ, ಹರ್ಷಿತ್ ಇನ್ನಿತರರು ಉಪಸ್ಥಿತರಿದ್ದರು.

ಯುವ ವಿಕಾಸ ಶ್ರೀ ಪ್ರಶಸ್ತಿ ಪ್ರದಾನ



ಕೆ.ಎಚ್.ರಾಮಯ್ಯ ಅವರ ಜಯಂತಿ ಅಂಗವಾಗಿ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯ ಮೈಸೂರು ಘಟಕದ ವತಿಯಿಂದ ಕೊಡಮಾಡುವ ಯುವ ವಿಕಾಸ ಶ್ರೀ ಪ್ರಶಸ್ತಿಯನ್ನು ಪ್ರದೀಪ್ ಕೃಷ್ಣೇಗೌಡ, ಚೇತನ್, ರಮ್ಯಾ ಆರ್.ರಾಜು, ಭುವನ್ ಅವರಿಗೆ ಪ್ರದಾನ ಮಾಡಲಾಯಿತು.

ನಾಡಪ್ರಭು ಕೆಂಪೇಗೌಡರ ಜಯಂತಿ



ಮೈಸೂರಿನ ವಿವೇಕಾನಂದ ವೃತ್ತದಲ್ಲಿ ಜರುಗಿದ ನಾಡಪ್ರಭು ಕೆಂಪೇಗೌಡರ ಜಯಂತಿಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿದ್ದರು. ಈ ವೇಳೆ ಕಾಂಗ್ರೆಸ್ ಮುಖಂಡ ಕುಮಾರ್‌ಗೌಡ, ನಗರಪಾಲಿಕೆ ಮಾಜಿ ಸದಸ್ಯರಾದ ಜಗದೀಶ್ (ಮಾಯಾ), ರವಿ, ಗಿರೀಶ್, ಉಲ್ಲಾಸ್ ಮತ್ತಿತರರು ಉಪಸ್ಥಿತರಿದ್ದರು.

ಹುಲಿ ದಿನಾಚರಣೆ: ಎರಡು ದಿನ ಸೆಮಿನಾರ್



ಮೈಸೂರು,ಜು.15–ಮೈಸೂರು ಮೃಗಾಲಯದ ವತಿಯಿಂದ ಹುಲಿ ದಿನಾಚರಣೆ ಅಂಗವಾಗಿ ದೊಡ್ಡಬೆಕ್ಕುಗಳ ಸಂರಕ್ಷಣೆ ಕುರಿತು 'Roaring Forward: Effective Actions for Big Cat Conservation' ಎಂಬ ವಿಷಯದ ಮೇಲೆ ಜುಲೈ 29 ಮತ್ತು 30 ರಂದು ಮೃಗಾಲಯದ ಸೆಮಿನಾರ್ ಹಾಲ್‌ನಲ್ಲಿ ಎರಡು ದಿನಗಳ ಸೆಮಿನಾರ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ದೊಡ್ಡಬೆಕ್ಕು ಜಾತಿಯ ಪ್ರಾಣಿಗಳ ನಿರ್ವಹಣೆ, ಸಂರಕ್ಷಣೆ ಹಾಗೂ ಅರಣ್ಯಕ್ಕೆ ಪುನರ್ ಪರಿಚಯಿಸುವ ಕಾರ್ಯತಂತ್ರಗಳ ಬಗ್ಗೆ ನವೀನ ತಂತ್ರಗಳನ್ನು ಅಭಿವೃದ್ಧಿಪಡಿಸಲು ಸಮಗ್ರ ಚರ್ಚೆಗಳಿಗೆ ವೇದಿಕೆಯಾಗಿದೆ. ವಿಚಾರಗೋಷ್ಠಿಯಲ್ಲಿ ಪರಿಸರ ವಿಜ್ಞಾನ ಮತ್ತು ಸಂರಕ್ಷಣೆ, ಮೃಗಾಲಯ ಹಾಗೂ ಅರಣ್ಯ ಪರಿಸರದ ನಿರ್ವಹಣೆ, ಪ್ರಸ್ತುತ ಸವಾಲುಗಳು ಹಾಗೂ ಭವಿಷ್ಯದ ನಿರೀಕ್ಷೆಗಳು ವಿಷಯ ಸೂಚಿಗಳಡಿ ಕ್ಷೇತ್ರ ತಜ್ಞರು ಮಾತನಾಡಲಿದ್ದು, ಸಂಶೋಧಕರು, ವಿಜ್ಞಾನಿಗಳು, ಕ್ಷೇತ್ರ ಪರಿಣತರು ಭಾಗವಹಿಸಿ ವಿಷಯದ ಬಗ್ಗೆ ಹೊಂದಿರುವ ಜ್ಞಾನವನ್ನು Poster Presentations ಮೂಲಕ ವೇದಿಕೆಯಲ್ಲಿ ಚರ್ಚಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ https://tigerday.events dashboard.in/ಗೆ ಭೇಟಿ ನೀಡಬಹುದು ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಯಿಗಳ ಮೇಲೆ ಅತ್ಯಾಚಾರವೆಸಗಿ, ಕೊಲೆ; 249 ವರ್ಷ ಜೈಲು ಶಿಕ್ಷೆ

ಸಿಡ್ನಿ: ನಾಯಿಗಳ ಮೇಲೆ ಅತ್ಯಾಚಾರವೆಸಗಿ ಅವುಗಳನ್ನು ಕೊಲ್ಲುತ್ತಿದ್ದ ವ್ಯಕ್ತಿಗೆ ನ್ಯಾಯಾಲಯವು 249 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ. ಈ ತೀರ್ಪಿನಿಂದಾಗಿ ಆತ ಬದುಕಿರುವವರೆಗೂ ಜೈಲಿನಲ್ಲೇ ಕೊಳೆಯಬೇಕಾಗುತ್ತದೆ. ಈ ಘಟನೆ ಆಸ್ಟ್ರೇಲಿಯಾದಲ್ಲಿ ನಡೆದಿದೆ. ಆಡಮ್ ಬ್ರಿಟನ್ ಎಂಬಾತ ಹತ್ತಾರು ನಾಯಿಗಳ ಮೇಲೆ ಅತ್ಯಾಚಾರವೆಸಗಿ, ಕೊನೆಗೆ ಹತ್ಯೆ ಮಾಡಿದ್ದಾನೆ. ಆತ ಪ್ರಾಣಿಶಾಸ್ತ್ರಜ್ಞ ಎಂಬುದು ವಿಪರ್ಯಾಸ. ಆದರೆ ಆತ ಪ್ರಾಣಿಗಿಂತಲೂ ಕ್ರೂರವಾಗಿ ನಡೆದುಕೊಂಡಿದ್ದಾನೆ. ಆತ 60ಕ್ಕೂ ಹೆಚ್ಚು ನಾಯಿಗಳ ಮೇಲೆ ಅತ್ಯಾಚಾರ ವೆಸಗಿದ್ದಾನೆ ಎನ್ನಲಾಗಿದೆ, ಆಸ್ಟ್ರೇಲಿಯಾದ ಡಾರ್ವಿನ್‌ನಲ್ಲಿರುವ ಮನೆಯಲ್ಲಿ ಈ ಕೃತ್ಯವೆಸಗಿದ್ದಾನೆ. ಆಡಮ್ ವಿರುದ್ಧ ನಡೆಯುತ್ತಿರುವ ಪ್ರಕರಣದ ಅಂತಿಮ ವಿಚಾರಣೆಯು ಆಗಸ್ಟ್ ತಿಂಗಳಲ್ಲಿ ನಡೆಯಲಿದ್ದು, ಅಂದು ಶಿಕ್ಷೆ ಅಧಿಕೃತವಾಗಿ ಪ್ರಕಟವಾಗಲಿದೆ. ಆಡಮ್ ಅವರ ವಕೀಲರು ನ್ಯೂಯಾರ್ಕ್ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಮೈಕೆಲ್ ಗ್ರಾಂಟ್ ಅವರಿಗೆ ವರದಿಯನ್ನು ಸಲ್ಲಿಸಿದ್ದಾರೆ. ವಿಚಾರಣೆಯ ಸಮಯದಲ್ಲಿ, ಪ್ರಾಣಿ ಪ್ರೇಮಿಗಳು ನ್ಯಾಯಾಲಯದಲ್ಲಿ ಗದ್ದಲವನ್ನು ಸೃಷ್ಟಿಸಿದಾಗ, ಅವರನ್ನು ನ್ಯಾಯಾಲಯದಿಂದ ಹೊರಹಾಕಲಾಯಿತು. ಆಡಮ್‌ಗೆ ಮರಣ ದಂಡನೆ ವಿಧಿಸಬೇಕೆಂದು ಒತ್ತಾಯಿಸಿದರು. ಆರೋಪಿ ತನ್ನ ತಪ್ಪು ಒಪ್ಪಿಕೊಂಡಿದ್ದಾನೆ.

ನಿಧನ

ಆಂಬ್ರೋಸ್ ಪೆರೇರಾ



ಮೈಸೂರು,ಜು.15–ಮೈಸೂರಿನ ಗಾಂಧಿನಗರ ನಿವಾಸಿ ಆಂಬ್ರೋಸ್ ಪೆರೇರಾ (84) ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪುತ್ರ, ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಜು.16) ಬೆಂಗಳೂರಿನ ಕಾಳೇನ ಅಗ್ರಹಾರದಲ್ಲಿರುವ ಇಮಾಕ್ಯೂಲೇಟ್ ಹಾರ್ಟ್ ಆಫ್ ಮೇರಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಲ್ಫ್ ಜೆ.ಎಫ್.ಡಿಸೋಜಾ



ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ರಾಲ್ಫ್ ಜೆ.ಎಫ್.ಡಿಸೋಜಾ (72) ಭಾನುವಾರ ನಿಧನರಾದರು. ಮೃತರು ಪತ್ನಿ ಆಡ್ರಿನ್ ಲೋಬೋ, ಪುತ್ರ ಆರ್ವಿನ್, ಪುತ್ರಿ ಬೆನಿಟಾ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಮೈಸೂರು ಸೌತ್ ಸಿಮೆಟ್ರಿಯಲ್ಲಿ ಸೋಮವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೂಲ ಸೌಲಭ್ಯಕ್ಕೆ ಆಗ್ರಹಿಸಿ ಮೈಸೂರಿನ ಪೂರ್ವ ಬಡಾವಣೆ ನಿವಾಸಿಗಳ ಭಾರಿ ಪ್ರತಿಭಟನೆ

ಮೆಗಾ ಡೈರಿಯಿಂದ ಕಾಲ್ನಡಿಗೆ ಜಾಥಾ ನಡೆಸಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮನವಿ ಪತ್ರ ಸಲ್ಲಿಕೆ



ಅಗತ್ಯ ಮೂಲ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಮೈಸೂರಿನ ಪೂರ್ವ ಭಾಗದ ಬಡಾವಣೆಗಳ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಜು. 15(ಆರ್‌ಕೆ)–ಅಗತ್ಯ ಮೂಲ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಮೈಸೂರಿನ ಪೂರ್ವ ಭಾಗದ ಬಡಾವಣೆಗಳ ನಿವಾಸಿಗಳು ಇಂದು ಬೃಹತ್ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿ ಕಚೇರಿಯಲ್ಲಿ ಮನವಿ ಪತ್ರ ಸಲ್ಲಿಸಿದರು.

ಮೈಸೂರು ಪೂರ್ವ ಬಡಾವಣೆಗಳ ಒಕ್ಕೂಟದ ಅಧ್ಯಕ್ಷ ಎ.ಎಂ.ಬಾಬು ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡ 20 ವಸತಿ ಬಡಾವಣೆಗಳ ನೂರಾರು ನಿವಾಸಿಗಳು, ಮಾನಸಿನಗರದ ಮೆಗಾ ಡೈರಿಯಿಂದ ಕಾಲ್ನಡಿಗೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತಲುಪಿ ಎಡಿಸಿ ಶಿವರಾಜ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಶುದ್ಧ ಕುಡಿಯುವ ನೀರು, ಸ್ವಚ್ಛತೆ, ಒಳಚರಂಡಿ, ವಿದ್ಯುತ್ ಸಂಪರ್ಕ ಉದ್ಯಾನವನ ಸೇರಿದಂತೆ ತಮ್ಮ ಬಡಾವಣೆಗಳಿಗೆ ಮೂಲಸೌಕರ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದ ಪ್ರತಿಭಟನಾಕಾರರು, ತ್ಯಾಜ್ಯ ಶುದ್ಧೀಕರಣ ಘಟಕ, ರಾಜಕಾಲುವೆ ಒತ್ತುವರಿ ತೆರವುಗೊಳಿಸಿ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಕ್ರಮ ವಹಿಸಬೇಕು, ಸಾರಿಗೆ ಸಂಪರ್ಕ ಹೆಚ್ಚಿಸುವುದು, ಪೊಲೀಸ್ ಬೀಟ್ ವ್ಯವಸ್ಥೆ, ಗಿಡ ನೆಟ್ಟು ಹಸಿರೀಕರಣಗೊಳಿಸುವುದು, ಗ್ರಂಥಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಸ್ಮಶಾನಕ್ಕೆ ಸ್ಥಳ ಗುರುತಿಸಬೇಕೆಂದು ಆಗ್ರಹಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಬಳಿ ಕೆಲ ಸಮಯ ಪ್ರತಿಭಟನಾ ಧರಣಿ ನಡೆಸಿದ ನಿವಾಸಿಗಳು, ಅಪರ ಜಿಲ್ಲಾಧಿಕಾರಿ ಶಿವರಾಜ್ ಅವರಿಗೆ ಮನವಿ ಸಲ್ಲಿಸಿದರು.

ಒಕ್ಕೂಟದ ಉಪಾಧ್ಯಕ್ಷ ಎಂ.ಹೆಚ್. ಚೆಲುವೇಗೌಡ, ಕಾರ್ಯದರ್ಶಿ ಎಲ್.ಪ್ರಕಾಶ್, ಸಹ ಕಾರ್ಯದರ್ಶಿ ಎಂ.ಎಲ್.ಅರುಣ್, ಸಂಘಟನಾ ಕಾರ್ಯದರ್ಶಿ ಬೊಮ್ಮೇಗೌಡ, ಸಹ ಸಂಘಟನಾ ಕಾರ್ಯದರ್ಶಿ ಡಿ.ಕೃಷ್ಣೇಗೌಡ, ಖಜಾಂಚಿ ಹೆಚ್.ನರಸಿಂಹೇಗೌಡ, ಮಾಧ್ಯಮ ಕಾರ್ಯದರ್ಶಿ ಹೆಚ್.ಎಸ್. ರಾಘವೇಂದ್ರ ಭಟ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾಗಿ ಸುರೇಶ್ ಬಾಬು

ಜೆಡಿಎಸ್ ರಾಜ್ಯಾಧ್ಯಕ್ಷ, ಕೇಂದ್ರ ಸಚಿವ ಕುಮಾರಸ್ವಾಮಿ ಸೂಚನೆ ಆಧರಿಸಿ ಸ್ಪೀಕರ್ ಪ್ರಕಟ



ಬೆಂಗಳೂರು, ಜು.15(ಕೆಎಂಶಿ)– ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾಗಿ ಚಿಕ್ಕನಾಯಕನಹಳ್ಳಿ ಕ್ಷೇತ್ರದ ಶಾಸಕ ಸುರೇಶ್‌ಬಾಬು ಅವರನ್ನು ನೇಮಿಸಲಾಗಿದೆ.

ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರ ಸೂಚನೆ ಆಧರಿಸಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾಗಿ ನೇಮಿಸಿರುವುದನ್ನು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಸದನದಲ್ಲಿ ಪ್ರಕಟಿಸಿದರು. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಕ್ಷೇತ್ರದಿಂದ ನಾಲ್ಕನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಈ ಮೊದಲು ಎಚ್.ಡಿ.ಕುಮಾರಸ್ವಾಮಿ ಅವರು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾಗಿದ್ದರು. ಲೋಕಸಭಾ ಚುನಾವಣೆಯಲ್ಲಿ ಕುಮಾರಸ್ವಾಮಿ ಮಂಡ್ಯ ಕ್ಷೇತ್ರದಿಂದ ಸಂಸದರಾಗಿ ಆಯ್ಕೆಯಾದ ನಂತರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕನ ಸ್ಥಾನ ತೆರವಾಗಿತ್ತು.

ಪರೀಕ್ಷಾ ಕೇಂದ್ರದ ಸುತ್ತ ನಿಷೇಧಾಜ್ಞೆ

ಮೈಸೂರು,ಜು.15–ನಾರಾಯಣ ಶಾಸ್ತ್ರಿ ರಸ್ತೆಯ ಮಹಾರಾಣಿ ಟಿ.ಟಿ.ಐ. ಪ್ರಶಿಕ್ಷಣ ಸಂಸ್ಥೆಯಲ್ಲಿ ಜು.16ರಿಂದ 20 ರವರೆಗೆ ದ್ವಿತೀಯ ಡಿ.ಇಎಲ್.ಇಡಿ. ಮುಖ್ಯ ಪರೀಕ್ಷೆಗಳು ನಡೆಯಲಿದ್ದು, ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023 ಸೆಕ್ಷನ್ 163 ರೀತ್ಯ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆಯನ್ನು ಘೋಷಿಸಲಾಗಿದೆ. ಈ ಪ್ರದೇಶದಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್ ಮತ್ತು ಸೈಬರ್ ಕೇಂದ್ರಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ.

ಕಲಾತ್ಮಕವಾಗಿ ರೂಪಿಸಿರುವ ವಿಧಾನಸೌಧದ ಪಶ್ಚಿಮ ದ್ವಾರ ಉದ್ಘಾಟನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಇತರರು ಉಪಸ್ಥಿತಿ



ಕಲಾತ್ಮಕವಾಗಿ ಕುಸರಿ ಕೆತ್ತನೆಯಿಂದ ವಿನ್ಯಾಸಗೊಳಿಸಿ ಅಳವಡಿಸಿರುವ ವಿಧಾನಸೌಧದ ನವೀಕೃತ ಪಶ್ಚಿಮ ದ್ವಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಸಚಿವರು, ಶಾಸಕರು, ಅಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು.

ಬೆಂಗಳೂರು, ಜು.15(ಕೆಎಂಶಿ)–ಹೊಸದಾಗಿ ಬೀಟೆ ಮರದಲ್ಲಿ ಕಲಾತ್ಮಕವಾಗಿ ಕುಸರಿ ಕೆತ್ತನೆಯಿಂದ ವಿನ್ಯಾಸಗೊಳಿಸಿ ಅಳವಡಿಸಿರುವ ವಿಧಾನಸೌಧದ ನವೀಕೃತ ಪಶ್ಚಿಮ ದ್ವಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಸಚಿವರಾದ ಡಾ.ಜಿ.ಪರಮೇಶ್ವರ್, ಎಚ್.ಕೆ.ಪಾಟೀಲ್, ಪ್ರಿಯಾಂಕ್ ಖರ್ಗೆ, ಶಾಸಕರು, ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಪ್ಪ, ಮುಖ್ಯಕಾರ್ಯದರ್ಶಿ ಡಾ. ರಜನೀಶ್ ಗೋಯೆಲ್, ಹಿರಿಯ ಅಧಿಕಾರಿಗಳು ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಮುಡಾ ಹಗರಣ ಸಿಬಿಐ ತನಿಖೆಗೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ

- ವಾಲ್ಮೀಕಿ ನಿಗಮದ ಹಗರಣದ ಬಗ್ಗೆ ಮುಖ್ಯಮಂತ್ರಿ ಉತ್ತರಕ್ಕೂ ಆಗ್ರಹ
- ಶಾಸಕರ ಭವನದ ಸಮೀಪ ವಾಲ್ಮೀಕಿ ಪ್ರತಿಮೆ ಬಳಿ ಧರಣಿ



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ನೇತೃತ್ವದಲ್ಲಿ ಶಾಸಕರ ಭವನದ ಸಮೀಪ ಮಹರ್ಷಿ ವಾಲ್ಮೀಕಿ ಪ್ರತಿಮೆ ಬಳಿ ಬಿಜೆಪಿ ಪ್ರತಿಭಟನೆ ಹಮ್ಮಿಕೊಂಡಿತ್ತು.

ಬೆಂಗಳೂರು, ಜು.15(ಕೆಎಂಶಿ)–ಸಾವಿರಾರು ಕೋಟಿ ರೂ. ಮೊತ್ತದ ಮುಡಾ ಹಗರಣ ಮತ್ತು ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ದಲಿತರ ಹಣ ಲೂಟಿ ಹಗರಣಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಮಂಡಲದಲ್ಲಿ ಉತ್ತರ ಕೊಡಬೇಕು ಎಂದು ಆಗ್ರಹಿಸಿ ಬಿಜೆಪಿ ಇಂದಿಲ್ಲಿ ಪ್ರತಿಭಟನೆ ನಡೆಸಿತು.

ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ನೇತೃತ್ವದಲ್ಲಿ ಶಾಸಕರ ಭವನದ ಸಮೀಪ ಮಹರ್ಷಿ ವಾಲ್ಮೀಕಿ ಪ್ರತಿಮೆ ಬಳಿ ಬಿಜೆಪಿ ಪ್ರತಿಭಟನೆ ಹಮ್ಮಿಕೊಂಡಿತ್ತು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ಹಗರಣದ ತನಿಖೆಯನ್ನು ನಿವೃತ್ತ ನ್ಯಾಯಾಧೀಶರಿಂದ ನಡೆಸಿದರೆ ಸಾಲದು, ಮುಖ್ಯಮಂತ್ರಿಗಳಿಗೆ ನಿಜವಾಗಿ ತಾಕತ್ತಿದ್ದರೆ ಮುಡಾ ಹಗರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿಗಳ ಕುಟುಂಬವೇ ಹಗರಣದ ಪಾಲುದಾರರಾಗಿದ್ದು, ಸಾವಿರಾರು ಕೋಟಿ ರೂ. ಬೆಲೆಬಾಳುವ ನಿವೇಶನಗಳಿಗೆ ಸಂಬಂಧಿಸಿದಂತೆ ಮೈಸೂರು ಮುಡಾದಲ್ಲಿ ಹಗರಣ ನಡೆದಿದೆ. ಹಗರಣಗಳ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಲೇ ಬೇಕು. ಮುಡಾ ಹಗರಣ ಸಿಬಿಐ ತನಿಖೆಗೆ ಆಗ್ರಹಿಸಿ ಸದನದ ಹೊರಗೆ ಮತ್ತು ಒಳಗೆ ಹೋರಾಟ ಮುಂದುವರೆಯಲಿದೆ.

ಸಿದ್ದರಾಮಯ್ಯ ಅವರು ದಲಿತರ ಹೆಸರು ಹೇಳಿಕೊಂಡು, ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡದವರಿಗೆ ನ್ಯಾಯ ಕೊಡುವುದಾಗಿ ಅಧಿಕಾರಕ್ಕೆ ಬಂದವರು. ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನೇ ಲೂಟಿ ಮಾಡಿದ್ದಲ್ಲದೆ, ಆ ಹಣದಲ್ಲಿ ಲೋಕಸಭಾ ಚುನಾವಣೆ ನಡೆಸಿದ್ದಾರೆ.

ಈ ಹಗರಣಗಳಿಂದ ಮುಖ್ಯಮಂತ್ರಿ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ಬಣ್ಣ ಬಯಲಾಗಿದೆ, ಮುಖ್ಯಮಂತ್ರಿ ಸ್ಥಾನದಲ್ಲಿ ಕೂರುವ ನೈತಿಕತೆಯನ್ನು ಸಿದ್ದರಾಮಯ್ಯ ಕಳೆದುಕೊಂಡಿದ್ದಾರೆ ಎಂದರು.


ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಅಕ್ರಮ ವರ್ಗಾವಣೆ ಹಗರಣದಲ್ಲಿ ಮಾಜಿ ಸಚಿವ ಬಿ.ನಾಗೇಂದ್ರ ಇ.ಡಿ. ಕಸ್ಟಡಿಯಲ್ಲಿದ್ದಾರೆ. ನಿಗಮದ ಅಧ್ಯಕ್ಷ ಹಾಗೂ ಶಾಸಕ ಬಸನಗೌಡ ದದ್ದಲ್ ಕಾಣೆಯಾಗಿದ್ದಾರೆ. ಆತ್ಮಹತ್ಯೆ ಮಾಡಿಕೊಂಡ ವಾಲ್ಮೀಕಿ ನಿಗಮದ ಅಧಿಕಾರಿಯೂ ದಲಿತರೇ ಆಗಿದ್ದಾರೆ. ಕಾಂಗ್ರೆಸ್ಸಿಗೆ ದಲಿತರ ವೋಟು ಬೇಕು, ದಲಿತರ ನೋಟು ಬೇಕು, ದಲಿತರ ಸಾವೂ ಬೇಕು, ಇದು ಕಾಂಗ್ರೆಸ್ ನೀತಿ ಎಂದು ಟೀಕಿಸಿದರು.

ನಮ್ಮ ಮೇಲೆ ದಬ್ಬಾಳಿಕೆ ಮಾಡುವ ಮತ್ತು ಹೆದರಿಸುವ ಕೆಲಸ ಮಾಡಬೇಡಿ, ಮುಡಾದಲ್ಲಿ ಯಾವ್ಯಾವ ಸರ್ಕಾರದಲ್ಲಿ ಹಗರಣ ನಡೆದಿದ್ದರೂ ಎಲ್ಲ ಸೇರಿಸಿ ಸಿಬಿಐ ತನಿಖೆಗೆ ಒಪ್ಪಿಸಿ. ರಾಜ್ಯ ಸರ್ಕಾರ ನೈತಿಕವಾಗಿ ಸತ್ತು ಹೋಗಿದೆ. ಮುಖ್ಯಮಂತ್ರಿ ರಾಜೀನಾಮೆ ಕೊಡಬೇಕಿತ್ತು. ಯಾವ ಮುಖ ಇಟ್ಟುಕೊಂಡು ವಿಧಾನ ಸೌಧಕ್ಕೆ ಬರುತ್ತಾರೋ ಅರ್ಥ ಆಗುತ್ತಿಲ್ಲ ಎಂದು ಆಕ್ಷೇಪಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಅಧಿಕಾರಿಗಳು ಕಾರಣ ಎನ್ನುವ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು, ಆರೋಪಿತ ಶಾಸಕರಿಗೆ ಕ್ಲೀನ್‌ಚಿಟ್ ಕೊಡುವ ಕೆಲಸ ಮಾಡುತ್ತಿದ್ದಾರೆ. ಭ್ರಷ್ಟಾಚಾರರಹಿತ ಆಡಳಿತ ಕೊಡುವುದಾಗಿ ಹೇಳಿದ ಕಾಂಗ್ರೆಸ್ಸಿಗರ ಬಣ್ಣ ಬಯಲಾಗಿದೆ ಎಂದು ಟೀಕಿಸಿದರು.

ಮುಖ್ಯಮಂತ್ರಿಗಳು ನಿಜವಾಗಿ ಪ್ರಾಮಾಣಿಕರಾಗಿದ್ದರೆ, ನಿಷ್ಪಕ್ಷಪಾತ ತನಿಖೆಗೆ ಮುಡಾ ಹಗರಣವನ್ನು ಸಿಬಿಐಗೆ ಒಪ್ಪಿಸಬೇಕು. ವಾಲ್ಮೀಕಿ ನಿಗಮ ಹಗರಣ ಸಂಬಂಧ ಪ್ರತಿಪಕ್ಷಗಳು ನಿಲುವಳಿ ಸೂಚನೆ ಮಂಡಿಸಲಿವೆ. ಸದನದಲ್ಲಿ ಚರ್ಚೆ ನಡೆಯಲೇಬೇಕು, ಮುಖ್ಯಮಂತ್ರಿಗಳು ಉತ್ತರ ಕೊಡಲೇಬೇಕು ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

16.07.2024 ಮಂಗಳವಾರ, ಮಳೆ ನಕ್ಷತ್ರ: ಪುನರ್ವಸು 6.07.2024 ರಿಂದ 19.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ: ವಿಶಾಖ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆಲ್ಕೋಹಾಲ್‌ನಿಂದ ಉಂಟಾಗುವ ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.
- **ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ), ರಾಷ್ಟ್ರೀಯ ಸೇವಾ ಯೋಜನೆ, ವಿದ್ಯಾವರ್ಧಕ ಪದವಿಪೂರ್ವ ಕಾಲೇಜು :** ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳ ಕಾರ್ಯಕ್ರಮಾಧಿಕಾರಿಗಳಿಗೆ ಪುನಶ್ಚೇತನ ಕಾರ್ಯಾಗಾರ, ಅಧ್ಯಕ್ಷತೆ : ರಾಷ್ಟ್ರೀಯ ಸೇವಾ ಯೋಜನೆ ಪ್ರಾಂತೀಯ ನಿರ್ದೇಶಕ ಡಿ. ಕಾರ್ತಿಕೇಯನ್, ಉದ್ಘಾಟನೆ : ಎನ್‌ಎಸ್‌ಎಸ್ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ, ವಿಶೇಷ ಆಹ್ವಾನಿತರು : ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಯುವಜನ ಅಧಿಕಾರಿ ವೈ.ಎಸ್. ಉಪ್ಪಿನ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಮರಿಸ್ವಾಮಿ, ಸಂಯೋಜನಾಧಿಕಾರಿ ಡಾ. ರಮೇಶ್ ಗುಬ್ಬಿಗೂಡು, ಡಾ. ಟಿ.ಕೆ. ರವಿ (ಮೈಸೂರು ವಿಭಾಗ), ಶ್ರೀಮತಿ ಸವಿತಾ ಎರ್ಮಾಳ್ (ಮಂಗಳೂರು ವಿಭಾಗ), ಹರೀಶ್ (ಹಾಸನ ವಿಭಾಗ), ಮೈಸೂರು–ಮಹೇಶ್, ಮಂಡ್ಯ–ಎಸ್.ಪಿ. ಕ್ಯಾತೇಗೌಡ, ಚಾಮರಾಜನಗರ–ಪ್ರಭುಸ್ವಾಮಿ, ಉಡುಪಿ–ಜಯಶಂಕರ್, ದ. ಕನ್ನಡ–ಅರುಣ್ ಕುಮಾರ್, ಕೊಡಗು–ಶಿವಕುಮಾರ್, ಹಾಸನ–ಲಕ್ಷ್ಮಿನಾರಾಯಣ, ಚಿಕ್ಕಮಗಳೂರು–ಶ್ರೀಧರ್, ಸ್ಥಳ: ವಿದ್ಯಾವರ್ಧಕ ಪದವಿಪೂರ್ವ ಕಾಲೇಜು, ಬೆಳಗ್ಗೆ 9.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ತಿಮ್ಮಯ್ಯ ಕೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಶ್ರದ್ಧೆಯ ಶಿಲ್ಪ'–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಜಯಂತಿ ವಿ. ಭಟ್, ವ್ಯಾಖ್ಯಾನ : ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ : ಉಮೇಶ್ ಎಸ್. ಎಸ್, 8.30 ಹೊಸ ಭಾರತೀಯ ನ್ಯಾಯ ಸಂಹಿತೆ–ಈ ಕುರಿತು ಚರ್ಚೆ, ಧರ್ಮೇಂದ್ರ, ವಕೀಲರು, ಮೈಸೂರು, ಆನಂದಕುಮಾರ್, ವಕೀಲರು, ಮೈಸೂರು, ಸೂರ್ಯಕುಮಾರ್, ವಕೀಲರು, ಮೈಸೂರು, ಚರ್ಚೆಯನ್ನು ನಡೆಸಿಕೊಡುತ್ತಾರೆ : ಎಂ.ಎನ್. ಸುಮನಾ, ಹಿರಿಯ ವಕೀಲರು, ಮೈಸೂರು, 9.00 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಿ. ಪಶುಪತಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

ಮಧ್ಯಾಹ್ನ: 12.05 ವನಿತಾ ವಿಹಾರ : ಹೀಗಿದೆ ನೋಡಿ ನಮ್ ಜೋಡಿ, ಪ್ರಸ್ತುತಿ : ಅಬ್ದುಲ್ ರಶೀದ್, 12.30 ದೇವರನಾಮ–ಆಲಾಪ್. ಬಿ.ಆರ್, 12.45 ಕನ್ನಡದಲ್ಲಿ ಭಾಷಣ, 1.20 ಭಾವಗೀತೆಗಳು–ಎಂ. ರಾಘವೇಂದ್ರ – ಹಾಡುಗಾರಿಕೆ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಯು. ಶ್ರೀನಿವಾಸ್ –ಮ್ಯಾಂಡೋಲಿನ್, 4.00 ಕಥಾ ಕಾಲಕ್ಷೇಪ–ಗಿರಿಜಾ ಕಲ್ಯಾಣ, ಪ್ರಸ್ತುತಿ: ವಿದ್ವಾನ್. ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ರೇಷ್ಮೆ ಹುಳು ಸಾಕಣಾ ಮನೆಯ ವಾತಾವರಣ ನಿರ್ವಹಣೆ. ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಎಲ್. ಕುಸುಮಾ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 8.00 ಕ್ರೀಡಾಲೋಕ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಬಿ.ವಿ. ದುರ್ಗಾ ಭಾವಾನಿ – ಹಾಡುಗಾರಿಕೆ, 10.00 ಚೈತ್ರವನ ಲಕ್ಷೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ– ಹೆಚ್. ಎಲ್. ಶ್ರೀಕಂಠ, ವ್ಯಾಖ್ಯಾನ : ಹೆಚ್.ಎಸ್. ಗೋಪಾಲ್, ಪ್ರಸ್ತುತಿ: ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

ಕರ್ನಾಟಕ ಬಯಲಾಟ ಅಕಾಡೆಮಿ ಸಹ ಸದಸ್ಯರಾಗಿ ಡಾ.ಚೇತನಾ

ಮೈಸೂರು, ಜು.15– ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕಿ, ಜಾನಪದ ವಿಭಾಗದ ಮುಖ್ಯಸ್ಥೆ ಡಾ.ಹೆಚ್.ಆರ್.ಚೇತನಾ ಅವರು ಬಾಗಲಕೋಟೆಯಲ್ಲಿರುವ ಕರ್ನಾಟಕ ಬಯಲಾಟ ಅಕಾಡೆಮಿಯ ಸಹ–ಸದಸ್ಯರನ್ನಾಗಿ ನೇಮಿಸಿ, ಅಕಾಡೆಮಿ ಅಧ್ಯಕ್ಷ ಕೆ.ಆರ್.ದುರ್ಗಾದಾಸ್ ಆದೇಶ ಹೊರಡಿಸಿದ್ದಾರೆ. ಚೇತನಾ ಅವರು ಸಂಶೋಧಕರಾಗಿ, ಬೋಧಕರಾಗಿ ಜಾನಪದ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದು, ಗ್ರಾಮಾಂತರಂಗ, ಕನ್ನಡದ ವೆರಿಯಾರ್ ಎಲ್ವಿನ್ ಹೆಚ್.ಎಲ್. ನಾಗೇಗೌಡ ಕೃತಿಗಳನ್ನು ಪ್ರಕಟಿಸಿದ್ದಾರೆ. ದಕ್ಷಿಣ ಕರ್ನಾಟಕದ ಜಾನಪದ ನೃತ್ಯಗಳು, ಸಮುದ್ರ ರಾಜನ ಮಗಳು ಮತ್ತು ಇತರ ಜನಪದ ಕತೆಗಳು, ಹೆಳವರು ಹೇಳಿದ ಕರಿರಾಜನ ಕತೆ, ಕುವೆಂಪು ಸಾಹಿತ್ಯದಲ್ಲಿ ಕುಟುಂಬ ಪರಿಕಲ್ಪನೆ, ಮೂಡಲಪಾಯ ಯಕ್ಷಗಾನ ಸೇರಿದಂತೆ 15ಕ್ಕೂ ಹೆಚ್ಚು ಸಂಶೋಧನಾ ಕೃತಿಗಳು, ವಿಮರ್ಶಾ ಕೃತಿಗಳು, ಸಂಕಲನಗಳು ಹಾಗೂ ಸಂಪಾದನಾ ಕೃತಿಗಳನ್ನು ಹೊರತಂದಿದ್ದಾರೆ.



ಆ.30ರೊಳಗೆ ಮೈಸೂರು ಪ್ಲಾಸ್ಟಿಕ್ ಮುಕ್ತ ನಗರ!

ಮೈಸೂರು, ಜು.15(ಎಸ್‌ಪಿಎನ್)– ಏಕಬಳಕೆ ಪ್ಲಾಸ್ಟಿಕ್ ವಸ್ತುಗಳ ಮಾರಾಟ ಹಾಗೂ ಬಳಕೆಯನ್ನು ನಿಷೇಧಿಸಿ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಮಂಡಳಿ (ಎನ್‌ಜಿಟಿ) ನೀಡಿರುವ ತೀರ್ಪನ್ನು ಆ.30ರಿಂದ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲು ಮೈಸೂರು ನಗರ ಪಾಲಿಕೆಯ ವಲಯ ಕಚೇರಿ–03ರ ಸಿಬ್ಬಂದಿ ವರ್ಗ ಸರ್ವ ಸನ್ನದ್ಧರಾಗಿದ್ದಾರೆ.

ಈ ಕುರಿತು ವಲಯ ಕಚೇರಿ –3ರ ಆಯುಕ್ತ ಟಿ.ಎಸ್.ಸತ್ಯಮೂರ್ತಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿ, ನಮ್ಮ ವಲಯ ವ್ಯಾಪ್ತಿಯಲ್ಲಿ ಅಂದಾಜು 48 ಸಾವಿರ ಕುಟುಂಬಗಳು ವಾಸವಿದ್ದು, ಎಲ್ಲರಿಗೂ 5 ಕೆಜಿ ಮತ್ತು 10 ಕೆಜಿ ತೂಕದ ಸಾಮಗ್ರಿ ಶೇಖರಣೆಯಾಗುವ ಬಟ್ಟೆ ಬ್ಯಾಗ್‌ಗಳನ್ನು ಪ್ರತಿ ಮನೆ ಮನೆಗೂ ಆ.15 ರೊಳಗೆ ವಿತರಿಸಲಾಗುವುದು. ನಂತರ ಆ.30ರವರೆಗೆ ಪ್ರಮುಖ ಪಾರ್ಕ್, ವೃತ್ತ, ಶಾಲಾ–ಕಾಲೇಜು ಸೇರಿದಂತೆ ಇತರೆ ಸ್ಥಳಗಳಲ್ಲಿ ಏಕಬಳಕೆ ಪ್ಲಾಸ್ಟಿಕ್ ವಸ್ತುಗಳಿಂದ ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮಗಳ ಕುರಿತು ಮಾಹಿತಿ ನೀಡಿ, ಸಾರ್ವಜನಿಕರನ್ನು ಜಾಗೃತಗೊಳಿಸಲಾಗುವುದು ಎಂದು ತಿಳಿಸಿದರು.

500ರಿಂದ 5 ಸಾವಿರದವರೆಗೆ ದಂಡ: ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳ ಮಾರಾಟ ಹಾಗೂ ಬಳಕೆ ಮಾಡದಂತೆ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಘನ ತ್ಯಾಜ್ಯ ನಿರ್ವಹಣೆ ನಿಯಮ–2016ರ ನಿಯಮಗಳನ್ನು ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೆ ತರಲು ಅಂಗಡಿ ಮಾಲೀಕರಿಗೆ, ಬೀದಿ ಬದಿ ವ್ಯಾಪಾರಿಗಳು. ಹೋಟೆಲ್‌ಗಳಲ್ಲಿ ಪ್ಲಾಸ್ಟಿಕ್ ಬಳಕೆ ಮಾಡಿ ಸ್ಥಳದಲ್ಲಿ ಸಿಕ್ಕಿ ಬಿದ್ದಲ್ಲಿ 5 ಸಾವಿರ ದಂಡ ವಿಧಿಸಲಾಗುವುದು. ಅಂತೆಯೇ ಇದನ್ನು ಬಳಕೆ ಮಾಡುವ ಗ್ರಾಹಕರಿಗೂ 500 ರೂ. ದಂಡ ವಿಧಿಸಲಾಗುವುದು. ಹಾಗಾಗಿ ಸಾರ್ವಜನಿಕರು ಬೀದಿ ಬದಿ, ಅಂಗಡಿಗಳಲ್ಲಿ ಮತ್ತು ಹೋಟೆಲ್‌ಗಳಲ್ಲಿ ಸಾಮಾನು ಖರೀದಿಸಿ, ಮನೆಗೆ ಒಯ್ಯಲು ಬಟ್ಟೆ ಬ್ಯಾಗ್ ಬಳಕೆ ಮಾಡುವಂತೆ ಸಲಹೆ ನೀಡಿದರು.

ರೂ.500 ದಂಡ ಗ್ಯಾರಂಟಿ: ಮೈಸೂರಿನ ಸಾರ್ವಜನಿಕರು ತಮ್ಮ ಮನೆಗಳಲ್ಲಿ ಕಳೆದ 25 ವರ್ಷಗಳ ಹಿಂದೆ ಬಳಕೆ ಮಾಡಿರುವ ಪ್ಲಾಸ್ಟಿಕ್ ತ್ಯಾಜ್ಯ, ಈಗಲೂ ಸಿವೇಜ್ ಫಾರಂನಲ್ಲಿ (ತ್ಯಾಜ್ಯ ಘಟಕ) ಕರಗದೇ ಬೆಟ್ಟದಷ್ಟು ಶೇಖರಣೆ ಆಗಿದೆ. ಹಾಗಾಗಿ ಮನೆಯಿಂದಲೇ ಸಂಗ್ರಹವಾಗುವ ಒಣ ಕಸ, ಹಸಿ ಕಸ ಬೇರ್ಪಡಿಸಿ ಪೌರಕಾರ್ಮಿಕರಿಗೆ ನೀಡಬೇಕು. ಆಗೊಂದು ವೇಳೆ ನೀಡದಿದ್ದಲ್ಲಿ ಆ.30ರ ನಂತರ ಒಣ ಕಸ, ಹಸಿ ಕಸ ಬೇರ್ಪಡಿಸದ ಮಾಲೀಕರಿಗೆ ಮೊದಲು ಎಚ್ಚರಿಕೆ ನೀಡಲಾಗುವುದು. ನಂತರ ಇದೇ ವರ್ತನೆ ಪುನರಾವರ್ತನೆಗೊಂಡರೆ ಆ ಮನೆಯವರಿಗೆ ರೂ.500 ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಪೌರಕಾರ್ಮಿಕರಿಗೆ ಜವಾಬ್ದಾರಿ: ಸಾರ್ವಜನಿಕ ಸ್ಥಳ, ಚರಂಡಿ, ಖಾಲಿ ನಿವೇಶನದಲ್ಲಿ ಪದೇಪದೆ ತ್ಯಾಜ್ಯ ಎಸೆಯುವ ಜಾಗದಲ್ಲಿ ಈಗಾಗಲೇ ಎಚ್ಚರಿಕಾ ಫಲಕಗಳನ್ನು ಅಳವಡಿಸಿದ್ದು, ಪದೇ ಪದೆ ಅಲ್ಲಿ ತ್ಯಾಜ್ಯ ಎಸೆಯುವವರನ್ನು ಪತ್ತೆ ಹಚ್ಚಲು ಆಯಾಯ ಭಾಗದ ಪೌರಕಾರ್ಮಿಕರಿಗೆ ಜವಾಬ್ದಾರಿ ನೀಡಲಾಗಿದೆ. ತೊಣಚಿಕೊಪ್ಪಲಿನ ಬಿಎಸ್‌ಎನ್‌ಎಲ್ ಕಚೇರಿ ರಸ್ತೆಯ ದೊಡ್ಡ ತಾಯಮ್ಮ ದೇವಸ್ಥಾನದ ಮುಂಭಾಗದ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಕೆಳಗೆ ಇಲ್ಲಿನ ನಿವಾಸಿಗಳು ತ್ಯಾಜ್ಯ ಸುರಿಯುತ್ತಿದ್ದರು. ಕಳೆದ ಮೂರು ದಿನಗಳ ಹಿಂದೆ ಎಚ್ಚರಿಕಾ ಫಲಕ ಅಳವಡಿಸಿದ್ದಕ್ಕೆ ತ್ಯಾಜ್ಯ ಸುರಿಯುವವರ ಸಂಖ್ಯೆ ಕಡಿಮೆಯಾಗಿದೆ ಎಂದು ಫೋಟೋ ಸಮೇತ ಮಾಹಿತಿ ನೀಡಿದರು.

ದಾನಿಗಳಿಂದ ಬಟ್ಟೆ ಬ್ಯಾಗ್‌ಗಳ ಸಂಗ್ರಹ: ನಮ್ಮ ವಲಯ ವ್ಯಾಪ್ತಿಯ ಜನರಿಗೆ ಬಟ್ಟೆ ಬ್ಯಾಗ್‌ಗಳನ್ನು ವಿತರಿಸಲು ಹಲವು ಸಂಘ–ಸಂಸ್ಥೆಗಳು, ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಮುಂದೆ ಬಂದು ಬಟ್ಟೆ ಬ್ಯಾಗ್‌ಗಳನ್ನು ದೇಣಿಯಾಗಿ ನೀಡಿದ್ದಾರೆ. ಇಲ್ಲಿಯವರೆಗೆ ಮಹೇಶ್ ಪ್ರಸಾದ್ ಹೋಟೆಲ್‌ನ ರವಿನಂದನ್ ಶೆಟ್ಟಿ ಅವರಿಂದ ಸಾವಿರ ಬ್ಯಾಗ್, ಅಮ್ಮ ಸಂಸ್ಥೆಯ ಸಂತೋಷ್‌ರಿಂದ ಮೂರು ಸಾವಿರ, ಭೂಮಿ ನಾರಾಯಣ್ 500 ಬ್ಯಾಗ್, ದಟ್ಟಗಳ್ಳಿ ಹೆಚ್.ಬ್ಲಾಕ್ ನಿವಾಸಿಗಳಿಂದ 500 ಬ್ಯಾಗ್, ಕೌಟಿಲ್ಯ ವಿದ್ಯಾಸಂಸ್ಥೆಯ ಬಾಬುರಿಂದ 4 ಸಾವಿರ, ದಟ್ಟಗಳ್ಳಿ ನಮಿತರಿಂದ ಸಾವಿರ ಬ್ಯಾಗ್, ಆ್ಯಂಥಮ್ ಸ್ಪೋರ್ಟ್ಸ್‌ನಿಂದ 600 ಬ್ಯಾಗ್, ಮುತ್ತುಕುಮಾರ್ 1500 ಬ್ಯಾಗ್ ಸೇರಿದಂತೆ ಒಟ್ಟು 12600 ಬ್ಯಾಗ್‌ಗಳನ್ನು ದೇಣಿಗೆ ನೀಡಿದ್ದಾರೆ ಎಂದರು.

ಹೂಳು ತೆರವು: ನಮ್ಮ ವಲಯ ವ್ಯಾಪ್ತಿಯ ಬಡಾವಣೆಗಳಲ್ಲಿ ಯುಜಿಡಿ ಪೈಪ್‌ಲೈನ್‌ಗೆ ಮಳೆ ನೀರು ಸಂಪರ್ಕ ಕಲ್ಪಿಸಿರುವುದನ್ನು ಪತ್ತೆ ಹಚ್ಚುವ ಕಾರ್ಯ ಹಾಗೂ ಮಳೆ ನೀರು ಹರಿಯುವ ಚರಂಡಿಗಳಲ್ಲಿ ತುಂಬಿಕೊಂಡಿರುವ ಹೂಳು ತೆಗೆಯುವ ಕಾರ್ಯಕ್ಕೂ ಚಾಲನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿರುವ ನಗರ ಪಾಲಿಕೆ ಆಡಳಿತ



ಮೈಸೂರಿನಲ್ಲಿ ಬಟ್ಟೆ ಬ್ಯಾಗ್ ವಿತರಿಸುವ ಸಂಬಂಧ ಹೋಟೆಲ್ ಉದ್ಯಮಿ ರವಿನಂದನ್ ಶೆಟ್ಟಿ ಅವರು, ವಲಯ ಕಚೇರಿ–3ರ ಆಯುಕ್ತ ಟಿ.ಎಸ್.ಸತ್ಯಮೂರ್ತಿ ಅವರಿಗೆ ಬಟ್ಟೆಬ್ಯಾಗ್‌ಗಳನ್ನು ಹಸ್ತಾಂತರಿಸಿದರು.

> ಮೈಸೂರು ನಗರವನ್ನು ಹಂತ ಹಂತವಾಗಿ ಪ್ಲಾಸ್ಟಿಕ್ ಮುಕ್ತ ನಗರವಾಗಿಸಲು ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ನೇತೃತ್ವದಲ್ಲಿ ಹಲವು ಸುತ್ತಿನ ಅಧಿಕಾರಿಗಳ ಸಭೆ ನಡೆಸಲಾಗಿದೆ. ಆ.30ರೊಳಗೆ ಸಾಂಸ್ಕೃತಿಕ ನಗರಿ ಮೈಸೂರನ್ನು ಪ್ಲಾಸ್ಟಿಕ್ ಮುಕ್ತ ನಗರವಾಗಿಸಲು ಎಲ್ಲಾ ವ್ಯಾಪ್ತಿಯ ವಲಯ ಕಚೇರಿಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೆ ತಾಕೀತು ಮಾಡಿದ್ದು, ಈ ನಿಟ್ಟಿನಲ್ಲಿ ವಲಯ ಕಚೇರಿ–3ರ ವ್ಯಾಪ್ತಿಯ ಸಿಬ್ಬಂದಿಗಳು ಕಾರ್ಯ ಪ್ರವೃತ್ತರಾಗಿದ್ದೇವೆ.
> -ಟಿ.ಎಸ್. ಸತ್ಯಮೂರ್ತಿ, ಆಯುಕ್ತರು, ವಲಯ ಕಚೇರಿ–3

ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಸದಸ್ಯರಿಗೆ ಶೇ.25ರಷ್ಟು ಡಿವಿಡೆಂಡ್



ಮೈಸೂರಿನ ಜಗನ್ಮೋಹನ ಅರಮನೆ ರಸ್ತೆಯಲ್ಲಿರುವ ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕಿನ 65ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಹಿರಿಯ ಸದಸ್ಯರನ್ನು ಸನ್ಮಾನಿಸಲಾಯಿತು.


ಮೈಸೂರು, ಜು.15(ಎಸ್‌ಬಿಡಿ)– ಮೈಸೂರಿನ ಜಗನ್ಮೋಹನ ಅರಮನೆ ರಸ್ತೆಯಲ್ಲಿರುವ ದಿ ಮೈಸೂರು ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕ್‌ನ ಸದಸ್ಯರಿಗೆ ಶೇ.25ರಷ್ಟು ಡಿವಿಡೆಂಡ್ ಘೋಷಿಸಲಾಗಿದೆ.

ಮೈಸೂರು ಜೆ.ಪಿ.ನಗರದ ಸಭಾಂಗಣವೊಂದರಲ್ಲಿ ಭಾನುವಾರ ನಡೆದ 65ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಬ್ಯಾಂಕ್ ಅಧ್ಯಕ್ಷ ಆರ್.ಆನಂದ್ ಈ ಘೋಷಣೆ ಮಾಡಿದರು.

2023–24ನೇ ಸಾಲಿನಲ್ಲಿ ಬ್ಯಾಂಕ್‌ಗೆ ಒಟ್ಟು 9.69 ಕೋಟಿ ರೂ. ಲಾಭ ಬಂದಿದ್ದು, ಇದರಲ್ಲಿ 3.34 ಕೋಟಿ ರೂ. ಆದಾಯ ತೆರಿಗೆ ಪಾವತಿಸಲಾಗಿದೆ. ಇನ್ನು 6.35 ಕೋಟಿ ರೂ. ನಿವ್ವಳ ಲಾಭ ದೊರೆತಿದೆ. ಇದರಲ್ಲಿ ಶೇ.25ರಷ್ಟನ್ನು ಬ್ಯಾಂಕ್‌ನ ಸದಸ್ಯರಿಗೆ ಡಿವಿಡೆಂಡ್ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಬ್ಯಾಂಕ್‌ನ ಉಪಾಧ್ಯಕ್ಷ ಕೆ.ಪ್ರೇಮಕುಮಾರ್, ನಿರ್ದೇಶಕರಾದ ಬಿ.ಆರ್.ನಂದೀಶ್, ಸಿ.ವಿ.ಸೋಮಶೇಖರ್, ಬಿ.ಆರ್.ನಂದೀಶ್, ಬಿ.ಕೋದಂಡರಾಮ್, ಎ.ಪ್ರಭುಪ್ರಸಾದ್, ಆರ್.ಪಿ.ಕೃಷ್ಣಮೂರ್ತಿ, ಎಂ.ಎನ್.ಮಹೇಶ್, ಎನ್.ಕಣ್ಣನ್, ಎನ್.ರಾಘವ, ಎಸ್.ರಾಚಪ್ಪಾಜಿ, ಎನ್.ಸುಧಾ, ಸಿ.ಎಸ್.ಗಂಗಾಬಿಕೆ, ಎಂ.ಆರ್.ವಿಜಯಲಕ್ಷ್ಮಿ, ಅನುರಾಧ ಹಾಗೂ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಶ್ರೀಧರ್ ಬಿ.ಕುಲಕರ್ಣಿ ಭಾಗವಹಿಸಿದ್ದರು.

ಬಸ್ ಟಿಕೆಟ್ ದರ ಸದ್ಯಕ್ಕೆ ಹೆಚ್ಚಳ ಇಲ್ಲ

ಬೆಂಗಳೂರು: ಪೆಟ್ರೋಲ್, ಹಾಲಿನ ದರ ಏರಿಕೆ ಬೆನ್ನಲ್ಲೇ ಸಾಮಾನ್ಯ ಜನರು ಪ್ರಯಾಣಿಸುವ ಬಸ್ ಟಿಕೆಟ್ ದರವೂ ಏರಿಕೆಯಾಗುತ್ತದೆ ಎಂಬ ಆತಂಕದಲ್ಲಿದ್ದು, ಅದಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸದ್ಯಕ್ಕೆ ಬಸ್ ಟಿಕೆಟ್ ದರ ಏರಿಕೆಯಿಲ್ಲ ಎಂದಿದ್ದಾರೆ.



ವಿಧಾನಸೌಧ'ದ'ಲ್ಲಿ ಇಂದು ಮುಂಗಾರು ಅಧಿವೇಶನ ಆರಂಭಕ್ಕೆ ಮುನ್ನ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ರಾಜುಕಾಗೆ ದರ ಏರಿಕೆ ಬಗ್ಗೆ ಹೇಳಿರುವುದು ಅವರ ವೈಯಕ್ತಿಕ ಅಭಿಪ್ರಾಯ. ಸದ್ಯ ಬಸ್ ಟಿಕೆಟ್ ದರ ಏರಿಕೆ ಪ್ರಸ್ತಾವನೆ ನಮ್ಮ ಮುಂದಿಲ್ಲ ಎಂದು ತಿಳಿಸಿದರು. ನಿನ್ನೆ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ್ದ ರಾಜುಕಾಗೆ ಮತ್ತು ಕೆಎಸ್‌ಆರ್‌ಟಿಸಿ ನಿಗಮ ಅಧ್ಯಕ್ಷ ಶ್ರೀನಿವಾಸ್ ಅವರು ದರ ಏರಿಕೆಯ ಬಗ್ಗೆ ಮಾತನಾಡಿದ್ದರು.

ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆ ನಷ್ಟದಲ್ಲಿದೆ. ಡೀಸೆಲ್ ಹಾಗೂ ಬಸ್ ಬಿಡಿ ಭಾಗಗಳ ದರ ಕೂಡ ಹೆಚ್ಚಾಗಿದೆ. ಕಳೆದ 10 ವರ್ಷಗಳಿಂದ ಟಿಕೆಟ್ ದರ ಏರಿಕೆ ಮಾಡಿಲ್ಲ. ಶಕ್ತಿ ಯೋಜನೆಯಿಂದ ನಾವು ನಷ್ಟದಲ್ಲಿದ್ದೇವೆ. ಆದರೂ ನಾವು ನಡೆಸಿಕೊಂಡು ಹೋಗುತ್ತಿದ್ದೇವೆ ಎಂದು ಹೇಳಿಕೆ ನೀಡಿದ್ದರು. ಕಳೆದ ತ್ರೈಮಾಸಿಕದಲ್ಲಿ 295 ಕೋಟಿ ರೂ. ನಷ್ಟವಾಗಿದೆ. ಟಿಕೆಟ್ ದರ ಏರಿಸದೇ ಇದ್ದರೆ ಕೆಎಸ್‌ಆರ್‌ಟಿಸಿ ಸಂಸ್ಥೆ ಉಳಿಯುವುದಿಲ್ಲ. ಸದ್ಯದಲ್ಲೇ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರ ಹೆಚ್ಚಳ ಮಾಡಲಾಗುವುದು. ಮೊನ್ನೆ ನಿಗಮದ ಮೀಟಿಂಗ್ ಮುಗಿದಿದ್ದು ಶೇಕಡಾ 15ರಿಂದ 20 ದರ ಹೆಚ್ಚಳ ಮಾಡುವ ಪ್ರಸ್ತಾವನೆಯನ್ನು ಸಿಎಂ ಮುಂದೆ ಇಟ್ಟಿದ್ದೇವೆ ಎಂದು ಹೇಳಿದ್ದರು.

ಬಿಜೆಪಿ ಸಹಕಾರ ಪ್ರಕೋಷ್ಠಕ್ಕೆ ನೇಮಕ



ಮೈಸೂರಿನ ಬಿಜೆಪಿ ಮುಖಂಡ ಎಸ್.ಶ್ರೀನಿವಾಸ್ ಅವರನ್ನು ಪಕ್ಷದ ಸಹಕಾರ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯರನ್ನಾಗಿ ನೇಮಕ ಮಾಡಿದ್ದು, ಇವರು ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ಪ್ರಕೋಷ್ಠ ಸಂಯೋಜಕ ದತ್ತಾತ್ರೇಯ ಮತ್ತು ಸಹ ಸಂಯೋಜಕರಾದ ಎನ್.ವಿ.ಫಣೀಶ್, ಸಹಕಾರ ಪ್ರಕೋಷ್ಠದ ರಾಜ್ಯ ಸಂಚಾಲಕ ಹೆಚ್.ಕೆ.ಶಿವಕುಮಾರ್, ರಾಜ್ಯ ಸಹ ಸಂಚಾಲಕ ಸಂಜಯ್ ಪಾಟೀಲ್ ಸಮ್ಮುಖದಲ್ಲಿ ನೇಮಕಾತಿ ಪತ್ರ ಸ್ವೀಕರಿಸಿದರು.

ನಾಳೆಯಿಂದ ಪಾರಂಪರಿಕ ಕಟ್ಟಡಗಳ ಸುತ್ತ ಸ್ವಚ್ಛತೆ

ಮೈಸೂರು, ಜು.15(ಎಂಕೆ)– ಸಂಸದರೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೇತೃತ್ವದಲ್ಲಿ ನಮ್ಮ ಮೈಸೂರು ಫೌಂಡೇಶನ್ ಸಹಯೋಗದೊಂದಿಗೆ ಜು.17 ರಿಂದ ಪಾರಂಪರಿಕ ಕಟ್ಟಡಗಳ ಸುತ್ತಲೂ ಸ್ವಚ್ಛತಾ(ಡ್ರೈ ವೇಸ್ಟ್ ಕ್ಲಬ್) ಅಭಿಯಾನ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಪಾರಂಪರಿಕ ಕಟ್ಟಡಗಳಾದ ಮಹಾರಾಜ ಮತ್ತು ಯುವರಾಜ ಕಾಲೇಜು, ಮಾನಸ ಗಂಗೋತ್ರಿ ಆವರಣ ಹಾಗೂ ಕಾಡಾ ಕಚೇರಿ ಸುತ್ತಮುತ್ತಲೂ ಸ್ವಚ್ಛತಾ ಅಭಿಯಾನ ನಡೆಯಲಿದೆ. ಅಂದು ಬೆಳಗ್ಗೆ 7 ಗಂಟೆಗೆ ಮಾನಸ ಗಂಗೋತ್ರಿ ಆವರಣದಲ್ಲಿ ಅಭಿಯಾನಕ್ಕೆ ಚಾಲನೆ ದೊರೆಯಲಿದ್ದು, ಸಂಸದರೊಂದಿಗೆ ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು, ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬಿಜೆಪಿ ಮಹಿಳಾ ಮೋರ್ಚಾಗೆ ನೇಮಕ



ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷರಾಗಿ ನೇಮಕಗೊಂಡಿರುವ ಮೈಸೂರಿನ ಡಾ.ಪ್ರಫುಲ್ಲ ಮಲ್ಲಾಡಿ ಅವರು ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ಮಹಿಳಾ ರಾಜ್ಯ ಘಟಕದ ಅಧ್ಯಕ್ಷೆ ಮಂಜುಳಾರಿಂದ ನೇಮಕಾತಿ ಪತ್ರ ಸ್ವೀಕರಿಸಿದರು.

ನಾನು ನಾಪತ್ತೆ ಆಗಿಲ್ಲ, ಯಾವುದೇ ನೋಟಿಸ್ ಬಂದಿಲ್ಲ


ಕಲಾಪಕ್ಕೆ ಬಂದ ಬಸನಗೌಡ ದದ್ದಲ್

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ, ರಾಯಚೂರು ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರು ರಾಜ್ಯ ವಿಧಾನಮಂಡಲ ಅಧಿವೇಶನಕ್ಕೆ ಹಾಜರಾಗಿದ್ದು, 'ನಾನು ನಾಪತ್ತೆ ಆಗಿರಲಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.




ವಾಲ್ಮೀಕಿ ಅಭಿವೃದ್ಧಿ ನಿಗಮ ಅಕ್ರಮ ಹಣ ವರ್ಗಾವಣೆ ಆರೋಪ ಎದುರಿಸುತ್ತಿರುವ ಬಸನಗೌಡ ದದ್ದಲ್, ಕಳೆದ ಕೆಲ ದಿನಗಳಿಂದ ಸಂಪರ್ಕಕ್ಕೆ ಸಿಕ್ಕಿರಲಿಲ್ಲ ಎಂಬ ಮಾತುಗಳು ಕೇಳಿ ಬಂದಿತ್ತು. ವಿಧಾನಸಭೆ ಅಧಿವೇಶನಕ್ಕೆ ತೆರಳುತ್ತಿರುವಾಗ ಈ ಸಂಬಂಧ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಅವರು, 'ನಾನು ಎಲ್ಲೂ ಹೋಗಿಲ್ಲ. ಎರಡು ದಿನ ಊರಲ್ಲಿ ಇದ್ದೆ' ಎಂದು ಸ್ಪಷ್ಟನೆ ನೀಡಿದ್ದಾರೆ. ನನಗೆ ಯಾವುದೇ ನೋಟಿಸ್ ಕೊಟ್ಟಿಲ್ಲ. ಈಗ ವಿಧಾನಸಭೆ ಅಧಿವೇಶನಕ್ಕೆ ಹೋಗುತ್ತಿದ್ದೇನೆ. ನಾನು ನಾಪತ್ತೆಯಾಗಿರಲಿಲ್ಲ ಎಂದು ತಿಳಿಸಿದರು. ವಾಲ್ಮೀಕಿ ಅಭಿವೃದ್ಧಿ ನಿಗಮ ಅಕ್ರಮ ಹಣ ವರ್ಗಾವಣೆ ಆರೋಪ ಸಂಬಂಧ ನಿಗಮದ ಅಧ್ಯಕ್ಷರಾಗಿರುವ ದದ್ದಲ್ ಅವರನ್ನೂ ಇ.ಡಿ. ವಿಚಾರಣೆ ನಡೆಸಬಹುದು ಎಂಬ ಮಾತುಗಳು ಕೇಳಿ ಬಂದಿತ್ತು.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	106.20 ಅಡಿ
ಒಳಹರಿವು	19202 ಕ್ಯೂಸೆಕ್
ಹೊರಹರಿವು	2284 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಸೋಮವಾರ	2282.36 ಅಡಿ
ಒಳಹರಿವು	20217 ಕ್ಯೂಸೆಕ್
ಹೊರಹರಿವು	25000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2854.77 ಅಡಿ
ಒಳಹರಿವು	8866 ಕ್ಯೂಸೆಕ್
ಹೊರಹರಿವು	20000 ಕ್ಯೂಸೆಕ್

ಶ್ರೀಮತಿ ನಿಂಗಮ್ಮ ನಿಧನ

ಮೈಸೂರು, ಜು. 15– ಮೈಸೂರಿನ ಯರಗನಹಳ್ಳಿ ನಿವಾಸಿ ಎಂ. ಮಾದೇಗೌಡರ ಪತ್ನಿ ಶ್ರೀಮತಿ ನಿಂಗಮ್ಮ(66) ಭಾನುವಾರ ನಿಧನರಾದರು. ಮೃತರು ಪತಿ, ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಭಾನುವಾರ ಯರಗನಹಳ್ಳಿಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಪಾರಂಪರಿಕ ತಜ್ಞರ ಆಕ್ಷೇಪಗಳ ನಡುವೆಯೂ 'ದೊಡ್ಡ ಗಡಿಯಾರ' ಸಂರಕ್ಷಣಾ ಕಾರ್ಯ

ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುವ ವಿಶ್ವಾಸ

● ಮೋಹನ್ ಕಾಯಕ

ಮೈಸೂರು, ಜು.15– ಅರಮನೆ ನಗರಿ ಮೈಸೂರಿನ ಹೃದಯ ಭಾಗದಲ್ಲಿರುವ ಐತಿಹಾಸಿಕ ದೊಡ್ಡ ಗಡಿಯಾರದ ಸಂರಕ್ಷಣಾ ಕಾಮಗಾರಿ ಪಾರಂಪರಿಕ ತಜ್ಞರ ಆಕ್ಷೇಪಗಳ ನಡುವೆಯೂ ಬಹುತೇಕ ಪೂರ್ಣಗೊಂಡಿದ್ದು, ಸದ್ಯದಲ್ಲಿಯೇ ತನ್ನ 94 ವರ್ಷಗಳ ಪಯಣವನ್ನು ಮುಂದುವರೆಸಲಿದೆ.

1927ರ ಆಗಸ್ಟ್ 8ರಂದು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಆಳ್ವಿಕೆಯ 25ನೇ(ಸಿಲ್ವರ್ ಜೂಬಿಲಿ) ವರ್ಷದ ನೆನಪಿಗಾಗಿ ಪುರಭವನದ ಎದುರು 75 ಅಡಿ ಎತ್ತರದ ಈ ಪಾರಂಪರಿಕ ದೊಡ್ಡ ಗಡಿಯಾರ ನಿರ್ಮಾಣ ಕಾರ್ಯಾರಂಭವಾಯಿತು. ಕ್ಲಾಕ್ ಟವರ್‌ನ ನಾಲ್ಕು 'ಕಡೆಯಲ್ಲೂ ವೃತ್ತಾಕಾರದ ಗಡಿಯಾರವಿದ್ದು, ಕನ್ನಡ ಅಂಕಿಗಳ ಬಳಕೆಯೊಂದಿಗೆ ಭಾಷಾಭಿಮಾನವನ್ನು ಬಿಂಬಿಸುವಂತೆ ನಿರ್ಮಿಸಲಾಗಿತ್ತು.

ಪ್ರತಿ ಗಂಟೆಗೊಮ್ಮೆ ಗಡಿಯಾರದ ಗಂಟೆ ಶಬ್ದ 5 ಕಿ.ಮೀ. ವರೆಗೆ ಕೇಳಿಸುತ್ತಿತ್ತು. ಕಾಲ ಕ್ರಮೇಣ ಈ ಗಡಿಯಾರವು ದುರಸ್ತಿಗೊಳಗಾಗಿದ್ದು, 1990ರ ನಂತರ ಗಡಿಯಾರ ತನ್ನ ಶಬ್ದವನ್ನು ನಿಲ್ಲಿಸಿತಾದರೂ, ಸಮಯವನ್ನು ಮಾತ್ರ ಸರಿಯಾಗಿ ತೋರಿಸುತ್ತಿತ್ತು. ಪಾರಂಪರಿಕ ದೊಡ್ಡ ಗಡಿಯಾರವನ್ನು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಕಳೆದ ವರ್ಷದಿಂದ ಆರಂಭವಾದ ನವೀಕರಣ ಕಾರ್ಯ ಬಹುತೇಕ ಮುಕ್ತಾಯಗೊಂಡಿದ್ದು, ಮಳೆ ಬಿಡುವು ನೀಡಿದರೆ 15–20 ದಿನಗಳಲ್ಲಿ ಕಾಮಗಾರಿ ಸಂಪೂರ್ಣವಾಗಲಿದೆ.

ಪಾರಂಪರಿಕ ತಜ್ಞರ ಬೇಸರ...

ದೊಡ್ಡ ಗಡಿಯಾರ ಸಂರಕ್ಷಣೆ ಸರಿಯಾದ ರೀತಿಯಲ್ಲಿ ಆಗಿಲ್ಲ. ಕೆಲ ಭಾಗದಲ್ಲಿ ಹೆಗ್ಗಣಗಳು ಕೊರೆದಿದ್ದ ಜಾಗವನ್ನು ಚಪ್ಪಡಿ ಕಲ್ಲುಗಳನ್ನು ಹಾಕಿ ಮುಚ್ಚಿದ್ದರೆ, ಲಾನ್ ಮಾಡಬಹುದಿತ್ತು. ಆದರೆ ಎಂ–ಸ್ಯಾಂಡ್–ಸಿಮೆಂಟ್ ಬಳಸಿ ಮುಚ್ಚಿದ್ದಾರೆ. ಅಲ್ಲದೆ ದೊಡ್ಡ ಗಡಿಯಾರದ ಸುತ್ತಲೂ ಇದ್ದ ಗೋಡೆ ಸಂರಕ್ಷಣೆಗೂ ಎಂ–ಸ್ಯಾಂಡ್ ಬಳಕೆ ಮಾಡಿದ್ದಾರೆ. ಹಳೆ ಸುಣ್ಣದ ಗಾರೆಗೆ ಎಂ–ಸ್ಯಾಂಡ್ ಹೊಂದಿಕೊಳ್ಳುವುದಿಲ್ಲ ಎಂದು ಹೇಳಿದರೂ ಗುತ್ತಿಗೆದಾರರು ಯಾವುದಕ್ಕೂ ಪ್ರತಿಕ್ರಿಯೆ ನೀಡುತ್ತಿಲ್ಲ ಎಂದು ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಸುಣ್ಣ, ಮರಳು, ಮರವಜ್ರ, ಕೋಳಿಮೊಟ್ಟೆ, ಬೆಲ್ಲದ ಪಾಕ, ಅಂಟುವಾಳ ಕಾಯಿ ಸೇರಿಸಿ ಅರೆದ ಸುಣ್ಣದ ಗಾರೆ ತಯಾರಿಸಬೇಕು. ಆದರೆ ಅದನ್ನು ಬಿಟ್ಟು ಎಂ–ಸ್ಯಾಂಡ್ ಮತ್ತು ಸಿಮೆಂಟ್‌ನಲ್ಲಿಯೇ ಕಾಮಗಾರಿ ನಡೆಸುತ್ತಿದ್ದಾರೆ ಎಂದು ದೂರಿದರು.

ಮೈಸೂರು ಮಹಾನಗರ ಪಾಲಿಕೆಯ ಸುಮಾರು 42 ಲಕ್ಷ ರೂ. ಅನುದಾನದಲ್ಲಿ 2023ರ ಆಗಸ್ಟ್ ತಿಂಗಳಿಂದ ಆರಂಭಗೊಂಡ ದೊಡ್ಡ ಗಡಿಯಾರದ ಸಂರಕ್ಷಣಾ ಕಾರ್ಯವನ್ನು ಕಟ್ಟಡ ಪಾರಂಪರಿಕತೆಗೆ ಧಕ್ಕೆಯಾಗದಂತೆ ಪಾರಂಪರಿಕ ಕಟ್ಟಡದ ನವೀಕರಣ ನಿಯಮಾವಳಿಗಳಿಗೆ ಅನುಗುಣವಾಗಿ ಕಾಮಗಾರಿ ನಡೆದಿದೆ. ಮಳೆ ಬಿಡುವು ನೀಡದಿದ್ದರೆ ತಿಂಗಳ ಅವಧಿಯಲ್ಲಿ ಕಾಮಗಾರಿ ಪೂರ್ಣವಾಗಲಿದೆ ಎಂದು ಪುರಾತತ್ವ ವಸ್ತು ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆಯ ಆಯುಕ್ತ ಎ.ದೇವರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸುಣ್ಣದ ಗಾರೆ, ನದಿ ತಟದ ಮರಳು ಬಳಕೆ: ಪಾರಂಪರಿಕ ದೊಡ್ಡ ಗಡಿಯಾರ ನವೀಕರಣಕ್ಕೆ ಸುಣ್ಣದ ಗಾರೆ ಹಾಗೂ ನದಿ ತಟದ ಮರಳು ಬಳಕೆ ಮಾಡಲಾಗಿದೆ. ನೆಲದಲ್ಲಿ ಹೆಗ್ಗಣಗಳು ಕೊರೆದಿದ್ದ ಜಾಗವನ್ನು ಮುಚ್ಚಲು ಎಂ–ಸ್ಯಾಂಡ್ ಬಳಕೆ ಮಾಡಲಾಗಿದೆ. ಮೈಸೂರು ಪೋಸ್ಟಲ್ ಟ್ರೈನಿಂಗ್(ಅಂಚೆ ಪ್ರಶಿಕ್ಷಣ) ಕಾಲೇಜಿನಲ್ಲಿ ನಡೆಯುತ್ತಿರುವ ನವೀಕರಣ ಕಾಮಗಾರಿಯಲ್ಲಿಯೂ ಸುಣ್ಣದ ಗಾರೆ ಬಳಸುತ್ತಿದ್ದು, ಅಲ್ಲಿಂದಲೇ ಸುಣ್ಣದ ಗಾರೆ ತಂದು ದೊಡ್ಡ ಗಡಿಯಾರಕ್ಕೆ ಬಳಸಲಾಗಿದೆ ಎಂದು ಮಾಹಿತಿ ನೀಡಿದರು.

ತಜ್ಞರ ಸಲಹೆ ಪಡೆಯಲಾಗಿದೆ: ಜಯಲಕ್ಷ್ಮಿ ಪ್ಯಾಲೆಸ್ ಸಂರಕ್ಷಣೆ ಕಾರ್ಯದಲ್ಲಿರುವ ಡೆಕ್ಕನ್ ಹೆರಿಟೇಜ್ ಅವರ ಸಲಹೆ ಸೇರಿದಂತೆ ಮೈಸೂರಿನ ಪಾರಂಪರಿಕ ತಜ್ಞರ ಸಲಹೆಯನ್ನು ಪಡೆದು ದೊಡ್ಡ ಗಡಿಯಾರ ಸಂರಕ್ಷಣೆ ಮಾಡಲಾಗಿದೆ. ಪಾರಂಪರಿಕ ಶೈಲಿಗೆ ಕಿಂಚಿತ್ತೂ ಧಕ್ಕೆ ಬಾರದಂತೆ ಸಂರಕ್ಷಣಾ ಕಾಮಗಾರಿ ನಡೆದಿದೆ. ಅದೇ ರೀತಿ ಪೂರ್ಣಗೊಳ್ಳಲಿದೆ. ಕ್ಲಾಕ್ ಟವರ್‌ನ ಕಿಟಕಿ, ಗಾಜುಗಳು, ಫ್ರೇಂ, ಶಟ್ಟರ್‌ಗಳು, ಪ್ಲಾಟ್ ಫಾರಂ ಮೇಲಿನ ಕಲ್ಲಿನ ನೆಲಹಾಸುಗಳನ್ನು ನಿಗದಿಪಡಿಸಿರುವ ಸಲಕರಣೆಗಳನ್ನೇ ಬಳಸಿಕೊಂಡು ಸಂರಕ್ಷಣೆ ಮಾಡಲಾಗಿದೆ ಎಂದು ಹೇಳಿದರು.

ನಿರ್ವಹಣೆ ಪಾಲಿಕೆಯದ್ದು: ದೊಡ್ಡ ಗಡಿಯಾರ ಕಟ್ಟಡದಲ್ಲಿನ ಗಡಿಯಾರದ ನಿರ್ವಹಣೆ ಪಾಲಿಕೆಯದ್ದಾಗಿದೆ. ಈ ಮೊದಲೇ ಗಡಿಯಾರ ನಿಂತಿದ್ದು, ಕಾಮಗಾರಿ ಪೂರ್ಣಗೊಂಡ ಬಳಿಕ ಮತ್ತೆ ನಡೆಯುವಂತೆ ಮಾಡಲಿದ್ದಾರೆ. ಗಡಿಯಾರದ ನಿರ್ವಹಣೆಯ ಜವಾಬ್ದಾರಿಯನ್ನು ಈಗಾಗಲೇ ಪಾಲಿಕೆ ಒಬ್ಬರಿಗೆ ನೀಡಿರುವ ಮಾಹಿತಿ ಇದೆ ಎಂದು ತಿಳಿಸಿದರು.



ದೊಡ್ಡ ಗಡಿಯಾರದ ಮೇಲಿನ ಗಂಟೆ ಸುತ್ತಲೂ ಮೊದಲಿನಂತೆಯೇ ಇದ್ದ ಬಣ್ಣದ ಕಲರ್ ಬಳಸಿ ಪೇಂಟಿಂಗ್ ಮಾಡಿದ್ದಾರೆ. ಗಂಟೆಯ ಸುತ್ತಲೂ ನಾಲ್ಕು ಗುಮ್ಮಟಗಳಿದ್ದು, ಅವುಗಳಲ್ಲಿ ಒಂದೆರಡು ಹಾಳಾಗಿದ್ದವು. ಅದೇ ರೀತಿಯ ಗುಮ್ಮಟಗಳನ್ನು ಮಾಡಿ ಎಂದರೆ ಇದ್ದಂತಹ ಗುಮ್ಮಟಗಳನ್ನು ತೆಗೆದು ಹಾಕಿದ್ದಾರೆ. ಇಂತಹವರಿಗ್ಯಾಕೆ ಗುತ್ತಿಗೆ ನೀಡಬೇಕಿತ್ತು. ಪಾರಂಪರಿಕ ಕಟ್ಟಡಗಳ ಬಗ್ಗೆ ಅರಿವಿಲ್ಲದವರಿಗೆ ಗುತ್ತಿಗೆ ನೀಡುವ ಬದಲು ಪರಂಪರೆ ಇಲಾಖೆಯೇ ಸಂರಕ್ಷಣೆ ಮಾಡಬಹುದಿತ್ತು.
- ಪ್ರೊ.ಎನ್.ಎಸ್.ರಂಗರಾಜು, ಪಾರಂಪರಿಕ ತಜ್ಞ

ನಕ್ಕರೆ ಅದೇ ಸ್ವರ್ಗ

ಆತ : ಪ್ರತಿದಿನ ಆಫೀಸಿಗೆ ಲೇಟಾಗಿ ಬರುತ್ತಿದ್ದವನು ಈ ದಿನ ಬೇಗ ಬಂದಿದ್ದಿಯಲ್ಲಾ ಯಾಕೆ?

ಈತ : ಹೆಂಡತಿ ಮಕ್ಕಳೆಲ್ಲಾ ಊರಿಗೆ ಹೋಗಿದ್ದಾರೆ. ತಿಂಡಿ ಅಡುಗೆ ನನಗೊಬ್ಬನಿಗೇ, ಹಾಗಾಗಿ ಕೆಲಸ ಬೇಗ ಮುಗೀತಿದೆ.

ಮೈಸೂರು ಮಿತ್ರ

ಮಂಗಳವಾರ, 16 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ದಿನವಿಡೀ ಕೆಲಸ ಮಾಡೋದು ಮತ್ತು ರಾತ್ರಿ ಉಳಿದಿರುವ ಜೀವನದ ಬಗ್ಗೆ ಯೋಚಿಸೋದು 'ಇಷ್ಟೇ ಜೀವನ' – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಶಿಗೆ ಹೋದರೂ ಕರ್ಮ ಸವೆಯಲಿಲ್ಲ

ನಿಮ್ಮ ಪತ್ರಗಳು

■ ಹೆಬ್ಬಾಳಿನ ಸೂರ್ಯ ಬೇಕರಿ ವೃತ್ತಕ್ಕೆ ಆರಕ್ಷಕರನ್ನು ನಿಯೋಜಿಸಿ

ಮಾನ್ಯರೆ,

ಮೈಸೂರಿನ ಹೆಬ್ಬಾಳ್‌ನಲ್ಲಿರುವ ಸೂರ್ಯ ಬೇಕರಿ ವೃತ್ತ ಸದಾಕಾಲ ಜನ ಹಾಗೂ ಭಾರಿ ವಾಹನ ದಟ್ಟಣೆಯಿಂದ ಕೂಡಿದ್ದು, ಇಲ್ಲಿಂದ ವಿಜಯನಗರ, ಇನ್ಫೋಸಿಸ್, ಮುಂಚೇಗೌಡನ ಕೊಪ್ಪಲು, ಕುಂಬಾರ ಕೊಪ್ಪಲು ಸೇರಿದಂತೆ ಹಲವೆಡೆಗೆ ಸಂಪರ್ಕ ಕೇಂದ್ರವಾಗಿದೆ. ಇಲ್ಲಿಂದ ವಿವಿಧ ಶಾಲಾ ಕಾಲೇಜುಗಳಿಗೆ, ಗಾರ್ಮೆಂಟ್ಸ್‌ಗಳಿಗೆ, ಕೈಗಾರಿಕೆಗಳಿಗೆ ದಿನನಿತ್ಯ ಸಾವಿರಾರು ಜನರು ಪ್ರಯಾಣಿಸುತ್ತಾರೆ. ನಗರ ಸಾರಿಗೆ ಬಸ್ಸುಗಳು, ಕಾರ್ಖಾನೆ ವಾಹನಗಳು, ದ್ವಿಚಕ್ರ ವಾಹನಗಳು ಇದೇ ಮಾರ್ಗವಾಗಿ ಚಲಿಸಬೇಕು.

ಈ ವೃತ್ತವು ತೀರಾ ಚಿಕ್ಕದಾಗಿದ್ದು ವೃತ್ತದಲ್ಲೇ ಇರುವ ಬಾರ್‌ನಲ್ಲಿ ಕುಡಿದವರು ಅಡ್ಡಾದಿಡ್ಡಿ ಓಡಾಡುತ್ತಾ, ರಸ್ತೆ ಸರ್ವೇ ಮಾಡೋದು ಇಲ್ಲಿ ಮಾಮೂಲು. ಅದರಲ್ಲೂ ದ್ವಿಚಕ್ರ ವಾಹನಗಳನ್ನು ಈ ವೃತ್ತದಲ್ಲಿ ಅಡ್ಡಾದಿಡ್ಡಿ ನಿಲ್ಲಿಸುವುದರಿಂದ ಸಂಚಾರ ಸಹ ಕಷ್ಟವಾಗುತ್ತಿದೆ ಬೆಳಗ್ಗೆ ಹಾಗೂ ಸಂಜೆ ನಾಲ್ಕು ದಿಕ್ಕುಗಳಲ್ಲೂ ಜನರು ಜಾತ್ರೆಯಂತೆ ಸೇರುತ್ತಾರೆ. ಇದರಿಂದ ಅಪಘಾತಗಳು ಸಾಮಾನ್ಯವಾಗಿವೆ. ಶಾಲಾ ಮಕ್ಕಳು, ಮಹಿಳಾ ಕಾರ್ಮಿಕರು, ಹಿರಿಯರು ಹೆಚ್ಚಾಗಿ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಸೂರ್ಯ ಬೇಕರಿ ವೃತ್ತಕ್ಕೆ ಒಬ್ಬರು ಸಂಚಾರ ಪೊಲೀಸರನ್ನು ನೇಮಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟು ಅಪಘಾತ ಮುಕ್ತ ವಲಯವನ್ನಾಗಿಸಲು ಕ್ರಮ ಕೈಗೊಳ್ಳಿ ಎಂದು ಪೊಲೀಸ್ ಆಯುಕ್ತರಲ್ಲಿ ಮನವಿ.

–ನಾಗೇಂದ್ರ ಕಿಲಗೆರೆ, ಮೈಸೂರು.

■ ಇಂಡಿಯಾ ಮೈತ್ರಿಕೂಟದ ಮುನ್ನಡೆ


ಮಾನ್ಯರೆ,

ಕಳೆದ ಲೋಕಸಭಾ ಚುನಾವಣೆಯಲ್ಲಿ 234 ಸ್ಥಾನಗಳನ್ನು ಗಳಿಸಿ ಭಾರತೀಯ ಜನತಾ ಪಕ್ಷ ನೇತೃತ್ವದ ಎನ್‌ಡಿಎ ಕೂಟಕ್ಕೆ ಪ್ರಬಲ ಸ್ಪರ್ಧೆಹೊಡ್ಡಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ ಇತ್ತೀಚೆಗೆ ಏಳು ರಾಜ್ಯಗಳ 13 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ 10 ಸ್ಥಾನಗಳನ್ನು ಗಳಿಸುವ ಮೂಲಕ, ತನ್ನ ಗೆಲುವಿನ ನಾಗಾಲೋಟವನ್ನು ಮುಂದುವರೆಸಿರುವುದು ಗಮನಾರ್ಹವಾಗಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ, ಕೇವಲ ಎರಡು ಸ್ಥಾನಗಳನ್ನು ಗಳಿಸಿದೆ.

ಪಶ್ಚಿಮ ಬಂಗಾಳ 4, ಹಿಮಾಚಲ ಪ್ರದೇಶ 3, ಉತ್ತರಾಖಂಡ್ 2 ಹಾಗೂ ಪಂಜಾಬ್, ಮಧ್ಯಪ್ರದೇಶ, ಬಿಹಾರ ಮತ್ತು ತಮಿಳುನಾಡಿನ ತಲಾ ಒಂದು ವಿಧಾನ ಸಭಾ ಕ್ಷೇತ್ರಗಳಲ್ಲಿ ಉಪ ಚುನಾವಣೆ ನಡೆದಿತ್ತು. ಇವುಗಳ ಪೈಕಿ, ಹಿಮಾಚಲ ಪ್ರದೇಶದ ಹಮೀರ್‌ಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಅಶಿಶ್ ಶರ್ಮ ಗೆಲುವು ಸಾಧಿಸಿದ್ದಾರೆ. ಅದೇ ರೀತಿ ಅಮರವಾರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ಕಮಲೇಶ್ ಪ್ರತಾಪ್ ಶಾ ಅವರು ಗೆಲುವಿನ ನಗೆ ಬೀರಿದ್ದಾರೆ. ಉಳಿದ 10 ಕ್ಷೇತ್ರಗಳು ಇಂಡಿಯಾ ಮೈತ್ರಿಕೂಟದ ಅಭ್ಯರ್ಥಿಗಳ ಪಾಲಾಗಿದೆ. ಒಂದು ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಜಯಗಳಿಸಿದ್ದಾರೆ. ವಿರೋಧ ಪಕ್ಷಗಳ ಈ ಗೆಲುವು 'ಇಂಡಿಯಾ' ಮೈತ್ರಿಕೂಟವನ್ನು ಸದೃಢಗೊಳಿಸುವಲ್ಲಿ ಸಹಕಾರಿಯಾಗಿದ್ದು, ಇದೇ ರೀತಿಯ ಒಗ್ಗಟ್ಟನ್ನು ಇಂಡಿಯಾ ಮೈತ್ರಿಕೂಟದ ಪಕ್ಷಗಳು ಕಾಪಾಡಿಕೊಂಡರೆ, ಮುಂಬರುವ ವರ್ಷಗಳಲ್ಲಿ ಆಡಳಿತಾರೂಢ ಮೈತ್ರಿಕೂಟಕ್ಕೆ ಪ್ರಬಲವಾದ ಸ್ಪರ್ಧೆ ನೀಡಬಹುದು. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ, ಪ್ರಬಲವಾದ ಪ್ರತಿಪಕ್ಷಗಳು ಇರಲೇಬೇಕು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು

■ ಗುಂಡ್ಲುಪೇಟೆ : ನಾಮಫಲಕದಲ್ಲಿ ಸರಿಪಡಿಸಿ



ಮಾನ್ಯರೆ,

ನಂಜನಗೂಡು ನಗರದ ಸುಜಾತಪುರಂ ರೈಲ್ವೆ ನಿಲ್ದಾಣದ ಹತ್ತಿರ ನಿರ್ಮಿಸಲಾಗಿರುವ ಮೇಲ್ಸೇತುವೆ ಬಳಿ ಗುಂಡ್ಲುಪೇಟೆ ಮತ್ತು ಚಾಮರಾಜನಗರಗಳಿಗೆ ಹಾದು ಹೋಗುವತ್ತ ಮಾರ್ಗಸೂಚಿ ನಾಮಫಲಕಗಳಲ್ಲಿ ಗುಂಡ್ಲುಪೇಟೆ ಬದಲಾಗಿ (ಗುಂಡ್ಲಪೇಟ್) ಚಾಮರಾಜ ನಗರ (ಚಾಮಾರಾಜನಗರ) ಎಂತಲೂ ಅಸಂಬದ್ಧವಾಗಿ ಬರೆಯಲಾಗಿದೆ. ಈ ರೀತಿ ನಾಮಫಲಕಗಳನ್ನು ಅಳವಡಿಸುವವರು ಬಲ್ಲವರಿಂದ ತಿಳಿದಾದರೂ ಸರಿಯಾಗಿ ಹಾಕಬೇಕು. ಸಾಮಾನ್ಯವಾಗಿ ಎಲ್ಲಾ ಹೆದ್ದಾರಿ ಫಲಕಗಳಲ್ಲಿಯೂ ಹೀಗೆ ಲೋಪದೋಷಗಳು ಕಂಡುಬರುತ್ತಿವೆ. ಇಂತಹ ಫಲಕಗಳ ನೋಡನೋಡುತ್ತಲೇ ಓಡಾಡುವ ನಮಗೆ ಏನೂ ಅನ್ನಿಸುವುದೇ ಇಲ್ಲ. ಯಾಕೆಂದರೆ ನವೆಂಬರ್‌ಗೆ ಇನ್ನೂ ಮೂರ್ನಾಲ್ಕು ತಿಂಗಳಿದೆಯಲ್ಲ!

–ಮ.ಗು.ಬಸವಣ್ಣ, ಜೆಎಸ್‌ಎಸ್ ಬಡಾವಣೆ, ಮೈಸೂರು.

■ ಭ್ರಷ್ಟಾಚಾರದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಲಿ

ಮಾನ್ಯರೇ

ಒಂದು ವರ್ಷ ಪೂರೈಸಿದ ಸಿದ್ದರಾಮಯ್ಯನವರ 2.0 ಸರ್ಕಾರಕ್ಕೆ ಈಗ ವಾಲ್ಮೀಕಿ ನಿಗಮದ ಭ್ರಷ್ಟಾಚಾರ ಹಾಗೂ ಮೈಸೂರು ಮುಡಾ ಹಗರಣ ತಲೆನೋವಾಗಿ ಪರಿಣಮಿಸಿದೆ.ಈಗಾಗಲೇ ತಮ್ಮ ಮೊದಲ ಅವಧಿಯ(2013–2018) ಕಟ್ಟುನಿಟ್ಟಿನ, ದರ್ಪದ ಆಡಳಿತ ಈಗ ಇನ್ನೊಂದು ಬಣದ ಮೂಗುದಾರದಿಂದ ಸಾಧ್ಯವಾಗುತ್ತಿಲ್ಲ ಎನ್ನುವುದು ಮುಖ್ಯಮಂತ್ರಿಗಳ ಮಾತಿನಿಂದಲೇ ಅರಿಯಬಹುದಾಗಿದೆ.

ಇಂತಹ ಬೃಹತ್ ಹಗರಣವನ್ನೂ ಕಾಟಾಚಾರದಿಂದ ನಿರ್ವಹಿಸುತ್ತಿರುವ ಬಿಜೆಪಿ ಕೇವಲ ಫೋಟೋಗಳಿಗೆ, ಮಾಧ್ಯಮಗಳ ಹೇಳಿಕೆಗಳಿಗೆ ಸೀಮಿತವಾಗಿರುವುದು ರಾಜ್ಯದ ಜನತೆಗೆ ಆದರಲ್ಲೂ ಸ್ವತಃ ಬಿಜೆಪಿ ಅಭಿಮಾನಿಗಳಿಗೆ ಭ್ರಮನಿರಸನ ತಂದಿದೆ.

ಇದನ್ನು ಮನಗಂಡು ಬಿಜೆಪಿ ವರಿಷ್ಠರು (ಹೈಕಮಾಂಡ್) ರಾಧಾ ಮೋಹನ್‌ದಾಸ್ ಅವರ ಮೂಲಕ ರಾಜ್ಯ ನಾಯಕರಿಗೆ ತಾಕೀತು ಮಾಡಿ, ಈ ಎರಡೂ ಹಗರಣವನ್ನೂ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವಂತೆ ಕಟ್ಟಪ್ಪಣೆ ಮಾಡಿದ್ದಾರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಸರ್ಕಾರದೊಂದಿಗೆ ಅಡ್ಜಸ್ಟ್‌ಮೆಂಟ್ ರಾಜಕೀಯ ಮಾಡಿಕೊಂಡು ಪಕ್ಷ ನಡೆಸುತ್ತಿರುವ ಕೆಲವು ಭಾರತೀಯ ಜನತಾ ಪಕ್ಷದ ರಾಜ್ಯ ನಾಯಕರಿಗೆ ಇದು ಎಚ್ಚರಿಕೆಯ ಗಂಟೆಯೂ ಹೌದು.

ಒಟ್ಟಿನಲ್ಲಿ ಭ್ರಷ್ಟಾಚಾರದಲ್ಲಿ ಸರ್ಕಾರದ ಪಾತ್ರ, ಮುಖ್ಯಮಂತ್ರಿ ಅಥವಾ ಯಾವುದೇ ಮಂತ್ರಿಗಳು, ರಾಜಕಾರಣಿಗಳ ಪಾತ್ರವಿದ್ದರೆ ಮುಲಾಜಿಲ್ಲದೆ ಶಿಕ್ಷೆಯಾಗಬೇಕೆಂಬುದು ಸಾರ್ವಜನಿಕರ ಅಭಿಪ್ರಾಯ, ಹಾಗೆಯೇ ಒತ್ತಾಸೆಯೂ ಕೂಡ ಆಗಿದೆ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು



ಜೆ.ಬಿ.ರಂಗಸ್ವಾಮಿ
ನಿವೃತ್ತ ಪೊಲೀಸ್ ಅಧಿಕಾರಿ
ಮೊ: 94490 10009

ಪ್ರಸ್ತುತ

ಕುಸ್ತಿ ಕಂಠೀರವ ಪೈ.ಪಾಪಣ್ಣನ ಪ್ರತಾಪಕ್ಕೆ ಬೆರಗಾದ ನಾಲ್ವಡಿ!

1910 ರ ದಶಕವೆಂದರೆ ಮೈಸೂರಿನ ಇತಿಹಾಸದಲ್ಲಿ ಸುವರ್ಣ ಕಾಲ. ವಿದ್ಯೆ, ವ್ಯವಸಾಯ, ಕೈಗಾರಿಕೆ, ಕಲೆ, ಸಂಗೀತ ಯಾವುದೇ ಕ್ಷೇತ್ರವನ್ನು ನೋಡಿ. ಎಲ್ಲಕ್ಕೂ ಉಚ್ಛ್ರಾಯ ಕಾಲ. ನಾಲ್ವಡಿಯವರನ್ನು ರಾಜರ್ಷಿ ಎಂದು ಕರೆದ ಕಾಲ. ಅಂತೆಯೇ ಮೈಸೂರಿನ ನಾಡ ಕುಸ್ತಿ ಕಲೆ ಕೂಡ ಎಲ್ಲರ ಗಮನ ಸೆಳೆದಿತ್ತು. ಆಸ್ಥಾನದಲ್ಲಿ ಅಸೀಮ ಕೀರ್ತಿ ಪಡೆದ ಪೈಲ್ವಾನರಿಗೆ ಕೊರತೆ ಇರಲಿಲ್ಲ. ಈ ಬಗೆಯ ಜಿದ್ದಾಜಿದ್ದಿನ ಪೈಪೋಟಿ ಇರುತ್ತಿದ್ದುದರಿಂದ ಕುಸ್ತಿ ಕಲಿಕೆಯಲ್ಲಿ ಜೋಶ್ ಇರುತ್ತಿತ್ತು. ಪಂದ್ಯಗಳಲ್ಲಿ ಹೆವಿ ಬೆಟ್ಟಿಂಗ್ ಕೂಡಾ ನಡೆಯುತ್ತಿತ್ತು. ಪಂದ್ಯಕ್ಕೆ ಇನ್ನಷ್ಟು ರಂಗೇರುತ್ತಿತ್ತು. ಆದರೆ ಯಾವಾಗ ಬೆಟ್ಟಿಂಗ್ ಶುರುವಾಯಿತೋ ಒಳೊಳಗಿನ ಒಪ್ಪಂದದ ನೂರಿ ಕುಸ್ತಿಗಳೂ ನಡೆಯುತ್ತಿದ್ದವು. ಆಟವನ್ನು ನ್ಯಾಯವಾಗಿ ನಡೆಸಿಲ್ಲ ಎಂದರೆ ಜನ ರೊಚ್ಚಿಗೇಳುತ್ತಿದ್ದರು. ಬೆಟ್ಟಿಂಗ್‌ಗೆ ಭಾರಿಸ ಮೊತ್ತ ಕಟ್ಟಿರುತ್ತಿದ್ದರಿಂದ ರೋಷವೂ ಭಾರಿಯಾಗಿರುತ್ತಿತ್ತು. ಗುಂಪು ಘರ್ಷಣೆಗಳಾಗಿ ಕೋಮು ಗಲಭೆಗೆ ತಿರುಗುತ್ತಿತ್ತು. ಹೀಗಾಗಿ ಪಂದ್ಯಗಳಿಗೆ ನಾನಾ ನಿಯಮ ನಿರ್ಬಂಧಗಳನ್ನು ಹೇರಿದರು.

> 1911ರ ಡಿಸೆಂಬರ್ 28 ರಂದು ನಡೆಯಲಿದ್ದ ಕಲ್ಕತ್ತಾದ ಒಂದು ಮುಖ್ಯ ಸಮಾರಂಭಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಯುವರಾಜ ನರಸಿಂಹರಾಜ ಒಡೆಯರ್ ಹೋಗಲಿದ್ದರು. ಇಪ್ಪತ್ತು ದಿನ ಮೊದಲೇ ರಾಜಪರಿವಾರವೂ ಜೊತೆಗೆ ಹೊರಟಿತು. ಅದರಲ್ಲಿ ಪೈಲ್ವಾನ್ ಪಾಪಯ್ಯನವರೂ ಸೇರ್ಪಡೆಯಾಗಿದ್ದರು. ಕಲ್ಕತ್ತಾದಲ್ಲಿ ವಿಶೇಷ ಕುಸ್ತಿ ಪಂದ್ಯಾವಳಿ ನಡೆಯಲಿತ್ತು. ಭಾರತದ ಭಾರಿ ಭಾರಿ ಪೈಲ್ವಾನರಾದ ಗಾಮ, ಕಿಕ್ಕರ್ ಸಿಂಗ್, ಇಮಾಂ ಭಕ್ಷ್ ಮುಂತಾದವರೆಲ್ಲಾ ಬಂದಿದ್ದರು. ಮೊದಲ ಎರಡು ಕುಸ್ತಿಗಳನ್ನು ಲೀಲಾಜಾಲವಾಗಿ ಪಾಪಯ್ಯ ಎಳೆದು ಹಾಕಿದರು.

ರಾಜರ ನೇರ ಪ್ರೋತ್ಸಾಹವಿದ್ದುದರಿಂದ ಮೈಸೂರಿನ ಕುಸ್ತಿಗೆ ಅದರದೇ ರೂಪುರೇಷೆಗಳು, ನಿಯಮ ಕಟ್ಟುಪಾಡುಗಳನ್ನು ವಿಧಿಸಿದರು. ಮೈಸೂರು ಕುಸ್ತಿ ನಿಯಮ ಅಂದರೆ ರಾಯಲ್ ರೂಲ್ಸ್!. ಮೈಸೂರು ಕುಸ್ತಿಯಲ್ಲಿ ಕೈ ಕೈ ಮಿಲಾಯಿಸಿದ ಮೇಲೆ ತೀರ್ಪುಗಾರರ ಮಾತೇ ಅಂತಿಮ. ಅದಕ್ಕೆ ಎದಿರಾಡುವಂತಿಲ್ಲ. ತನ್ನ ದೈಹಿಕ ಸಾಮರ್ಥ್ಯದಿಂದಲೇ ಆತ ಎದುರಾಳಿಯನ್ನು ಮಣಿಸಿ ಚಿತ್ ಮಾಡಬೇಕು. ಹೊಡೆಯುವುದು, ತಿವಿಯುವುದು, ಗುದ್ದುವುದು, ಪರಚುವಿಕೆ, ಉಗಿಯುವುದು, ಬೈಯ್ಯುವುದು ಹೀಗೆ ಯಾವುದನ್ನೂ ಮಾಡಕೂಡದು. ಪಟ್ಟುಗಳನ್ನು ಹಾಕಿದರೆ ಪ್ರತಿ ಪಟ್ಟುಗಳನ್ನು ಹಾಕಿ ಗೆಲ್ಲಬೇಕಷ್ಟೇ. ಗೆದ್ದವಗೆ ತನ್ನ ಗೆಲುವು ಗೌರವ, ಹೆಮ್ಮೆ ತರುವಂತಿರಬೇಕು.

ಮೈಸೂರು ಕುಸ್ತಿಯ ವೈಶಿಷ್ಟ್ಯವೆಂದರೆ ಬೆನ್ನಿನ ಎರಡೂ ಭಾಗಗಳು ಸಂಪೂರ್ಣವಾಗಿ ನೆಲವನ್ನು ಸ್ಪರ್ಶಿಸಬೇಕು. ಆಗಲೇ ಅವನು ಸೋತು ಚಿತ್ತಾದಂತೆ. ಸೆಣಸಾಟದ ಭರದಲ್ಲಿ ಜಟ್ಟಿ ಅಂಗಾತ ಬಿದ್ದು ಬೆನ್ನು ನೆಲಕ್ಕೆ ತಗುಲಬಹುದು. ಅಂದ ಮಾತ್ರಕ್ಕೆ ಸೋತಂತೆ ಅಲ್ಲ. ಕೆಲವರು ಅಷ್ಟಕ್ಕೇ ತಾವು ಗೆದ್ದವರಂತೆ ಕೈಗಳನ್ನು ಮೇಲೆತ್ತಿಕೊಂಡು ಅಖಾಡವೆಲ್ಲಾ ಕುಣಿದಾಡಿಬಿಡುತ್ತಾರೆ!. ಅಂಥವೆಲ್ಲಾ ಚೇಷ್ಟೆ ಮಾಡಿದರೆ ಮುಂದೆ ಕುಸ್ತಿಯನ್ನೇ ಆಡುವಂತಿಲ್ಲ. ಬೆನ್ನುಭಾಗ ಸಂಪೂರ್ಣವಾಗಿ ನೆಲ ಕಚ್ಚಿದಾಗಲೇ, ಆತ ಮೇಲೇಳಲಾರ ಎಂದು ಖಚಿತವಾದಾಗಲೇ ಸೋತು ಚಿತ್ತಾದ ಎಂದು ಘೋಷಿಸುತ್ತಾರೆ.

ಈ ನಿಯಮಗಳೆಲ್ಲಾ ರೂಪುಗೊಂಡಿದ್ದು 1905ರ ಸುಮಾರಿನಲ್ಲಿ. ಆಗ ಭರ್ಜರಿ ಪೈಲ್ವಾನರೊಬ್ಬರು ಅರಮನೆಯಲ್ಲಿದ್ದರು. ಅವರೇ **ಪೈಲ್ವಾನ್ ಪಾಪಣ್ಣ**. ಯಾವ ಕುಸ್ತಿಯಲ್ಲೂ ಸೋಲದ ಕೋರಾಪಿಟ್. ಕುಂಬಾರಗೇರಿ ಗರಡಿ ಹಜ಼ರತ್ ಫಕೀರ್ ಅಹಮದ್ ಸಾಹೇಬರ ಶಿಷ್ಯ. ಕುಸ್ತಿ ಚತುರ ಪಾಪಯ್ಯ ಎಂದೇ ಅವರ ಹೆಸರು.

ಕುದುರೆ ತನ್ನ ಬಾಲ ಸೆಣೆಯುವ ರೀತಿಯಲ್ಲೇ ಅದು ಯಾವ ತೀರಿಗೆ ಓಡುತ್ತೆ ಎಂದು ಹೇಳಬಹುದಂತೆ. ಕುಸ್ತಿಗೆ ಕೈ ಕೈ ಮಿಲಾಯಿಸಿದಾಗ ಅವನು ಸೆಡ್ ಹೊಡೆಯೋ ರೀತಿಯಲ್ಲೇ ಮಲ್ಲನ ಶೌರ್ಯವನ್ನು ಅಳೆಯಬಹುದು. ಅಖಾಡಕ್ಕೆ ಇಳಿಯುತ್ತಲೇ ಎಡ ಭುಜಕ್ಕೆ ಬಲಗೈನಿಂದ ಠಂ.. ಟಕ್! ಎಂದು ಸೆಡ್ ಹೊಡೆಯುತ್ತಾನೆ. ಅದರ ಸದ್ದೇ ಅರ್ಧ ಫರ್ಲಾಂಗ್ ಕೇಳುತ್ತದೆ. 'ಕುಸ್ತಿಗೆ ತಯಾರಿದ್ದೀನೀ ಬರ್ತೀಯೇನಲೋ?!' ಎಂದು ಸವಾಲೆಸೆಯುವ ರೀತಿ ಅದು.

ಎದುರಾಳಿ ಪೈಲ್ವಾನ ತನ್ನ ತೊಡೆಗಳನ್ನು ತಟ್ಟುವ ರೀತಿಯಲ್ಲೇ ತಾನೂ ತಯ್ಯಾರ್! ಎಂದು ಘೋಷಿಸುತ್ತಾನೆ. ಸವಾಲಿಗೆ ಪ್ರತಿ ಸವಾಲೆಸೆದು, 'ಅದೇನ್ ಮಾಡ್ತೀಯೋ ಮಾಡೋ?!' ಎಂದು ದಬಾಯಿಸಿ ಕೇಳೋದೇ ಸೆಡ್ ಹೊಡೆಯೋದು.

1904–1911ರ ಸಮಯದಲ್ಲಿ ಕುಸ್ತಿ ಆಡುತ್ತಿದ್ದ ಬೆಂಗಳೂರಿನ ದೊಡ್ಡ ತಿಮ್ಮಯ್ಯ ಹೀಗೆ ಸೆಡ್ಡು ಹೊಡೆಯುವುದರಲ್ಲಿ ನಿಸ್ಸೀಮ. ಹೆಸರಿಗೆ ತಕ್ಕ ಬೃಹದಾಕಾರ. ಆರೂಕಾಲು ಅಡಿಗೂ ಮೀರಿದ ಎತ್ತರ.ಇವರಿಗೆ ಭುಜಬಲ ಭೀಮ(ಣ್ಣ) ಎಂಬ ಹೆಸರಿತ್ತು. ಇವರು ಅಖಾಡದಲ್ಲಿ ನಿಂತು ಸೆಡ್ಡು ಹೊಡೆದು ಠಂ ಟಕ್ ಎಂದು ಬಾರಿಸಿದರೆ, ಠ ಠಮ್ ಎಂದು ಬರುತ್ತಿದ್ದ ಆ ಸದ್ದಿಗೇ ಎದುರಾಳಿ ತತ್ತರಿಸಿ ಹೋಗುತ್ತಿದ್ದ. ಅಂಥ ಚಡ್ಡಿ ಹಾಕಿ ಸೆಡ್ ಹೊಡೆದಾ ಅಂದರೆ ಗುಡ್ಡವೇ ಅದುರತ್ತೈತಿ ಅನ್ನುತ್ತಿದ್ದರು. ಕೆಂಪೇಗೌಡನ ವಂಶಸ್ಥ ಎಂದು ಹೆಸರಾಗಿದ್ದ ಇವರ ಮೇಲೆ ಮೈಸೂರು ಅರಮನೆ ಪೈಲ್ವಾನ್ ಪಾಪಣ್ಣನವರ ಮೇಲೆ ಕುಸ್ತಿ ಬಿತ್ತು.

ಪಂಜಾಬ್, ಲಾಹೋರ್, ಲಕ್ನೋಗಳಿಂದ ಸವಾಲು ಹಾಕಿ ಬರುತ್ತಿದ್ದ ಜಗಜಟ್ಟಿಗಳನ್ನು ಅಖಾಡದಲ್ಲೇ ಅಟ್ಟಾಡಿಸಿ ಚಿತ್ತು ಮಾಡುತ್ತಿದ್ದ ಪಾಪಣ್ಣ ಎಂದರೆ ಮಹಾರಾಜರಿಗೆ ಅಚ್ಚುಮೆಚ್ಚು. ದೊಡ್ಡ ತಿಮ್ಮಯ್ಯನ ಜೊತೆಗೆ ಜೋಡಿ ಬಿತ್ತು. ಈ ಕುಸ್ತಿಯನ್ನು ನೋಡಲು ಸ್ವತಃ ನಾಲ್ಮಡಿಯವರೇ ಜಗನ್ಮೋಹನ ಅರಮನೆ ಅಖಾಡಕ್ಕೆ ಬಂದರು.

1909 ರಲ್ಲಿ ನಡೆದ ಈ ಕುಸ್ತಿ ಸೆಣಸಾಟ ಸತತ ಮೂರು ದಿನ ನಡೆಯಿತು. ಸಾಕಷ್ಟು ವಿಶ್ರಾಂತಿ ನೀಡಿ ಆಡಿದ ಈ ಕುಸ್ತಿಯಲ್ಲಿ, ಭುಜಬಲ ಭೀಮನ ಸೆಡ್ಡಿಗೆ ಅಖಾಡವೇ ಅಲ್ಲಾಡಿ ಹೋಗುತ್ತಿತ್ತು. ಪಾಪಯ್ಯನವರ ತೊಡೆ ತಟ್ಟುವಿಕೆ ಕ್ಷೀಣವಾಗತೊಡಗಿತು. ಆದರೆ ಈ ಕುಸ್ತಿ ಪಾಪಣ್ಣನವರ ಅಳಿವು ಉಳಿವಿನ ಪಂದ್ಯವಾಗಿತ್ತು. ಸ್ವತಃ ರಾಜ ಪರಿವಾರವೇ ಬಂದು ಕೂತಿದೆ. ಅರಮನೆ ಪೈಲ್ವಾನ ಇಲ್ಲಿ ಸೋಲುವುದುಂಟೇ?. ತಿಮ್ಮಯ್ಯ ಹಾಕದ ಪಟ್ಟುಗಳಿಲ್ಲ. ತಿಮ್ಮಯ್ಯನ ಥಾವು ಪೇಚುಗಳನ್ನು ಪಾಪಯ್ಯ ಸುಲಭವಾಗಿ ಬಿಡಿಸಿಕೊಳ್ಳುತ್ತಿದ್ದರು. ಅಂತಿಮವಾಗಿ ಜಯಮಾಲೆ ಪಾಪಯ್ಯನವರ ಕೊರಳಿಗೆ ಬಿತ್ತು. ಮಹಾರಾಜರು ಬೆಳ್ಳಿ ರೂಪಾಯಿ ತುಂಬಿದ್ದ ಹರಿವಾಣವನ್ನು ಕೊಟ್ಟು, **ಕುಸ್ತಿ ಕಂಠೀರವ** ಎಂಬ ಬಿರುದನ್ನು ನೀಡಿ ಸನ್ಮಾನಿಸಿದರು.

1911ರ ಡಿಸೆಂಬರ್ 28 ರಂದು ನಡೆಯಲಿದ್ದ ಕಲ್ಕತ್ತಾದ ಒಂದು ಮುಖ್ಯ ಸಮಾರಂಭಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಯುವರಾಜ ನರಸಿಂಹ ರಾಜ ಒಡೆಯರ್ ಹೋಗಲಿದ್ದರು. ಇಪ್ಪತ್ತು ದಿನ ಮೊದಲೇ ರಾಜಪರಿವಾರವೂ ಜೊತೆಗೆ ಹೊರಟಿತು. ಅದರಲ್ಲಿ ಪೈಲ್ವಾನ್ ಪಾಪಣ್ಣನವರೂ ಸೇರ್ಪಡೆಯಾಗಿದ್ದರು. ಕಲ್ಕತ್ತಾದಲ್ಲಿ ವಿಶೇಷ ಕುಸ್ತಿ ಪಂದ್ಯಾವಳಿ ನಡೆಯಲಿತ್ತು. ಭಾರತದ ಭಾರಿ ಭಾರಿ ಪೈಲ್ವಾನರಾದ ಗಾಮ, ಕಿಕ್ಕರ್ ಸಿಂಗ್, ಇಮಾಂ ಭಕ್ಷ್ ಮುಂತಾದವರೆಲ್ಲಾ ಬಂದಿದ್ದರು. ಮೊದಲ ಎರಡು ಕುಸ್ತಿಗಳನ್ನು ಲೀಲಾಜಾಲವಾಗಿ ಪಾಪಣ್ಣ ಎಳೆದು ಹಾಕಿದರು. ಇದೇ ಸರಣಿಯಲ್ಲಿ ಖುದಾಭಕ್ಷಿಗೂ ಪಾಪಯ್ಯನವರಿಗೂ ಜಟಾಪಟಿ ಕುಸ್ತಿ ನಡೆಯಿತು. ಕಲ್ಲುದೇಹದ ಪೈಲ್ವಾನನೆಂದು ಹೆಸರು ಮಾಡಿದ್ದ ಖುದಾಭಕ್ಷನಿಗೇ ಗೆಲುವು ಎಂದು ನೆರೆದ ಜನ ಭಾವಿಸಿದ್ದರು. ಕುಸ್ತಿ ಮಿಲಾಯಿಸಿದ ಇಪ್ಪತ್ತು ನಿಮಿಷಗಳ ಸೆಣಸಾಟ ನಡೆಯಿತು. ಖುದಾಭಕ್ಷ್ ಬಗಲಿ ಪಟ್ಟು ಬದಲಾಯಿಸುತ್ತಿದ್ದ. ಆ ತಕ್ಷಣವೇ ಮಿಂಚಿನ ವೇಗದಲ್ಲಿ ಪಾಪಣ್ಣ ನಡು ತಿರುಗಿಸಿ ಡಾಕ್ ಡಾವ್‌ನ್ನು ಪ್ರಯೋಗಿಸಿದರು.



ಮೈಸೂರಿನ ಫಕೀರ್ ಸಾಬ್ ಗರಡಿ

ದೈತ್ಯ ದೇಹಿ ಖುದಾಭಕ್ಷ್ ದೊಪ್ಪನೇ ನೆಲಕ್ಕೆ ಬಿದ್ದು ಚಿತ್ ಆಗಿಬಿಟ್ಟ, ಚಕಿತ ಜನಸ್ತೋಮ ವ್ಹಾವ್ ಅಂದಿತು. ಪಂದ್ಯ ನೋಡುತ್ತಿದ್ದ ನಾನಾ ರಾಜ್ಯಗಳ ರಾಜರುಗಳೂ ಚಪ್ಪಾಳೆ ತಟ್ಟಿ ಸಂತಸ ವ್ಯಕ್ತಪಡಿಸಿದರು. ಮೈಸೂರಿನ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದನೆಂದು ನಾಲ್ವಡಿಯವರು ಪಾಪಯ್ಯನ ಬೆನ್ನುತಟ್ಟಿ ಕೊಂಡಾಡಿದರು. ಶ್ರೀ ಮನ್ಮಹಾರಾಜರು ತನ್ನ ಮೈಮುಟ್ಟಿದ್ದೇ ತನ್ನ ಜೀವನ ಪಾವನವಾಯಿತೆಂದು ಪಾಪಯ್ಯ ದೀರ್ಘ ದಂಡ ನಮಸ್ಕಾರ ಮಾಡಿಬಿಟ್ಟ.


ಸ್ಪರ್ಧೆಗಳೆಲ್ಲವೂ ಮುಗಿದು ಮುಖ್ಯ ಸಮಾರಂಭದ ದಿನಾಂಕ 1911ರ ಡಿಸೆಂಬರ್ 28ನೇ ತಾರೀಖು ಬಂದೇ ಬಿಟ್ಟಿತು!. ಆ ಸಮಾರಂಭ ಬೇರ್‍ಯಾವುದೂ ಅಲ್ಲ. ಬ್ರಿಟಿಷ್ ಸಾಮ್ರಾಜ್ಯದ ಕಿಂಗ್ ಜಾರ್ಜ್‌ನ ಕಿರೀಟ ಧಾರಣೆಯ ಸಂಭ್ರಮಾಚರಣೆ!.

ಸ್ವತಃ ಕಿಂಗ್ ಜಾರ್ಜ್ ತನ್ನ ಮಹಾರಾಣಿ ಮೇರಿಯೊಂದಿಗೆ ಬರಲಿದ್ದ. ಭಾರತದ ರಾಜ ಮಹಾರಾಜರು ಸ್ವಾಗತಿಸಲು ಹೋಗಿದ್ದರು. ಕಿಂಗ್ ಐದನೇ ಜಾರ್ಜ್‌ನನ್ನು ಅಭೂತಪೂರ್ವಕವಾಗಿ ಬರಮಾಡಿಕೊಂಡರು. ಅಂದೇ ಮೊದಲ ಬಾರಿಗೆ ಟ್ಯಾಗೋರರ ಗೀತೆ ಜನಗಣಮನ ಹಾಡಿಸಲಾಯಿತು.

ಈ ಸಂದರ್ಭದಲ್ಲಿ ನಡೆದ ಸಮಾರಂಭದಲ್ಲಿ ಕಿಂಗ್ ಐದನೇ ಜಾರ್ಜ್‌ನೇ ಎಲ್ಲಾ ವಿಜೇತ ಜಗಜಟ್ಟಿಗಳಿಗೂ ಬಹುಮಾನವಾಗಿ ಬ್ರಿಟಿಷ್ ಲಾಂಛನವಿರುವ ಚಿನ್ನದ ಪದಕಗಳನ್ನು ನೀಡಿದ. ಬ್ರಿಟಿಷ್ ಲಾಂಛನದ ಚಿನ್ನದ ಪದಕ ಅಪರೂಪದಲ್ಲಿ ಅಪರೂಪ. ಮೈಸೂರು ಸಂಸ್ಥಾನದಲ್ಲಿ ಯಾರಿಗೂ ಬಂದಂತೆ ಕಾಣೆ. ಸರ್ ಪ್ರಶಸ್ತಿಗಳಿಗೆ ಫಲಕ ಇರುತ್ತಿತ್ತು. ಇಲ್ಲಿ ಪಡೆದ ಚಿನ್ನದ ಪದಕವನ್ನು ಪಾಪಯ್ಯನವರು ಜೀವನದ ಕೊನೆಯವರೆಗೂ ಹೆಮ್ಮೆಯಿಂದ ಇಟ್ಟುಕೊಂಡಿದ್ದರು.

ಕಲ್ಕತ್ತಾದಲ್ಲಿ ಪಾಪಣ್ಣನವರ ಕುಸ್ತಿ ಕರಾಮತ್ತನ್ನು ಬೆರಗಿನಿಂದ ವೀಕ್ಷಿಸಿದ್ದ ಜಗಜಟ್ಟಿ ಗಾಮ ಮೈಸೂರಿಗೂ ಬಂದಿದ್ದ. ಎರಡು ತಿಂಗಳಿದ್ದು ಪಾಪಯ್ಯನವರು ಹಾಕುತ್ತಿದ್ದ ಪಟ್ಟುಗಳನ್ನು ಕಲಿತ. ಎರಡು ಗಂಟೆ ಧಂ ಕಟ್ಟಿ ಆಡುವ ಕುಸ್ತಿಯನ್ನೂ ಕಲಿತ. ಅದು ವಿಶ್ವ ಕುಸ್ತಿ ಚಾಂಪಿಯನ್ ಆಗಲು ನೆರವಿಗೆ ಬಂತು.

ಗಾಮ ಮೈಸೂರಿನಲ್ಲಿದ್ದಾಗ ಪಾಪಯ್ಯನವರೊಂದಿಗೆ ಕುಸ್ತಿ ಆಡುವಂತೆ ಅನೇಕರು ದುಂಬಾಲು ಬಿದ್ದರು. ಪಾಪಯ್ಯನವರೂ ಮನಸ್ಸು ಕೊಡಲಿಲ್ಲ. ಗಾಮಾನೂ ಒಪ್ಪಲಿಲ್ಲ. ಆಡಿದ್ದಿದ್ದರೆ ಫಲಿತಾಂಶ ಏನೆಂಬುದು ಗೊತ್ತಿತ್ತು. ವಿದ್ಯೆ ಕಲಿಸಿದ ಗುರುಗಳ ಕಾಲು ಹಿಡಿಯಬಹುದೇ ಹೊರತು ಕುತ್ತಿಗೆ ಹಿಡಿಯೋದಿಲ್ಲವೆಂದ ಗಾಮಾನ ಬಗ್ಗೆ ಎಲ್ಲರಿಗೂ ಗೌರವ ಹೆಚ್ಚಿತು.



ಮೈಸೂರಿನ ಕುಸ್ತಿ ಕಂಠೀರವ ಪೈ.ಪಾಪಣ್ಣ

ಪಂಜಾಬ್ ಕೇಸರಿ ಎಂದು ಹೆಸರಾಗಿದ್ದ ಸುಲೇಮಾನನಿಗೆ, ಪಾಪಣ್ಣನವರನ್ನು ಸೋಲಿಸುವ ಮಹದಾಸೆ ಇತ್ತು. 1916ರಲ್ಲಿ ಇಬ್ಬರಿಗೂ ಭಯಂಕರ ಸೆಣಸಾಟ ನಡೆಯಿತು. ತನ್ನ ಪಟ್ಟುಗಳನ್ನು ಸಮಯಕ್ಕೆ ಸರಿಯಾಗಿ ಪ್ರಯೋಗ ಮಾಡುವಲ್ಲಿ ಸುಲೇಮಾನ್ ನಿಷ್ಣಾತನಾಗಿದ್ದ. ಆದರೆ ಅವ್ಯಾವ ಪಟ್ಟುಗಳಿಗೂ ಪಾಪಯ್ಯ ಕೆಂದಲಿಲ್ಲ. ಅವನ 'ಆಯಂಟಿ' ಪಟ್ಟು ಕೂಡ ಮಕಾಡೆ ಮಲಗಿತು. ಬಹು ಸಮಯ ನಡೆದ ಈ ಖಡಾಖಡಿ ಕುಸ್ತಿ ಕಡೆಗೆ ಸಮ ಸಮ ಆಯಿತು. ಅದೇ ಪಾಪಣ್ಣನವರ ಕೊನೆಯ ಕುಸ್ತಿಯೂ ಆಯಿತು.

ಅವರ ಕಾಲಕ್ಕೆ ಮೈಸೂರಿನಲ್ಲಿ ಹದಿನೆಂಟು ಗರಡಿಗಳು ಮಾತ್ರವಿದ್ದವು. ಜಟ್ಟಿಗಳಾದವರು ಜಡತ್ವ ಬಿಟ್ಟು ಸದಾ ಚಟ್ ಪಟ್ ಅನ್ನುತ್ತಿರಬೇಕು. ಅದಕ್ಕಾಗಿ ಗರಡಿಯಲ್ಲಿ ದಿನವೂ ನಗಾರಿ ಬಾರಿಸುತ್ತಿರಬೇಕು. ಇದು ಅವರ ಅಪೇಕ್ಷೆ. ಬಹುಮಾನ ಕೊಡಲು ಮುಂದಾದ ಮಹಾರಾಜರಲ್ಲಿ ನಗಾರಿಯನ್ನು ಮಾತ್ರ ಬೇಡಿದರು ಮಹಾನ್ ಜಟ್ಟಿ ಪಾಪಣ್ಣ. ಅಸ್ತು ಎಂದರು ಮಹಾರಾಜರು. ಇಡೀ ಮೈಸೂರೇ ಕೇಳುವಂತೆ ನಗಾರಿ ಮೊಳಗಿದವು. ಕುಸ್ತಿ ಪ್ರಿಯರು ಲಾವಣಿ ಕಟ್ಟಿ ಸಂಭ್ರಮಿಸಿದರು.

'ಹೊಡಿ ನಗಾರಿ ಮೇಲೆ ಕೈಯ್ಯ. ತಟ್ಟು ತೊಡೆ ಮ್ಯಾಲೆ ಕೈಯ್ಯ' ಅವರ ಮಗ ಪೈ ಶ್ರೀಕಂಠೂ ಕೂಡ ಕೋರಾಪಿಟ್ ಎಂಬ ದೊಡ್ಡ ಹೆಸರು ಮಾಡಿದ. ಆದರೆ ಇಳಿವಯಸ್ಸಿನಲ್ಲಿ ಕಡುಕಷ್ಟದ ದಿನಗಳು ಎದುರಾದವು. ಆದಾಯದ ಮೂಲವೇ ಇರಲಿಲ್ಲ. ಆವತ್ತು ಸುಪ್ರಸನ್ನರಾಗಿದ್ದ ಮಹಾರಾಜರು 'ನಿನಗೇನು ಬೇಕು ಕೇಳು' ಎಂದು ಕೇಳಿದಾಗ ಹದಿನೆಂಟು ನಗಾರಿ ಕೇಳಿದ್ದರು.

'ಅವು ಗರಡಿ ಮನೆಗೆ ಆಯಿತು. ನಿನಗೇನು ಬೇಕು. ಕೇಳು' ಎಂದಾಗ, ಅಡ್ಡಬಿದ್ದು ನಿಮ್ಮ ಅನುಗ್ರಹ ಸಾಕು ಮಹಾಸ್ವಾಮಿ ಎಂದಿದ್ದರು.

ಅದಾದ ಮೇಲೆ ತುಂಬಾ ಜನರು 'ಈಗಲಾದರೂ ಮಹಾರಾಜರಿಂದ ಲವಾಜಮೆ ಕೇಳು' ಎಂದು ತುಂಬಾ ಒತ್ತಾಯ ಮಾಡಿದ್ದರು. ಪಾಪಣ್ಣನವರು ತಪ್ಪಿಕೂಡ ಲವಾಜಮೆ ಬೇಡಿಕೊಳ್ಳಲಿಲ್ಲ. (ಅರಸು ಮನೆತನದವರಿಗೆ ಮತ್ತು ಮುಖ್ಯರಾದವರಿಗೆ ಅರಮನೆಯಿಂದ ವರ್ಷಕ್ಕಾಗುವಷ್ಟು ದವಸಧಾನ್ಯ, ದಿನಸಿ ಪದಾರ್ಥಗಳನ್ನು ಕಳುಹಿಸಿಕೊಡುವ ಪದ್ಧತಿ ಇತ್ತು. ಇದೇ ಲವಾಜಮೆ. ಅದಕ್ಕೆಂದೇ ಪ್ರತ್ಯೇಕ ವಿಭಾಗವಿತ್ತು. ಅದನ್ನು ಕೇಳಿಕೊಂಡಿದ್ದರೆ, ಪಾಪಣ್ಣನವರ ಕುಟುಂಬಕ್ಕೆ ಕೊರತೆಯೇ ಇರುತ್ತಿರಲಿಲ್ಲ.)

ಜಾರ್ಜ್ ನೀಡಿದ್ದ ಚಿನ್ನದ ಪದಕವನ್ನು ಮಾರಿ ಜೀವಿಸಬೇಕಾದ ದುಸ್ಥಿತಿ ಬಂದಿತು. ಅದೂ ಒಂದು ವಿದ್ರಾವಕ ಕತೆ. ಜೀವಕ್ಕೂ ಮಿಗಿಲಾಗಿ ಜತನದಿಂದ ಇಟ್ಟುಕೊಂಡಿದ್ದ ಆ ಪದಕವನ್ನು ಮಾರುವುದುಂಟೇ?. ಒತ್ತೆ ಇಡಲೆಂದು ಹೋದರು. ಒತ್ತೆ ಇಟ್ಟರೆ ಅದನ್ನು ಬಡ್ಡಿ ಕೊಟ್ಟು ಬಿಡಿಸಿಕೊಳ್ಳಬೇಕು. ಅದಕ್ಕೆಲ್ಲಿದೆ ಆದಾಯ?. ಪದಕವನ್ನೇ ಬಡ್ಡಿ ನುಂಗಿ ಬಿಡುತ್ತದೆ. ಬೆಳ್ಳಿಯ ತೋಡಾ, ಗದೆ, ಕಡಗಗಳೆಲ್ಲವೂ ಅದಾಗಲೇ ಕೈ ಬಿಟ್ಟಿದ್ದವು. ಗೆಲುವಿನ ಗುರುತಾಗಿದ್ದ ಅಪೂರ್ವ ಚಿನ್ನದ ಪದಕವೂ ಮಾರಿಹೋಯಿತು.


'ಆಕಾಶಕ್ಕೆ ಏಣಿ ಇಲ್ಲ. ಪಾಪಣ್ಣಂಗೆ ಜೋಡಿ ಇಲ್ಲ' ಎಂಬ ಘೋಷಣೆ ಮಾತ್ರ ಉಳಿಯಿತು.

ಲಲಿತಾ ಶಾಲೆಯಲ್ಲಿ 'ಜ್ಞಾನಾಲಯ' ಗ್ರಂಥಾಲಯ ಉದ್ಘಾಟನೆ

ಕಲಿಸು ಫೌಂಡೇಷನ್‌ನಿಂದ ವ್ಯವಸ್ಥೆ

ಮೈಸೂರು, ಜು.15(ಎಸ್‌ಬಿಡಿ)– ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆ(SWRWWO) ನಿರ್ವಹಿಸುತ್ತಿರುವ ಮೈಸೂರಿನ ವಿವಿ ಮೊಹಲ್ಲಾದ ಲಲಿತಾ ಶಾಲೆಯಲ್ಲಿ 'ಜ್ಞಾನಾಲಯ' ವಿಶೇಷ ಗ್ರಂಥಾಲಯದ ಉದ್ಘಾಟನೆ ಸೋಮವಾರ ನೆರವೇರಿತು.

ಕಲಿಸು ಫೌಂಡೇಷನ್ ಸಹಯೋಗದಲ್ಲಿ ಸ್ಥಾಪಿಸಿರುವ ನೂತನ ಗ್ರಂಥಾಲಯವನ್ನು ನೈರುತ್ಯ ರೈಲ್ವೆ ಮೈಸೂರು ವಿಭಾಗೀಯ ವ್ಯವಸ್ಥಾಪಕರೂ ಆದ ಮಹಿಳಾ ಕಲ್ಯಾಣ ಸಂಸ್ಥೆ ಅಧ್ಯಕ್ಷೆ ಶಿಲ್ಪಿ ಅಗರ್ವಾಲ್ ಉದ್ಘಾಟಿಸಿದರು. ಬಳಿಕ ಅವರು ಮಾತನಾಡಿ, ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆ ನಿರ್ವಹಿಸುತ್ತಿರುವ ಲಲಿತಾ ಶಾಲೆಯಲ್ಲಿ ಗ್ರಂಥಾಲಯ ಸೌಲಭ್ಯ ಕಲ್ಪಿಸಿರುವುದು ಸಂತೋಷ ತಂದಿದೆ. ಇದರಿಂದ ಮಕ್ಕಳ ಓದುವ ಹವ್ಯಾಸಕ್ಕೆ ಪ್ರೋತ್ಸಾಹ ದೊರಕುತ್ತದೆ. ಶಾಲೆಯ ವಿದ್ಯಾರ್ಥಿಗಳ ಭವಿಷ್ಯಕ್ಕೆ ಉತ್ತಮ ಅಡಿಪಾಯ ಹಾಕಿಕೊಡುವ ನಿಟ್ಟಿನಲ್ಲಿ ನಮ್ಮ ಸಂಸ್ಥೆ ಕೆಲಸ ಮಾಡಲಿದೆ ಎಂದು ಭರವಸೆ ನೀಡಿದರು.



ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆ ನಿರ್ವಹಿಸುತ್ತಿರುವ ಮೈಸೂರಿನ ವಿವಿ ಮೊಹಲ್ಲಾದ ಲಲಿತಾ ಶಾಲೆಯಲ್ಲಿ 'ಜ್ಞಾನಾಲಯ' ಎಂಬ ವಿಶೇಷ ಗ್ರಂಥಾಲಯವನ್ನು ಸೋಮವಾರ ಉದ್ಘಾಟಿಸಲಾಯಿತು.

ಕಲಿಸು ಫೌಂಡೇಶನ್‌ನ ಸಿಇಓ ನಿಖಿಲೇಶ್ ಮಾತನಾಡಿ, ಶಾಲೆಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವುದಕ್ಕಾಗಿ ನಮ್ಮ ಸಂಸ್ಥೆ ಸಹಕಾರ ನೀಡಲು ಸದಾ ಸಿದ್ಧವಿದೆ. ಇದು 99ನೇ ಗ್ರಂಥಾಲಯವಾಗಿದ್ದು, ರೈಲ್ವೆ ಮಹಿಳಾ ಶಾಲೆಯಲ್ಲಿ ಸಾಕಾರವಾಗಿದ್ದು ಸಂತೋಷ ತಂದಿದೆ. ಈ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿದ ರೈಲ್ವೇ ತಂಡಕ್ಕೆ, ವಿಶೇಷವಾಗಿ ಡಿಆರ್‌ಎಂ ಅವರಿಗೆ ಧನ್ಯವಾದಗಳು. ಸರ್ಕಾರಿ ಮತ್ತು ಹಿಂದುಳಿದ ಶಾಲೆಗಳಿಗೆ ಪುಸ್ತಕಗಳನ್ನು ಒದಗಿಸುವ ಮೂಲಕ ಮಕ್ಕಳಲ್ಲಿ ಓದುವ ಹವ್ಯಾಸ ಪ್ರೋತ್ಸಾಹಿಸಲು ನಮ್ಮ ಎನ್‌ಜಿಓ ಬದ್ಧವಾಗಿದೆ ಎಂದು ತಿಳಿಸಿದರು.

ಜ್ಞಾನಾಲಯದ ವಿಶೇಷ: ಈ ಗ್ರಂಥಾಲಯ 800ಕ್ಕೂ ಹೆಚ್ಚು ಪುಸ್ತಕಗಳನ್ನು ಹೊಂದಿದೆ. ಏಕ ಕಾಲದಲ್ಲಿ 30ಕ್ಕೂ ಹೆಚ್ಚು ಮಕ್ಕಳು ಓದಬಹುದು. ಆಕರ್ಷಕ ಬಣ್ಣ, ಕಲಾಕೃತಿ, ಹೊಸ ಪೀಠೋಪಕರಣಗಳು ಮತ್ತು ಪುಸ್ತಕಗಳ ಶ್ರೇಣಿಯಿಂದ ಗ್ರಂಥಾಲಯ ವಿಶಿಷ್ಟವಾಗಿ ಕಂಗೊಳಿಸುತ್ತಿದೆ. ಗ್ರಂಥಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಯೋಜನಾ ಮುಖ್ಯಸ್ಥೆ ಕೆ.ಎಸ್.ನಾಗಶ್ರೀ ಮತ್ತು ಕಾರ್ಯಾಚರಣೆ ವ್ಯವಸ್ಥಾಪಕ ಮನೋಜ್ ಸೇರಿದಂತೆ ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆ ಸದಸ್ಯರು, ರೈಲ್ವೆ ಅಧಿಕಾರಿಗಳು ಹಾಗೂ ಕಲಿಸು ಫೌಂಡೇಷನ್ ಪ್ರತಿನಿಧಿಗಳು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಿಂದ ಆಷಾಢ ಶುಭ-ಲಾಭ ಉತ್ಸವಕ್ಕೆ ಚಾಲನೆ



ಮೈಸೂರು, ಜು. 15– ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಂನಲ್ಲಿ ಆಷಾಢ ಶುಭ ಲಾಭ ಉತ್ಸವಕ್ಕೆ ಚಾಲನೆ ನೀಡಲಾಯಿತು. ಈ ಉತ್ಸವವು ಆಗಸ್ಟ್ 4ರವರೆಗೆ ಇರಲಿದ್ದು, ಗ್ರಾಹಕರಿಗೆ ಆಕರ್ಷಕ ಮತ್ತು ವಿಸ್ತಾರವಾದ ಆಭರಣಗಳ ಮೇಲೆ ವಿಶೇಷ ಕೊಡುಗೆಗಳನ್ನು ನೀಡಲಾಗುತ್ತಿದೆ.

ಈ ಅವಧಿಯಲ್ಲಿ ಗ್ರಾಹಕರು ಖರೀದಿಸುವ ಚಿನ್ನಾಭರಣದ ಮೇಕಿಂಗ್ ಚಾರ್ಜ್ ಮೇಲೆ ಶೇ.25ರವರೆಗೆ ರಿಯಾಯ್ತಿ, ಸ್ಟಡೆಡ್ ಆಭರಣಗಳ ಮೇಲಿನ ಮೇಕಿಂಗ್ ಚಾರ್ಜ್‌ನಲ್ಲಿ ಶೇ.25ರಷ್ಟು ಫ್ಲಾಟ್ ರಿಯಾಯ್ತಿ ಮತ್ತು ವಜ್ರಾಭರಣದ ಮೇಲೆ ಶೇ.25ರವರೆಗೆ ರಿಯಾಯ್ತಿ ಪಡೆಯಬಹುದಾಗಿದೆ. ಈ ಆಕರ್ಷಕ ಕೊಡುಗೆಗಳು ತಮ್ಮ ನೆಚ್ಚಿನ ಆಭರಣಗಳನ್ನು ಅತ್ಯುತ್ತಮ ಬೆಲೆಗಳಲ್ಲಿ ಖರೀದಿಸುವ ಅವಕಾಶವನ್ನು ಕಲ್ಪಿಸುತ್ತಿವೆ. ಈ ಕೊಡುಗೆಗಳು ಕರ್ನಾಟಕದಲ್ಲಿರುವ ಎಲ್ಲಾ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಸ್ಟೋರ್‌ಗಳಲ್ಲಿ ಲಭ್ಯವಿವೆ.

ಬಿ.ಆರ್.ನಟರಾಜ್ ಜೋಯಿಸ್–60 ಅಂಗವಾಗಿ ಬಡ ವಿದ್ಯಾರ್ಥಿಗಳಿಗೆ ಗೌರವಧನ, ಯೋಗ ಮ್ಯಾಟ್ ವಿತರಣೆ



ರಾಜ್ಯ ಬ್ರಾಹ್ಮಣ ಮಹಾಸಭಾ ಮೈಸೂರು ವಲಯದ ಉಪಾಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್ ಅವರ 60ನೇ ಜನ್ಮದಿನದ ಅಂಗವಾಗಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜು. 15–ರಾಜ್ಯ ಬ್ರಾಹ್ಮಣ ಸಭಾ ಮೈಸೂರು ವಲಯ ಉಪಾಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್ ಅವರ 60ನೇ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಸನ್ಮಾನಿಸಿ, ಹತ್ತು ಮಂದಿ ಬಡ ವಿದ್ಯಾರ್ಥಿಗಳಿಗೆ ಗೌರವಧನ, ಯೋಗ ಮ್ಯಾಟ್ ವಿತರಿಸಲಾಯಿತು.

ಜಿಲ್ಲಾ ಬ್ರಾಹ್ಮಣ ಮಹಾಸಭಾ, ಯುವ ಮಹಾಸಭಾ, ಮಹಿಳಾ ಮಹಾಸಭಾ, ಪಾರಿಜಾತ ಟ್ರಸ್ಟ್ ಸಹಯೋಗದಲ್ಲಿ ದೇವಯ್ಯನ ಹುಂಡಿ ಮುಖ್ಯ ರಸ್ತೆಯ ಶಾಕಂಬರಿ ಧಾರ್ಮಿಕ ಶ್ರದ್ಧಾ ಕೇಂದ್ರ ಸಂಧ್ಯಾ ಚೇತನಾ ಸಭಾಭವನದಲ್ಲಿ ನಡೆದ ಸಮಾರಂಭದಲ್ಲಿ ಮಾಜಿ ಸಚಿವ ಸಿ.ಎಚ್. ವಿಜಯಶಂಕರ್ ಅವರನ್ನು ಸನ್ಮಾನಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಡಾ.ರಾಜಶೇಖರ್ ಮೆಡಿಕಲ್ ಫೌಂಡೇಷನ್‌ನ ಡಾ.ಎಚ್.ಬಿ.ರಾಜಶೇಖರ್, ಸಾಹಿತಿಗಳಾದ ಡಾ.ಲತಾ ರಾಜಶೇಖರ್, ಡಾ.ಕೆ.ಲೀಲಾ ಪ್ರಕಾಶ್, ಸಮಾಜ ಸೇವಕರಾದ ಕೆ.ರಘುರಾಂ ವಾಜಪೇಯಿ, ಪುಷ್ಪಾ ಅಯ್ಯಂಗಾರ್, ವೈದೇಹಿ, ಡಾ.ಎಂಜಿಆರ್ ಅರಸ್, ಪಾಲಿಕೆ ಮಾಜಿ ಸದಸ್ಯ ಎಂ.ಪ್ರದೀಪ್ ಕುಮಾರ್, ಕಾಂಗ್ರೆಸ್ ಮುಖಂಡ ವೆಂಕಟಸುಬ್ಬಯ್ಯ, ವಿಕ್ರಾಂತ್ ಪಿ.ದೇವೇಗೌಡ, ಪತ್ರಕರ್ತರಾದ ರಂಗನಾಥ್ ಮೈಸೂರು, ಎಸ್.ನಾಗರಾಜು, ಕನ್ನಡ ಹೋರಾಟಗಾರ ಅರವಿಂದ ಶರ್ಮ, ಸಮಾಜ ಸೇವಕರಾದ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಅರಿವು ಸಂಸ್ಥೆಯ ಕಶ್ಯಪ್, ಜಿ.ಆರ್.ವಿದ್ಯಾರಣ್ಯ, ಗಾಯಕ ಸಾಂಬಮೂರ್ತಿ, ಎಂ.ಎಸ್.ರವೀಂದ್ರ ಶಿವಕುಮಾರ್, ಎನ್.ವಿ.ರಮೇಶ್, ದೋಸೆಪಾಯಿಂಟ್ ರಘು, ಆರ್.ಸತ್ಯನಾರಾಯಣ, ಎ.ಎಸ್.ಅನಂತಪ್ರಸಾದ್, ವಿಜಯಲಕ್ಷ್ಮಿ, ಉಷಾ ಮತ್ತಿತರರು ಉಪಸ್ಥಿತರಿದ್ದರು.

ಮುಡಾ ಹಗರಣ ಸಿಬಿಐಗೆ ವಹಿಸಿದರೆ ಮಾತ್ರ ಸತ್ಯಾಂಶ ಬಯಲಾಗುತ್ತದೆ

ಬಿಜೆಪಿ ರಾಜ್ಯ ವಕ್ತಾರ ಎಂ.ಜೆ.ಮಹೇಶ್ ಆಗ್ರಹ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ರಾಜ್ಯ ವಕ್ತಾರ ಎಂ.ಜೆ.ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜು.15(ಬಿಎಲ್‌ಯು) ಶೇಕಡ 50:50 ಅನುಪಾತದಲ್ಲಿ ನಿವೇಶನ ಹಂಚಿಕೆ ಸೇರಿದಂತೆ ಮುಡಾದ ಸಾವಿರಾರು ಕೋಟಿ ಮೌಲ್ಯದ ಹಗರಣದ ಬಗ್ಗೆ ನಿವೃತ್ತ ನ್ಯಾಯಾಧೀಶರ ಬದಲು ಸಿಬಿಐನಿಂದಲೇ ತನಿಖೆ ನಡೆಸಬೇಕು ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜೆ. ಮಹೇಶ್ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾ ಹಗರಣದಲ್ಲಿ ಪ್ರಭಾವಿಗಳ ಕೈವಾಡ ಇರುವ ಕಾರಣ ಸಿಬಿಐ ತನಿಖೆಗೆ ವಹಿಸಿದರೆ ಮಾತ್ರ ಸತ್ಯಾಂಶ ಬಯಲಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅಕ್ರಮವಾಗಿ ನಿವೇಶನ ಪಡೆದಿದ್ದಾರೆ. ಹಲವು ದಾಖಲಾತಿಗಳಲ್ಲಿ ಇದು ಸ್ಪಷ್ಟವಾಗಿದೆ. ಆದರೆ ಸ್ಥಳೀಯರಾದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಸ್ಪಷ್ಟ ವಿವರ ನೀಡದೆ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.

ಹಿಂದೂ ಧರ್ಮಿಯರು ಅಪಾರವಾಗಿ ನಂಬಿಕೆ ಇಟ್ಟಿರುವ ಶಿವ ಸೇರಿದಂತೆ ಇತರೆ ಹಿಂದೂ ದೇವರ ಬಗ್ಗೆ ಸಂಸದ ರಾಹುಲ್ ಗಾಂಧಿ ಅಗೌರವವಾಗಿ ಮಾತನಾಡಿದ್ದಾರೆ. ವಿರೋಧ ಪಕ್ಷದ ಸ್ಥಾನದಲ್ಲಿರುವ ಅವರು ಇನ್ನು ಮುಂದಾದರೂ ಜವಾಬ್ದಾರಿಯುತವಾಗಿ ಮಾತನಾಡಲಿ ಎಂದು ಮಹೇಶ್ ಸಲಹೆ ನೀಡಿದರು. ಮಾಧ್ಯಮ ವಕ್ತಾರ ಮಹೇಶ್‌ರಾಜ್ ಅರಸ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಫೈರ್ ಅಂಡ್ ಸೇಫ್ಟಿ ಕೋರ್ಸ್ ಮಾಡಿದರೆ ಶೇ.100 ಉದ್ಯೋಗಾವಕಾಶ



ಮೈಸೂರು, ಜು. 15– ಫೈರ್ ಅಂಡ್ ಸೇಫ್ಟಿ ಕ್ಷೇತ್ರದಲ್ಲಿ ವಿಶ್ವಮಾನ್ಯತೆ ಪಡೆದ ಎಂಐಎಫ್‌ಎಸ್‌ಇ ನೀಡುತ್ತಿರುವ ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದ ಕೇವಲ 1 ವರ್ಷದ ಡಿಪ್ಲೊಮಾ ಮತ್ತು ಪಿಜಿ ಡಿಪ್ಲೊಮಾದಿಂದ ಶೇ.100 ಉದ್ಯೋಗ ಅವಕಾಶ ಸಾಧ್ಯವಿದೆ. ಒಂದು ವೇಳೆ ಉದ್ಯೋಗಾವಕಾಶ ಸಿಗದಿದ್ದರೆ ವಿದ್ಯಾರ್ಥಿ ಪಾವತಿ ಮಾಡಿದ ಶುಲ್ಕವನ್ನು ಹಿಂದಿರುಗಿಸುವುದಾಗಿ ಭರವಸೆ ನೀಡಿದೆ. ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮತ್ತೆ ತರಬೇತಿ ನೀಡಿ ಅವರನ್ನು ಮರು ಪರೀಕ್ಷೆಗೆ ಒಳಪಡಿಸಿ ಉದ್ಯೋಗ ಪಡೆದುಕೊಳ್ಳುವವರೆಗೆ ತರಬೇತಿ ನೀಡಲಾಗುವುದು.

ಐಟಿಐ, ಡಿಪ್ಲೊಮಾ ಮತ್ತು ಪದವಿ ಜೊತೆಗೆ ಫೈರ್ ಅಂಡ್ ಸೇಫ್ಟಿ ಕ್ಷೇತ್ರದ ಕೋರ್ಸ್ ಕಲಿತ ವಿದ್ಯಾರ್ಥಿಗಳಿಗೆ ದೇಶ–ವಿದೇಶಗಳಲ್ಲಿ ಎಲ್ಲಿಲ್ಲದ ಬೇಡಿಕೆ ಕಂಡು ಬಂದಿದೆ. ಈ ವಿದ್ಯಾರ್ಥಿಗಳು ತಕ್ಷಣ ಉದ್ಯೋಗ ಪಡೆಯುವುದಂತೂ ಗ್ಯಾರಂಟಿ. ಅಲ್ಲದೇ, ಉನ್ನತ ಕಂಪನಿಯಗಳಲ್ಲಿ ಸೇಫ್ಟಿ ಆಫೀಸರ್, ಹೆಚ್‌ಎಸ್‌ಇ ಆಫೀಸರ್, ಇಹೆಚ್‌ಎಸ್ ಮ್ಯಾನೇಜರ್ ಹುದ್ದೆಗಳಲ್ಲಿ ಭಾರತದಲ್ಲಿ 20–30 ಸಾವಿರ ಆರಂಭಿಕ ವೇತನದ ಉದ್ಯೋಗ ಮತ್ತು ವಿದೇಶಗಳಲ್ಲಿ 2.5 ಲಕ್ಷದವರೆಗೂ ಮಾಸಿಕ ವೇತನ ಪಡೆಯುವ ಅವಕಾಶ ಈ ವಿದ್ಯಾರ್ಥಿಗಳು ಪಡೆಯಬಹುದು ಎಂದು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ.

2007ರಲ್ಲಿ ಆರಂಭಗೊಂಡ ಎಂಐಎಫ್‌ಎಸ್‌ಇ ರಾಜ್ಯದಲ್ಲೇ ಪ್ರಥಮ ಬಾರಿಗೆ ಫೈರ್ ಅಂಡ್ ಸೇಫ್ಟಿ ಕೋರ್ಸ್ ಆರಂಭಿಸಿತ್ತು. ಮಂಗಳೂರು, ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳ ನಾನಾ ಡಿಪ್ಲೊಮಾ, ಪಿಜಿ ಡಿಪ್ಲೋಮಾ ಮತ್ತು ಪದವಿ ಶಿಕ್ಷಣ ನೀಡುತ್ತಿದೆ. 2019–2020ರಿಂದ ಎನ್‌ಎಸ್‌ಡಿಸಿ ಸ್ಕಿಲ್ ಇಂಡಿಯಾ ಮಾನ್ಯತೆಯೊಂದಿಗೆ ವಿದ್ಯಾರ್ಥಿಗಳಿಗೆ ಸೇಫ್ಟಿ ಕ್ಷೇತ್ರದ ಕೋರ್ಸ್ ನೀಡುತ್ತಿರುವ ಭಾರತದ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂಐಎಫ್‌ಎಸ್‌ಇ ಸಂಸ್ಥೆಯ ಮೈಸೂರು ಶಾಖೆ ನಗರದ ನಾರಾಯಣ ಶಾಸ್ತ್ರಿ ರೋಡ್ ಚೋಪ್ಡಾಸ್ 299 ಪಕ್ಕದಲ್ಲಿನ ಕಟ್ಟಡದ 2ನೇ ಮಹಡಿಯಲ್ಲಿ ಕಳೆದ 16 ವರ್ಷಗಳಿಂದ ಚಾಲನೆಯಲ್ಲಿದೆ. ಹೆಚ್ಚಿನ ಮಾಹಿತಿಗೆ 9008717027, www.mifse.com ಸಂಪರ್ಕಿಸಬಹುದು.

ರೈತರು ಉತ್ಪಾದಿಸುವ ವಸ್ತುಗಳಿಗೆ ಸಿಎಫ್‌ಟಿಆರ್‌ಐನಲ್ಲಿ ಹೆಚ್ಚು ಉತ್ತೇಜನ

ಸಂಸ್ಥೆ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಮಾಹಿತಿ



ಮೈಸೂರಿನ ಮಾನಸಗಂಗೋತ್ರಿಯ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ನಮ್ ಕಂಪನಿ ಎಂಬ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಕಾರ್ಯಕ್ರಮವನ್ನು ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಉದ್ಘಾಟಿಸಿದರು.

ಮೈಸೂರು, ಜು.15(ಬಿಎಲ್‌ಯು)– ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ 432 ವಿವಿಧ ರೀತಿಯ ತಂತ್ರಜ್ಞಾನವಿದ್ದು, ರೈತರು ಉತ್ಪಾದಿಸುವ ವಸ್ತುಗಳಿಗೆ ಹೆಚ್ಚಿನ ಉತ್ತೇಜನ ನೀಡಲಾಗುತ್ತಿದೆ ಎಂದು ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯದ ನಿರ್ದೇಶಕಿ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್ ತಿಳಿಸಿದ್ದಾರೆ.

ನಗರದ ಮಾನಸ ಗಂಗೋತ್ರಿಯ ಬಿ.ಎನ್.ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಭಾಂಗಣದಲ್ಲಿ ಇಂದು ಆಯೋಜಿಸಿದ್ದ ನಮ್ ಕಂಪನಿ ಎಂಬ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಿಎಫ್‌ಟಿಆರ್‌ಐ ಉತ್ತೇಜನ ನೀಡಿದ ರೈತರ ವಸ್ತುಗಳು ಈಗ ಅಮೇಜಾನ್ ಹಾಗೂ ಫ್ಲಿಪ್‌ಕಾರ್ಟ್‌ನಲ್ಲಿ ಕೂಡ ಮಾರಾಟವಾಗುತ್ತಿದೆ ಎಂದರು.

ಆಹಾರ ವಸ್ತುಗಳ ಪರೀಕ್ಷೆ, ಯಂತ್ರಗಳ ಕುರಿತ ತರಬೇತಿ ಸೇರಿದಂತೆ ಸಿಎಫ್‌ಐಆರ್‌ಐ ರೈತರಿಗೆ ಹಲವು ರೀತಿಯ ಕಾರ್ಯಕ್ರಮ ರೂಪಿಸುತ್ತಿದೆ. ಈ ವೇಳೆ 700ಕ್ಕೂ ಹೆಚ್ಚು ರೈತರನ್ನು ತರಬೇತಿಗೊಳಿಸಲಾಗಿದ್ದು, ಅವರು ಇನ್ನಿತರೆ ಸಾವಿರಾರು ರೈತರನ್ನು ತರಬೇತಿಗೊಳಿಸಿದ್ದಾರೆ ಎಂದು ಹೇಳಿದರು.

1950ರಲ್ಲಿ ಸ್ಥಾಪನೆಯಾದ ಸಿಎಫ್‌ಐಆರ್‌ಐ ಕಾರ್ಯಗಳಿಗೆ ರೈತರೇ ಬೆನ್ನೆಲುಬಾಗಿದ್ದಾರೆ. ರೈತರು ಇಲ್ಲದಿದ್ದರೆ ಸಿಎಫ್‌ಟಿಆರ್‌ಐ ಇಲ್ಲ ಎಂಬುವಷ್ಟರ ಮಟ್ಟಿಗೆ ರೈತರೊಡನೆ ನಮ್ಮ ಸಂಸ್ಥೆಯ ಕಾರ್ಯಗಳು ಸಮ್ಮಿಳಿತಗೊಂಡಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕೃಷಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಭಾರತ ವಿಶ್ವದಲ್ಲೆ ಅಗ್ರಸ್ಥಾನದಲ್ಲಿದೆ. ಹಸಿರುಕ್ರಾಂತಿಯಾದ ಮೇಲಂತೂ ರೈತರು ಬೆಳೆಯುವ ಬೆಳೆಗಳಲ್ಲಿ ಹೆಚ್ಚು ಇಳುವರಿ ದೊರೆಯುತ್ತಿದೆ. ಆದರೆ ಭಾರತದಲ್ಲಿ ಬೆಳೆಯುವ ಬಹಳಷ್ಟು ಹಣ್ಣು ಮತ್ತು ತರಕಾರಿಗಳು ತಂತ್ರಜ್ಞಾನದ ಕೊರತೆಯಿಂದ ವ್ಯರ್ಥವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪೌಷ್ಟಿಕಾಂಶದ ಕೊರತೆ ಸೇರಿದಂತೆ ಹಲವು ಕಾರಣಗಳಿಂದ ಭಾರತದಲ್ಲಿ ದೊರೆಯುವ ಕಚ್ಚಾ ವಸ್ತುಗಳಿಗೆ ಬೇಡಿಕೆ ಕಡಿಮೆ ಇದೆ. ಇದರಿಂದ ವಿದೇಶದಿಂದ ಬರುವ ಕಚ್ಚಾ ವಸ್ತುಗಳು ಮಾರುಕಟ್ಟೆಯನ್ನು ಆವರಿಸಿಕೊಂಡಿದೆ. ಈಗ ಭಾರತ ಇಂತಹ ಹಲವು ಸವಾಲುಗಳನ್ನು ಎದುರಿಸಿ ಉತ್ತಮ ಮಾರುಕಟ್ಟೆ ಹೊಂದಬೇಕು ಎಂದು ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಸಲಹೆ ನೀಡಿದರು.

ಸಿಎಫ್‌ಟಿಆರ್‌ಐ, ಮೈಸೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗ ಹಾಗೂ ಮಂಡ್ಯದ ವಿಕಸನ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆ ಸಂಯುಕ್ತವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಲವು ನೂರಾರು ರೈತರು ಭಾಗವಹಿಸಿದ್ದರು.

ಮೈಸೂರು ಆಕಾಶವಾಣಿಯ ಉಪ ನಿರ್ದೇಶಕ ಎಸ್.ಎಸ್.ಉಮೇಶ್, ಮಂಡ್ಯದ ನಬಾರ್ಡ್‌ನ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕಿ ಬಿ.ವಿ.ಹರ್ಷಿತಾ, ಕೊಯಮತ್ತೂರಿನ ಪಿವಿಆರ್ ಫುಡ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಒ ಸುಭದ್ರ, ಬೆಂಗಳೂರಿನ ಗ್ರೀನ್ ಅಬ್ಬಕ್ಸ್ ಆಗ್ರೊ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕಿ ಪುಷ್ಪಾದೇವಿ, ಆಕಾಶವಾಣಿಯ ಕೃಷಿರಂಗ ಕಾರ್ಯಕ್ರಮ ನಿರ್ವಾಹಕ ಎನ್.ಕೇಶವಮೂರ್ತಿ, ಮಂಡ್ಯದ ವಿಕಸನ ಸಂಸ್ಥೆ ನಿರ್ದೇಶಕ ಮಹೇಶ್‌ಚಂದ್ರಗುರು ಹಾಗೂ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಪ್ರೊ.ಸಪ್ನ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅಗಲಿದ ಗಣ್ಯರಿಗೆ ವಿಧಾನಸಭೆ ಶ್ರದ್ಧಾಂಜಲಿ



ಇತ್ತೀಚೆಗೆ ನಿಧನ ಹೊಂದಿದ ಗಣ್ಯರಿಗೆ ವಿಧಾನಸಭೆಯಲ್ಲಿ ಸೋಮವಾರ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಬೆಂಗಳೂರು, ಜು.15(ಕೆಎಂಶಿ)– ಹಿರಿಯ ಸಾಹಿತಿ ಕಮಲಾ ಹಂಪನಾ, ವಿಧಾನಸಭೆಯ ಮಾಜಿ ಉಪಸಭಾಧ್ಯಕ್ಷರಾಗಿದ್ದ ನಾಗಮ್ಮ ಕೇಶವಮೂರ್ತಿ, ಕೇಂದ್ರ ಹಾಗೂ ರಾಜ್ಯದ ಮಾಜಿ ಸಚಿವರಾಗಿದ್ದ ವಿ.ಶ್ರೀನಿವಾಸಪ್ರಸಾದ್, ಮಾಜಿ ಸಂಸದ ಸಿ.ಪಿ.ಮೂಡಲಗಿರಿಯಪ್ಪ, ಚಿತ್ರನಟ, ನಿರ್ದೇಶಕ ನಿರ್ಮಾಪಕ ದ್ವಾರಕೀಶ್, ಚಿತ್ರನಟಿ, ನಿರೂಪಕಿ ಅಪರ್ಣಾ ಸೇರಿದಂತೆ ಇತ್ತೀಚೆಗೆ ನಿಧನ ಹೊಂದಿದ ಗಣ್ಯರಿಗೆ ವಿಧಾನಸಭೆಯಲ್ಲಿ ಸೋಮವಾರ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಬೆಳಗ್ಗೆ ಸದನ ಸಮಾವೇಶಗೊಂಡಾಗ ಸಭಾಧ್ಯಕ್ಷ ಯು.ಟಿ.ಖಾದರ್ ಸಂತಾಪ ಸೂಚನಾ ನಿರ್ಣಯ ಮಂಡಿಸಿದರು.

ಸಭಾಧ್ಯಕ್ಷರ ಸಂತಾಪ ಸೂಚನೆ ಬೆಂಬಲಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಗಮ್ಮ ಕೇಶವಮೂರ್ತಿ ಅವರು ಸಾಮಾಜಿಕ ಸೇವೆಯಲ್ಲಿ ಮದರ್ ಥೆರೇಸಾ ಆಗಿದ್ದರು. ರಾಜಕಾರಣದಲ್ಲಿ ದಾವಣಗೆರೆ ಇಂದಿರಾಗಾಂಧಿ ಎಂದೇ ಖ್ಯಾತಿ ಪಡೆದಿದ್ದರು. ಶ್ರೀನಿವಾಸಪ್ರಸಾದ್ ಅವರು, ಆರು ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಶೋಷಿತರ, ದೀನ ದಲಿತರ, ಹಿಂದುಳಿದವರ ಧ್ವನಿಯಾಗಿದ್ದರು ಎಂದು ಗುಣಗಾನ ಮಾಡಿದರು.

ಚಿತ್ರನಟ ದ್ವಾರಕೀಶ್ ಅವರು ಖ್ಯಾತ ಹಾಸ್ಯನಟರಾಗಿದ್ದು, ನಿರ್ಮಾಪಕ, ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು, 'ಸಿಂಗಾಪುರದಲ್ಲಿ ರಾಜಾ ಕುಳ್ಳ' ವಿದೇಶದಲ್ಲಿ ಚಿತ್ರೀಕರಣಗೊಂಡ ಮೊದಲ ಕನ್ನಡ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು.

ಸಾಹಿತಿ ಕಮಲಾ ಹಂಪನಾ ಅವರು ಜೈನ ಧರ್ಮ, ಹಳೆಗನ್ನಡ ಗ್ರಂಥ ಸಂಪಾದನೆ ಮಾಡಿದ್ದರು. ದಾನ ಚಿಂತಾಮಣಿ, ಅತ್ತಿಮಬ್ಬೆ ಹಾಗೂ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದು, ನಾಡೋಜ ಗೌರವವೂ ಅವರಿಗೆ ಸಂದಿತ್ತು. ಚಿತ್ರನಟಿ, ನಿರೂಪಕಿ ಅಪರ್ಣಾ ಅವರು ಶುದ್ಧ ಕನ್ನಡದಲ್ಲಿ ನಿರೂಪಣೆ ಮಾಡುವ ಕಲೆ ಮೈಗೂಡಿಸಿಕೊಂಡಿದ್ದರು, ಸಾಕಷ್ಟು ಸಿನಿಮಾಗಳಲ್ಲಿ ನಟಿಸಿದ್ದರು. ಖ್ಯಾತ ಧರ್ಮಗುರುವಾಗಿದ್ದ ಖಾಝಿ ಅಸ್ಸಯ್ಯದ ಫಝುಲ ಕೋಯಮ್ಮ ಅಲ್ಬುಖಾರಿ ಅವರು ಜಾತಿ, ಧರ್ಮ, ಮತ ಭೇದವಿಲ್ಲದೆ ಮಾನವೀಯತೆಯಿಂದ ಕೂಡಿದ ವ್ಯಕ್ತಿಯಾಗಿದ್ದರು ಎಂದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ ಮಾತನಾಡಿ, ನಾನು ಶಾಸಕನಾಗಿದ್ದಾಗ ಮತ್ತು ಶಾಸಕನಾಗುವ ಮೊದಲು ಸದನದ ಸದಸ್ಯರಾಗಿದ್ದವರು ನಿಧನರಾಗಿದ್ದಾರೆ, ಅವರು ಸದನಕ್ಕೆ ಅಲ್ಲದೆ ಸಾಹಿತ್ಯ, ಚಿತ್ರರಂಗಕ್ಕೂ ಗೌರವ ತರುವ ರೀತಿಯಲ್ಲಿ ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ನಾಗಮ್ಮ ಕೇಶವಮೂರ್ತಿ ಅವರು ಮಹಿಳೆಯರಿಗೆ ದಾರಿದೀಪವಾಗಿದ್ದರು. ಶ್ರೀನಿವಾಸ ಪ್ರಸಾದ್ ಯಾವುದೇ ಪಕ್ಷದಲ್ಲಿದ್ದರೂ ತಮ್ಮತನ ಬಿಟ್ಟುಕೊಟ್ಟಿರಲಿಲ್ಲ, ತುಳಿತಕ್ಕೆ ಒಳಗಾದವರ ಧ್ವನಿಯಾಗಿ ಕೆಲಸ ಮಾಡಿದ್ದರು. ಚಿತ್ರನಟಿ ಅಪರ್ಣಾ ಅವರ ಧ್ವನಿ ಮೆಟ್ರೋದಲ್ಲಿ ಉಳಿದಿದೆ, ದ್ವಾರಕೀಶ್ ಅವರು ಹಾಸ್ಯನಟರಾಗಿ ಹೆಚ್ಚು ಚಿರಪರಿಚಿತರಾದವರು ಎಂದರು.


ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮಾತನಾಡಿ, ಶ್ರೀನಿವಾಸ ಪ್ರಸಾದ್ ಅವರು ಸ್ನೇಹಮಯಿಯಾಗಿದ್ದರು. ದ್ವಾರಕೀಶ್ ಅವರ ಸಿನಿಮಾಗಳನ್ನು ಕ್ಯೂನಲ್ಲಿ ನಿಂತು ಟಿಕೆಟ್ ಪಡೆದು ವೀಕ್ಷಿಸಲಾಗುತ್ತಿತ್ತು.

ಸಾಹಿತಿ ಕಮಲಾ ಹಂಪನಾ ಅವರ ಪುತ್ರನ ಜೊತೆ ತಾವು ವ್ಯಾಸಂಗ ಮಾಡುವಾಗ ರಾಜಾಜಿನಗರದಲ್ಲಿ ಸಮಯ ಕಳೆದಿದ್ದೆವು ಎಂದು ಒಡನಾಟವನ್ನು ಮೆಲುಕು ಹಾಕಿದರು.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾತನಾಡಿ, 14 ಜನ ಮಹನೀಯರು ನಮ್ಮನ್ನು ಅಗಲಿದ್ದಾರೆ, ಹುಟ್ಟು ಸ್ವಾಭಾವಿಕ, ಸಾವು ಖಚಿತ, ಬದುಕಿನ ಪ್ರಯಾಣ ಅಂತ್ಯಗೊಳಿಸಿದವರಿಗೆ ಸಂತಾಪ ಸಲ್ಲಿಸುತ್ತಿದ್ದೇವೆ ಎಂದು ಹೇಳಿದರು.

ಶಾಸಕರಾದ ಬಿ.ವೈ.ವಿಜಯೇಂದ್ರ, ಶಾರದಾ ಪೂರ್ವನಾಯ್ಕ, ತರೀಕೆರೆ ಶ್ರೀನಿವಾಸ, ಹರೀಶ್ ಪೂಂಜಾ, ದರ್ಶನ ಧ್ರುವನಾರಾಯಣ, ಕೂಡ್ಲಗಿ ಶ್ರೀನಿವಾಸ್, ಶೈಲೇಂದ್ರ, ಹರೀಶ್, ಕೆ.ಆರ್.ಕೃಷ್ಣಮೂರ್ತಿ, ಸಂತಪ್ಪ, ಕೃಷ್ಣಪ್ಪ ಮತ್ತಿತರರು ಸಂತಾಪ ಸೂಚಿಸಿದರು. ನಂತರ ಮೃತರ ಗೌರವಾರ್ಥ ಸದನ ಒಂದು ನಿಮಿಷ ಮೌನ ಆಚರಿಸುವ ಮೂಲಕ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿತು.

ಭಾರತದ ಪರ ಒಲಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಆಟಗಾರ ಈಗ ಸನ್ಯಾಸಿ!



ಚೆನ್ನೈ: ಒಂದಾನೊಂದು ಕಾಲದಲ್ಲಿ ಭಾರತದ ಪರ ಒಲಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಕ್ರೀಡಾಪಟುವೊಬ್ಬರು ಈಗ ಸನ್ಯಾಸಿ. ತಮಿಳುನಾಡಿನ ಥೇಣಿ ಜಿಲ್ಲೆಯ ಪೆರಿಯಾಕುಲಂನ ಈ ಯುವಕ ಹಾಕಿ ಮತ್ತು ಅಥ್ಲೆಟಿಕ್ಸ್‌ನಲ್ಲಿ ಪ್ರವೀಣನಾಗಿದ್ದ. ಆದರೆ ಅವರನ್ನು ಆಕರ್ಷಿಸಿದ್ದು ಬಾಸ್ಕೆಟ್‌ಬಾಲ್. ಈ ಯುವಕನ ಹೆಸರು ಅಮರನಾಥ್ ನಾಗರಾಜನ್.

ಶಾಲೆಯಲ್ಲಿ ಉತ್ತಮ ಬ್ಯಾಟರ್ ಮತ್ತು ಸ್ಮಾರ್ಟ್ ಆಫ್ ಸ್ಪಿನ್ನರ್ ಆಗಿದ್ದ ನಾಗರಾಜನ್ 1980ರ ಮಾಸ್ಕೋ ಒಲಿಂಪಿಕ್ಸ್‌ನಲ್ಲಿ ಆಡಿದ ಐತಿಹಾಸಿಕ ಭಾರತೀಯ ತಂಡದ ಭಾಗವಾಗಿದ್ದರು. ಭಾರತ ಈವರೆಗೆ ಒಲಂಪಿಕ್ಸ್‌ನಲ್ಲಿ ಒಂದು ಬಾರಿ ಮಾತ್ರ ಬಾಸ್ಕೆಟ್‌ಬಾಲ್ ಹಣಾಹಣಿಯಲ್ಲಿ ಭಾಗವಹಿಸಿತ್ತು. ಈ ಅವಕಾಶ ಭಾರತಕ್ಕೆ ಸಿಕ್ಕಿದ್ದು ಸಹ ಅನಿರೀಕ್ಷಿತವಾಗಿತ್ತು. ಅಮೆರಿಕಾ ಒಲಂಪಿಕ್ಸ್ ಅನ್ನು ಬಹಿಷ್ಕರಿಸಿದ್ದ ಕಾರಣ ಭಾರತಕ್ಕೆ ಈ ಅವಕಾಶ ದೊರೆತಿತ್ತು.

1982ರ ಏಷ್ಯನ್ ಗೇಮ್ಸ್‌ನಲ್ಲಿ ಭಾರತೀಯ ಬಾಸ್ಕೆಟ್‌ಬಾಲ್ ತಂಡದ ನಾಯಕರೂ ಆಗಿದ್ದ ಸ್ವಾಮಿ ನಟೇಶಾನಂದ ಸರಸ್ವತಿ ಅವರು ಇತ್ತೀಚೆಗೆ ಪ್ರಾದೇಶಿಕ ಕ್ರೀಡಾ ಕೇಂದ್ರದಲ್ಲಿ ಸ್ಪೋರ್ಟ್‌ಸ್ಟಾರ್‌ನೊಂದಿಗೆ ಸಂವಾದದಲ್ಲಿ ಈ ಮಾಹಿತಿ ತೆರೆದಿಟ್ಟಿದ್ದಾರೆ. ಹತ್ತು ವರ್ಷಗಳ ಹಿಂದೆ, ಅಮರನಾಥ್ ನಾಗರಾಜನ್ ಅವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಸಹಾಯಕ ಜನರಲ್ ಮ್ಯಾನೇಜರ್ ಆಗಿ ನಿವೃತ್ತರಾದರು. 2019ರಲ್ಲಿ ಅವರ ಹೆಂಡತಿಯ ಮರಣದ ಸುಮಾರು ಒಂದು ವರ್ಷದ ನಂತರ ಅವರು ಅನೇಕ ಧರ್ಮದ ಕಡೆ ಆಕರ್ಷಿತರಾಗಿ ಸನ್ಯಾಸ ಸ್ವೀಕರಿಸಿದರು.

ಬ್ರೆಜಿಲಿಯನ್ ಮಾಡೆಲ್ ಕ್ಯಾಟ್ ಟೋರೆಸ್‌ಗೆ 8 ವರ್ಷ ಜೈಲು ಶಿಕ್ಷೆ



ಬ್ರೆಜಿಲಿಯನ್: ಮಾನವ ಕಳ್ಳಸಾಗಾಣಿಕೆ ಮತ್ತು ಮಹಿಳೆಯರನ್ನು ಗುಲಾಮಗಿರಿಯಲ್ಲಿ ಇರಿಸಿಕೊಂಡಿದ್ದಕ್ಕಾಗಿ ಬ್ರೆಜಿಲಿಯನ್ ಮಾಡೆಲ್ ಮತ್ತು ಯುಎಸ್ ಮೂಲದ ವೆಲ್‌ನೆಸ್ ಇನ್‌ಫ್ಲುಯೆನ್ಸರ್ ಕ್ಯಾಟ್ ಟೋರೆಸ್ ಅವರಿಗೆ 8 ವರ್ಷಗಳ ಶಿಕ್ಷೆ ವಿಧಿಸಲಾಗಿದೆ. 2022ರಿಂದ ಈಕೆಯ ಜೊತೆಗೆ ವಾಸಿಸುತ್ತಿದ್ದ ಇಬ್ಬರು ಮಹಿಳೆಯ ನಾಪತ್ತೆಯಾಗಿದ್ದಾರೆ.

ಆಕೆ ತನ್ನ ಫಾಲೋವರ್‌ಗಳನ್ನು ಲೈಂಗಿಕ ಕಾರ್ಯಕರ್ತೆಯರನ್ನಾಗಿ ಬದಲಾಯಿಸಿ, ಗುಲಾಮರಂತೆ ಇರಿಸಿಕೊಂಡಿದ್ದಳು ಎಂದು ತಿಳಿದು ಬಂದಿದೆ. ಟೋರೆಸ್ ಜೊತೆಗಿದ್ದ ಮಹಿಳೆಯರು, ಅವಳೊಂದಿಗೆ ವಾಸಿಸುವ ಘೋರ ಅನುಭವದ ಬಗ್ಗೆ ಮಾತನಾಡಿದ್ದಾರೆ. ಟೋರೆಸ್‌ನ ಮಾಜಿ ಫ್ಲಾಟ್ ಮೇಟ್, ನ್ಯೂಯಾರ್ಕ್‌ನಲ್ಲಿ ಅವಳೊಂದಿಗೆ ಮನೆಯನ್ನು ಹಂಚಿಕೊಂಡಿದ್ದು, ಅವಳ ಹಾಲಿವುಡ್ ಸ್ನೇಹಿತರು ಅಯಾಹುವಾಸ್ಕಾ ಎಂಬ ಭ್ರಮೆಗೆ ಕಾರಣವಾಗುವ ಔಷಧವನ್ನು ಪರಿಚಯಿಸಿದ್ದಾರೆ ಎಂದು ಬಿಬಿಸಿಗೆ ತಿಳಿಸಿದರು. ಈ ಔಷಧಿಯ ಬಳಕೆಯ ಮೂಲಕ ಅವಳು ತನ್ನನ್ನು ತಾನು ಲೈಫ್ ಕೋಚ್ ಮತ್ತು ಹಿಪ್ನಾಟಿಸ್ಟ್ ಆಗಿ ಮರುಶೋಧಿಸಿಕೊಂಡಳು. ಟೋರೆಸ್ ವೆಲ್‌ನೆಸ್ ವೆಬ್‌ಸೈಟ್ ಅಂಡ್ ಸಬ್‌ಸ್ಕ್ರಿಪ್ಷನ್ ಸರ್ವೀಸ್‌ನ್ನು ಶುರು ಮಾಡಿದ್ದಳು. ನೀವು ಯಾವಾಗಲೂ ಕನಸು ಕಾಣುವ ಪ್ರೀತಿ, ಹಣ ಮತ್ತು ಸ್ವಾಭಿಮಾನದ ಭರವಸೆ ನೀಡುತ್ತದೆ ಎಂದು ಗ್ರಾಹಕರಿಗೆ ಹೇಳುತ್ತಿದ್ದಳು.

ರೋಟರಿ ಐವರಿ ಸಿಟಿ ನೂತನ ಪದಾಧಿಕಾರಿಗಳ ಪದಗ್ರಹಣ



ಮೈಸೂರು ರೋಟರಿ ಐವರಿ ಸಿಟಿ ಮೈಸೂರು ವತಿಯಿಂದ 2024–25ರ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಆಯೋಜಿಸಲಾಗಿತ್ತು. ಅಧ್ಯಕ್ಷ ರೊ.ಕೆ. ಶಶಿಧರ್, ಮಾಜಿ ಜಿಲ್ಲಾ ರೋ. ಅಭಿನಂದನ್, ಮಾಜಿ ಅಧ್ಯಕ್ಷ ರೊ.ಸಂಜಯ್ ಅರಸ್, ಕಾರ್ಯದರ್ಶಿ ರೊ.ಶೋಭಾನಾಗರಾಜ್, ರೊ.ಡಾ.ಪ್ರಹ್ಲಾದ್, ಖಜಾಂಚಿ ರೊ.ಎಸ್.ಬಾಲಚಂದರ್, ಸಹಾಯಕ ಕಾರ್ಯದರ್ಶಿ ರೊ.ಇಫ್ತಿಕರ್ ಅಹಮದ್, ಉಪಾಧ್ಯಕ್ಷರಾದ ರೊ.ಎಂ.ಕೆ.ಮುಕೇಶ್, ರೊ.ಸುನಿಲ್ ಬಾಳಿಗಾ, ರೊ.ಡಾ.ಎಂ.ಕೆ.ಸಚ್ಚಿದಾನಂದನ್, ರೊ.ಮಂಜುಳಾ ಬಾಲಚಂದರ್, ರೊ.ಬಿ.ಜಿ.ನಾಗರಾಜು, ರೊ.ಶಬನಾ ಇಫ್ತಿಕರ್, ರೊ.ಮಂಜುಳ ಬಾಲಚಂದರ್, ರೊ.ಕೇಶವ್ ಬಿ.ಕಾಂಚನ್, ರೊ.ಬಾಬು ಅತ್ತರ್, ರೊ.ಜ್ಯೋತಿ ಮುಖೇಶ್, ರೊ.ಪೂಜಾ ಬಾಳಿಗಾ, ರೊ.ಲತಾ ಸಚ್ಚಿ ಹಾಗೂ ಮುಂತಾದವರು ಉಪಸ್ಥಿತರಿದ್ದರು. ಇದೇ ವೇಳೆ ಸಮಾಜ ಸೇವಕರು, ಯೋಗಪಟುಗಳೂ ಆದ ನಿರ್ವಾಣ ಯೋಗ ಕೇಂದ್ರದ ಗುರೂಜಿ ಶಶಿಕುಮಾರ್ ಹಾಗೂ ಸ್ವಾಮಿ ವಿವೇಕಾನಂದ ಯುವ ಕೇಂದ್ರದ ಕಾರ್ಯಕ್ರಮ ವ್ಯವಸ್ಥಾಪಕಿ ನಂದಿನಿ ಶಂಕರ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಹೆಂಡತಿ, ಮಕ್ಕಳ ಕಾಪಾಡಲು ಗುಂಡಿಗೆ ಎದೆಯೊಡ್ಡಿದ ಅಪ್ಪ!

ವಾಷಿಂಗ್ಟನ್: ಅಮೆರಿಕಾ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪೆನ್ಸಿಲ್ವೇನಿಯಾ ರ್ಯಾಲಿಯಲ್ಲಿ ಭಾಷಣ ಮಾಡುವಾಗ ಅವರನ್ನು ಕೊಲೆ ಮಾಡಲೆಂದು ಶೂಟರ್ ಒಬ್ಬ ಗುಂಡು ಹಾರಿಸಿದ್ದ. ಆ ಗುಂಡು ಕೊಂಚ ಗುರಿ ತಪ್ಪಿ ಟ್ರಂಪ್ ಕಿವಿಯನ್ನು ಸೀಳಿದ್ದರಿಂದ ಕೂದಲೆಳೆ ಅಂತರದಲ್ಲಿ ಅವರು ಪ್ರಾಣಾಪಾಯದಿಂದ ಪಾರಾಗಿದ್ದರು. ಈ ವೇಳೆ ಅಗ್ನಿಶಾಮಕದಳದ ಸಿಬ್ಬಂದಿಯೊಬ್ಬರಿಗೆ ಗುಂಡು ತಾಗಿ ಅವರು ಮೃತಪಟ್ಟಿದ್ದರು. ಆ ವ್ಯಕ್ತಿ ತನ್ನ ಹೆಂಡತಿ ಮತ್ತು ಹೆಣ್ಣುಮಕ್ಕಳನ್ನು ಗುಂಡಿನಿಂದ ರಕ್ಷಿಸುವಾಗ ಪ್ರಾಣ ಕಳೆದುಕೊಂಡಿದ್ದಾರೆ. ಟ್ರಂಪ್ ಅವರನ್ನು ಗುರಿಯಾಗಿಸಿಕೊಂಡು ನಡೆದ ಗುಂಡಿನ ದಾಳಿಯಲ್ಲಿ ಸಾವನ್ನಪ್ಪಿದ ಪ್ರೇಕ್ಷಕನನ್ನು 50 ವರ್ಷ ವಯಸ್ಸಿನ ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಎರಡು ಹೆಣ್ಣುಮಕ್ಕಳ ತಂದೆ ಕೋರೆ ಕಾಂಪರೇಟೋರ್ ಎಂದು ಗುರುತಿಸಲಾಗಿದೆ. ಅವರು ಟ್ರಂಪ್ ಅವರ ಬೆಂಬಲಿಗರೂ ಆಗಿದ್ದರು. ತಮ್ಮ ಕುಟುಂಬದೊಂದಿಗೆ ಟ್ರಂಪ್ ಭಾಷಣ ಕೇಳಲು ಬಂದಿದ್ದ ಅವರಿಗೆ ಗುಂಡು ತಾಗಿ ಮೃತಪಟ್ಟಿದ್ದಾರೆ. ಗುಂಡು ಹಾರಿಬಂದಾಗ ಅವರು ತಮ್ಮ ಕುಟುಂಬವನ್ನು ಕಾಪಾಡಲು ಅವರ ಮೇಲೆ ಬಿದ್ದು, ಗಟ್ಟಿಯಾಗಿ ತಬ್ಬಿಕೊಂಡರು. ಈ ವೇಳೆ ಅವರಿಗೆ ಗುಂಡು ತಾಗಿದೆ. ಇಬ್ಬರು ಹೆಣ್ಣುಮಕ್ಕಳ ತಂದೆ ಕೋರೆ ಪ್ರತಿ ಭಾನುವಾರ ಚರ್ಚ್‌ಗೆ ಹೋಗುತ್ತಿದ್ದರು.

ಒಕ್ಕಲಿಗರ ಬದುಕು ಹಸನಾಗಲು ಹಂಬಲಿಸಿದವರು ಕೆ.ಎಚ್.ರಾಮಯ್ಯ



ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಕೆ.ಹೆಚ್. ರಾಮಯ್ಯನವರ ಜನ್ಮದಿನದ ಪ್ರಯುಕ್ತ ರಾಮಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಮೈಸೂರು,ಜು.15–ಒಕ್ಕಲಿಗ ಸಮುದಾಯ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸಿದ್ದರೆ, ಅದರ ಹಿಂದಿನ ಶಕ್ತಿ ಕೆ.ಎಚ್.ರಾಮಯ್ಯ ಎಂದು ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಹೇಳಿದರು.

ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ಕೆ.ಹೆಚ್.ರಾಮಯ್ಯನವರ ಜನ್ಮದಿನದ ಪ್ರಯುಕ್ತ ರಾಮಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಒಕ್ಕಲಿಗರಲ್ಲಿ ಸಂಘಟನೆ ಹಾಗೂ ಸಾಮಾಜಿಕ ಪ್ರಜ್ಞೆ ಬೆಳೆಸುವ ಮುಖಾಂತರ ಒಕ್ಕಲಿಗರ ಬದುಕು ಹಸನಾಗಲು ಹಂಬಲಿಸಿದರು ಎಂದು ಹೇಳಿದರು.

ಕೃಷಿ ನಿರತರಾದ ಒಕ್ಕಲಿಗರು ವಿದ್ಯಾಭ್ಯಾಸ ವಂಚಿತರಾದ ಸಂದರ್ಭದಲ್ಲಿ ಶ್ರೀಯುತರು ಶಿಕ್ಷಣಕ್ಕೆ ಒತ್ತು ನೀಡಿದರು. ಧಾರ್ಮಿಕ ಕ್ಷೇತ್ರವಾಗಿ ಆದಿಚುಂಚನಗಿರಿ ಸಂಸ್ಥಾನ ಬೆಳಕಿಗೆ ಬರುವಲ್ಲಿ ಶ್ರಮಿಸಿದರು. ಮೈಸೂರು ರಾಜರಾಗಿದ್ದ ರಾಜರ್ಷಿ ನಾಲ್ವಡಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡು ಹಿಂದುಳಿದ ವರ್ಗದ ಮೀಸಲಾತಿಗೆ ಮಿಲ್ಲರ್ ವರದಿ ಅನುಷ್ಠಾನಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಹೇಳಿದರು.

ಕೈಗಾರಿಕಾ ಹಾಗೂ ವಾಣಿಜ್ಯ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜ್ ಮಾತನಾಡಿ, ಒಕ್ಕಲಿಗ ಸಮುದಾಯದ ನೆಲೆ ಹಿನ್ನೆಲೆಯನ್ನು ಗಮನಿಸಿದಾಗ ಅಗ್ರಪಂಕ್ತಿಯ ಶ್ರೇಷ್ಠ ನಾಯಕರಾಗಿದ್ದ ಕೆ.ಎಚ್.ರಾಮಯ್ಯನವರು ಒಕ್ಕಲಿಗರ ಜೊತೆ ಹಿಂದುಳಿದ ಶೋಷಿತ ಸಮುದಾಯದ ಜನರ ಬದುಕಿಗೆ ಒತ್ತಾಸೆಯಾಗಿದ್ದರು ಎಂದು ಹೇಳಿದರು.

ಸಮಾಜಸೇವಕ ರಘುರಾಮ್ ವಾಜಪೇಯಿ ಮಾತನಾಡಿ, ಕೆ.ಎಚ್.ರಾಮಯ್ಯ ಅವರ ಜನಪರ ಕಾಳಜಿ, ಕಳಕಳಿ, ಸಾಮಾಜಿಕ ಬದ್ಧತೆಯನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಬೇಕು ಎಂದರು.

ಮಹಾಸಭಾ ಸಂಸ್ಥಾಪಕ ಅಧ್ಯಕ್ಷ ಎನ್ ಬೆಟ್ಟೇಗೌಡ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ಕೆ.ಎಚ್.ರಾಮಯ್ಯನವರು ಶೋಷಿತರ, ಹಿಂದುಳಿದ, ದೀನ–ದಲಿತರ ಪರವಾಗಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಂತಹ ಕಾರ್ಯಕ್ರಮಗಳಾದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಅಭಿವೃದ್ಧಿಗೆ ಕಾರಣರಾದ ಅಗ್ರ ಪಂಕ್ತಿಯ ಮಹಾವ್ಯಕ್ತಿ ಎಂದರು.

ಅಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಅಂತರರಾಷ್ಟ್ರೀಯ ನಿರ್ದೇಶಕ ಡಾ.ನಾಗರಾಜ ವಿ.ಭೈರಿ, ಮಹಾಸಭಾ ಉಪಾಧ್ಯಕ್ಷ ಲಕ್ಷ್ಮಿದೇವಿ, ಕನ್ನಡ ಜಾನಪದ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಕಾವೇರಿ ಪ್ರಕಾಶ್, ಅಲಿಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಮೈಸೂರು ಘಟಕದ ರಾಜ್ಯಪಾಲರಾದ ಸಿರಿ ಬಾಲು, ಮೈಸೂರು ಕೋ–ಆಪರೇಟ್ ಬ್ಯಾಂಕ್‌ನ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಅಶೋಕ್ ಇತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಡೆಂಗ್ಯೂ ಹರಡದಂತೆ ಹೆಚ್ಚಿನ ನಿಗಾ ವಹಿಸಿ

ಜಿಲ್ಲಾಧಿಕಾರಿ ಡಾ.ಕುಮಾರ ಸೂಚನೆ



ಡಾ.ಕುಮಾರ್

ಮಂಡ್ಯ,ಜು.15– ಡೆಂಗ್ಯೂ ಜ್ವರಕ್ಕೆ ಸರಿಯಾದ ಚಿಕಿತ್ಸೆ ಪಡೆಯದಿದ್ದಲ್ಲಿ ಮಾರಣಾಂತಿಕವಾಗಿ ಪರಿಣಮಿಸುತ್ತದೆ. ಜಿಲ್ಲೆಯಲ್ಲಿ ಡೆಂಗ್ಯೂ ಜ್ವರ ಹರಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಡಾ. ಕುಮಾರ ಅವರು ಅಧಿಕಾರಿಗಳಿಗೆ ತಿಳಿಸಿದರು.

ಸೋಮವಾರ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು. ಜಿಲ್ಲೆಯಲ್ಲಿ 415 ಪ್ರಕರಣಗಳು ವರದಿಯಾಗಿದ್ದು, ಒಂದೇ ಸ್ಥಳದಲ್ಲಿ 2 ಅಥವಾ ಹೆಚ್ಚಿನ ಪ್ರಕರಣ ಕಂಡುಬಂದಲ್ಲಿ ತಕ್ಷಣ ಸುತ್ತಮುತ್ತ ಪ್ರದೇಶದಲ್ಲಿ ಕಡ್ಡಾಯವಾಗಿ ಲಾರ್ವಾ ಪರೀಕ್ಷೆ ನಡೆಸಿ ಎಂದು ಸೂಚಿಸಿದರು.

ಡೆಂಗ್ಯೂ ಪ್ರಕರಣಗಳಲ್ಲಿ ವಯಸ್ಸುವಾರು ಪಟ್ಟಿ ಮಾಡಿಕೊಂಡು ಮಕ್ಕಳಲ್ಲಿ ಹೆಚ್ಚು ಕಂಡುಬಂದಿದ್ದರೆ. ಅಂತಹ ಶಾಲೆ ಹಾಗೂ ಅಂಗನವಾಡಿಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ ಸುತ್ತಮುತ್ತಲಿನ ಪ್ರದೇಶವನ್ನು ಪರಿಶೀಲಿಸಬೇಕು. ತಾಲೂಕು ಮಟ್ಟದಲ್ಲಿ ತಹಶೀಲ್ದಾರ್, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ವೈದ್ಯಾಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಬ್ಲಾಕ್ ಶಿಕ್ಷಣಾಧಿಕಾರಿಗಳು ಸಭೆ ನಡೆಸಿ ಡೆಂಗ್ಯೂ ತಡೆಗಟ್ಟುವ ಬಗ್ಗೆ ಯೋಜನೆಗಳನ್ನು ರೂಪಿಸಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ ಎಂದರು.

ಸ್ಥಳೀಯ ಸಂಸ್ಥೆಗಳು ಹಾಗೂ ಆರೋಗ್ಯ ಇಲಾಖೆಯವರು ಪ್ರತಿ ದಿನ ದೊಡ್ಡ ಶಾಲೆ ಹಾಗೂ ಹಾಸ್ಟಲ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ನೀಡಿ. ಆರೋಗ್ಯ ಇಲಾಖೆಯಿಂದ ಸಾರ್ವಜನಿಕರು ಹಾಗೂ ಮಕ್ಕಳು ಕೈಗೊಳ್ಳಬೇಕಿರುನ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ತಿಳಿಸಿ ಅನುಸರಿಸುವಂತೆ ಪ್ರೇರೇಪಿಸಿ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮೋಹನ್, ಡೆಂಗ್ಯೂ ಹರಡುವ ಸೊಳ್ಳೆ ಕಡಿತವನ್ನು ತಪ್ಪಿಸಲು ಆದಷ್ಟು ಸಾರ್ವಜನಿಕರು ತುಂಬು ತೋಳಿನ ಉಡುಪು ಧರಿಸಿ, ಬೇವಿನ ಎಣ್ಣೆಯನ್ನು ಕೈ ಮತ್ತು ಕಾಲಿಗೆ ಹಚ್ಚಿಕೊಳ್ಳಿ, ಜ್ವರ ಬಂದ ತಕ್ಷಣ ಹತ್ತಿರದ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರೀಕ್ಷೆಗೆ ಒಳಪಡಿ ಎಂದರು.

ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಆರೋಗ್ಯ ಇಲಾಖೆಯ 157 ಆರೋಗ್ಯ ಮತ್ತು ಕ್ಷೇಮ ಕೇಂದ್ರಕ್ಕೆ ಸ್ಥಳದ ಅವಶ್ಯಕತೆ ಇದ್ದು, ಗ್ರಾಮದ ಹತ್ತಿರ ಸ್ಥಳವನ್ನು ಗುರುತಿಸಬೇಕು. ಪ್ರಧಾನ ಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆಯಡಿ 18 ರಿಂದ 50 ವರ್ಷದೊಳಗಿನವರು ವಾರ್ಷಿಕವಾಗಿ ರೂ.436 ಪ್ರೀಮಿಯಂ ಪಾವತಿಸಿ ಯಾವುದೇ ಕಾರಣಕ್ಕೂ ಮೃತಪಟ್ಟರೂ ರೂ 2 ಲಕ್ಷದ ವಿಮೆ ಹಾಗೂ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆಯಡಿ ವಾರ್ಷಿಕವಾಗಿ ರೂ 20 ಪ್ರೀಮಿಯಂ ಪಾವತಿಸಿದರೆ ಅಪಘಾತದಿಂದ ಮೃತಪಟ್ಟಲ್ಲಿ ರೂ. 2 ಲಕ್ಷದ ವಿಮೆ ದೊರೆಯಲಿದೆ. ಈ ಬಗ್ಗೆ ಎಲ್ಲಾ ಸಿಬ್ಬಂದಿಗಳು, ಮಹಿಳಾ ಸಂಘಗಳು, ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ಮಾಹಿತಿ ನೀಡಿ ನೋಂದಾಯಿಸಿಕೊಳ್ಳುವಂತೆ ಪ್ರೇರೇಪಿಸಿ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಮತ್ತು ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ ಡಾ.ಮೋಹನ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ತ.ನಾಡಿಗೆ ನೀರು ಬಿಡುವ ಸರ್ವಪಕ್ಷ ಸಭೆ ನಿರ್ಧಾರಕ್ಕೆ ರೈತರ ಆಕ್ರೋಶ

ಮಂಡ್ಯ, ಜು.15–ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ಪ್ರತಿನಿತ್ಯ ಎಂಟು ಸಾವಿರ ಕ್ಯುಸೆಕ್ ನೀರು ಬಿಡಲು ಸರ್ವಪಕ್ಷದ ಸಭೆಯಲ್ಲಿ ತೀರ್ಮಾನ ಮಾಡಿರುವುದು ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ಸೂಚನೆಯನ್ನು ಒಪ್ಪಿಕೊಂಡಂತಾಗಿದೆ. ಆದೇಶ ಪಾಲನೆ ಮಾಡಿದ ನಂತರ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸುವುದು ಎಲ್ಲಿಂದ ಬಂತು ಎಂದು ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಪ್ರಶ್ನಿಸಿದರು.



ತಮಿಳುನಾಡಿಗೆ ನೀರು ಬಿಡುವ ಸರ್ವಪಕ್ಷ ಸಭೆ ನಿರ್ಧಾರದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಆಕ್ರೋಶ ವ್ಯಕ್ತಪಡಿಸಿತು.

ನಗರದ ಸರ್‌ಎಂವಿ ಪ್ರತಿಮೆ ಎದುರು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಹೋರಾಟದಲ್ಲಿ ಮಾತನಾಡಿದ ಅವರು, ತಮಿಳುನಾಡಿಗೆ ನಿರಂತರ ನೀರು ಹರಿಸಿದರೆ ಕೃಷ್ಣರಾಜಸಾಗರದಲ್ಲಿ ನೀರಿನ ಪ್ರಮಾಣ ಕುಸಿತ ಕಾಣಲಿದೆ, ಕುಡಿಯುವ ನೀರು ಮತ್ತು ಬೆಳೆಗಳಿಗೆ ನೀರು ಕೊಡಲು ಹೇಗೆ ಸಾಧ್ಯ? ಕಳೆದ ಬಾರಿ ಬೆಳೆ ಬೆಳೆಯಲು ಸಾಧ್ಯವಾಗದೆ ರೈತರು ಸಂಕಷ್ಟದಲ್ಲಿದ್ದಾರೆ. ಮುಂದಿನ ಮೂರು ವರ್ಷಗಳ ಕಾಲ ಸಮೃದ್ಧವಾಗಿ ಬೆಳೆ ಬೆಳೆದರೆ ಸಂಕಷ್ಟದಿಂದ ಹೊರಬರಲು ಸಾಧ್ಯ ಆದರೆ ನೀರು ಬಿಡುವ ಸರ್ಕಾರದ ತೀರ್ಮಾನ ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ವಿಧಾನಮಂಡಲ ಅಧಿವೇಶನದಲ್ಲಿ ಕಾವೇರಿ ಚರ್ಚೆ ಸಾಧ್ಯತೆ ಕಡಿಮೆ. ಸರ್ಕಾರದ ಹಗರಣಗಳ ವಿರುದ್ಧ ಚರ್ಚೆಗೆ ಪ್ರತಿಪಕ್ಷಗಳು ಹೆಚ್ಚಿನ ಆಸಕ್ತಿ ತೋರಲು ಮುಂದಾಗಿದೆ ಹಾಗಾಗಿ ನಿಲುವಳಿ ಸೂಚನೆಯಲ್ಲಿ ಕಾವೇರಿ ಚರ್ಚೆ ನಡೆಯುವ ಬಗ್ಗೆ ಅನುಮಾನ ವ್ಯಕ್ತಪಡಿಸಿದರು.

ರಾಜಕೀಯ ಪಕ್ಷಗಳಿಗೆ ರೈತರ ಹಿತ ಕಾಪಾಡುವ ಕಾಳಜಿ ಇಲ್ಲ. ಇಚ್ಛಾಶಕ್ತಿ ಕೊರತೆಯಿಂದ ರೈತರಿಗೆ ನಿರಂತರ ಅನ್ಯಾಯವಾಗುತ್ತಿದೆ. ಸರ್ವಪಕ್ಷಗಳ ಸಭೆಯಲ್ಲಿ ಕೈಗೊಂಡಿರುವ ನೀರು ಬಿಡುವ ತೀರ್ಮಾನವನ್ನು ಒಪ್ಪಲು ಸಾಧ್ಯ ಇಲ್ಲ. ಈ ಕೂಡಲೇ ಸರ್ವಪಕ್ಷ ಸಭೆಯ ನಿರ್ಣಯವನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

ಸಮಿತಿಯ ಸಂಘಟನಾ ಕಾರ್ಯದರ್ಶಿ ಸುನಂದ ಜಯರಾಮ್ ಮಾತನಾಡಿ, ರಾಜ್ಯದ ಮೂರು ರಾಜಕೀಯ ಪಕ್ಷಗಳು ಕಾವೇರಿ ವಿಚಾರವನ್ನು ಗಂಭೀರವಾಗಿ ಪರಿಗಣಿಸಿಲ್ಲ. ಅವರ ಇಚ್ಛಾ ಶಕ್ತಿ ಕೊರತೆಯಿಂದ ರೈತರಿಗೆ ನಿರಂತರ ಅನ್ಯಾಯ ವಾಗುತ್ತಿದೆ, ನೀರು ಬಿಡುವ ನಿರ್ಣಯವನ್ನು ಒಪ್ಪುವುದಿಲ್ಲ. ಸದನದಲ್ಲಿ ಚರ್ಚೆ ಮಾಡಬೇಕಾಗಿರುವುದು ಕಾವೇರಿ ಕೊಳ್ಳ ಬಾಗದ ಜನಪ್ರತಿನಿಧಿಗಳ ಜವಾಬ್ದಾರಿ. ಕಾವೇರಿ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುವುದು ಸರಿಯಲ್ಲ. ಈ ಬಗ್ಗೆ ಸಮಗ್ರ ಚರ್ಚೆ ನಡೆಸಿ ರೈತರ ಹಿತ ಕಾಪಾಡಲು ಮುಂದಾಗಬೇಕೆಂದರು.

ಕಾವೇರಿ ನೀರಿಗಾಗಿ ಹೋರಾಟ ಮಾಡಬೇಕಾಗಿರುವುದು ಪ್ರತಿಯೊಬ್ಬರ ಜವಾಬ್ದಾರಿ, 8 ಜಿಲ್ಲೆಗಳ ಜನತೆ ಬೀದಿಗಿಳಿದು ಹೋರಾಟ ಮಾಡಬೇಕು. ಇಲ್ಲದಿದ್ದರೆ ಮುಂದಿನ ಸಂಕಷ್ಟ ಕಾಲಕ್ಕೆ ಅವರೇ ಹೊಣೆ ಎಂದು ಎಚ್ಚರಿಸಿದರು.

ರೈತ ಹಿತರಕ್ಷಣಾ ಸಮಿತಿಯ ಕೆ.ಬೋರಯ್ಯ, ರೈತ ಸಂಘದ ಇಂಡುವಾಳು ಚಂದ್ರಶೇಖರ್, ಮುದ್ದೇಗೌಡ, ಶಿವಳ್ಳಿ ಚಂದ್ರಶೇಖರ್, ದೇವೇಗೌಡ, ಡಾ.ಎಸ್.ನಾರಾಯಣ್, ಬಸವರಾಜ್, ಸುಶೀಲಮ್ಮ, ವೀಣಾಂಬ, ಇಂದಿರಾ, ಮಂಜುಳಾ, ವನಜಾಕ್ಷಿ, ಪುಟ್ಟಸ್ವಾಮಿ, ನಾಗೇಶ್, ಪ್ರಸಾದ್, ನಾರಾಯಣಸ್ವಾಮಿ, ಕೆಂಪೇಗೌಡ, ಎಚ್.ಸಿ.ಮಂಜುನಾಥ್, ಮಹಾಂತಪ್ಪ, ಬಸವೇಗೌಡ, ಎಂ.ಎಲ್.ತುಳಸೀಧರ್ ಭಾಗವಹಿಸಿದ್ದರು.

ಮೇಲುಕೋಟೆ ಗ್ರಾಪಂ ಅಧ್ಯಕ್ಷರಾಗಿ ಮಣಿ ಮುರುಗನ್ ಆಯ್ಕೆ



ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ ಆಯ್ಕೆಯಾದ ಮಣಿ ಮುರುಗನ್ ಹಾಗೂ ಜಿ.ಕೆ ಕುಮಾರ್ ಅವರನ್ನು ಅಭಿನಂದಿಸಲಾಯಿತು.

ಮೇಲುಕೋಟೆ,ಜು.15–ಮೇಲುಕೋಟೆ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಮಣಿ ಮುರುಗನ್ ಬಹುಮತದಿಂದ ಆಯ್ಕೆಯಾದರೆ ಉಪಾಧ್ಯಕ್ಷರಾಗಿ ಜಿ.ಕೆಕುಮಾರ್ ಅವಿರೋಧವಾಗಿ ಆಯ್ಕೆಯಾದರು

ಈ ಹಿಂದೆ ಅಧ್ಯಕ್ಷರಾಗಿದ್ದ ಸೋಮಶೇಖರ್ ಮತ್ತು ಉಪಾಧ್ಯಕ್ಷರಾಗಿದ್ದ ಎನ್. ತಿರುಮಲ್ಯೆ ಅವಧಿ ಮುಕ್ತಾಯವಾಗಿ ತೆರವಾಗಿದ್ದ ಸ್ಥಾನಕ್ಕೆ ಸೋಮವಾರ ಚುನಾವಣೆ ನಿಗಧಿಯಾಗಿತ್ತು. 9 ಮಂದಿ ಸದಸ್ಯ ಬಲದ ಗ್ರಾಮ ಪಂಚಾಯಿತಿ ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿತ್ತು. ಅಧ್ಯಕ್ಷ ಗಾದಿಗೆ ಜೆಡಿಎಸ್ ಬೆಂಬಲಿತರಾದ ಮಣಿಮುರುಗನ್ ರೈತಸಂಘ ಬೆಂಬಲಿತ ಭಾಗ್ಯಮ್ಮ ಸ್ಪರ್ಧಿಸಿದ್ದರು. ಮಣಿಮುರುಗನ್ ಪರವಾಗಿ 7 ಮತಗಳು ಚಲಾವಣೆಯಾದರೆ ಭಾಗ್ಯಮ್ಮ ಪರವಾಗಿ 2 ಮತಗಳು ಬಂದವು. ಹೀಗಾಗಿ ನೂತನ ಅಧ್ಯಕ್ಷರಾಗಿ ಎರಡನೇ ಸಲ ಮಣಿ ಮುರುಗನ್ ಆಯ್ಕೆಯಾದರು. ಉಪಾಧ್ಯಕ್ಷ ಸ್ಥಾನಕ್ಕೆ ಜಿ.ಕೆ.ಕುಮಾರ್ ಹೊರತುಪಡಿಸಿ ಯಾರೂ ನಾಮಪತ್ರ ಸಲ್ಲಿಸದ ಕಾರಣ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು. ಪಾಂಡವಪುರ ತಾಲೂಕು ನರೇಗ ಸಹಾಯಕ ನಿರ್ದೇಶಕ ಸುರೇಂದ್ರ ಚುನಾವಣಾಧಿಕಾರಿಯಾಗಿ ಭಾಗವಹಿಸಿ ಚುನಾವಣಾ ಪ್ರಕ್ರಿಯೆಯನ್ನು ನಡೆಸಿದರು. ಅಧ್ಯಕ್ಷ ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಗಳು ಹಾಗೂ ಸದಸ್ಯರಾದ ವಾದ್ಯಾರ್ ತಿರುಮಲ್ಯೆ, ಸೋಮಶೇಖರ್, ಹೊಸಹಳ್ಳಿ ಜಯರಾಮೇಗೌಡ, ಲಕ್ಷ್ಮಮ್ಮ, ಭವಾನಿ, ರಾಜೇಶ್ವರಿ ಚುನಾವಣೆಯಲ್ಲಿ ಪಾಲ್ಗೊಂಡು ಮತದಾನ ಮಾಡಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾರ್ಗದರ್ಶನದಲ್ಲಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಜೆಡಿಎಸ್ ಬೆಂಬಲಿತ ಸದಸ್ಯರು ಶಾಂತಿಯುತ ಚುನಾವಣೆ ನಡೆಯಲು ಸಹಕರಿಸಿದರು. ನೂತನ ಅಧ್ಯಕ್ಷೆ ಹಾಗೂ ಉಪಾಧ್ಯಕ್ಷರನ್ನು ಸಿ.ಎಸ್.ಪುಟ್ಟರಾಜು ಅಭಿನಂದಿಸಿ ಮೇಲುಕೋಟೆಯ ಸರ್ವಾಂಗೀಣ ಅಭಿವೃದ್ಧಿಗೆ ನೂತನ ವರಿಷ್ಠರು ಹಾಗೂ ಸದಸ್ಯರು ಶ್ರಮಿಸಬೇಕು. ಜನಪರವಾಗಿ ಆಡಳಿತ ನಡೆಸಬೇಕು ಎಂದು ಸಲಹೆ ನೀಡಿದರು.

ಸಾರೆಮೇಗಲ ಕೊಪ್ಪಲು ಡೈರಿ ಅಧ್ಯಕ್ಷರಾಗಿ ಚನ್ನಮ್ಮ

ನಾಗಮಂಗಲ,ಜು.15– ಮರಸಭಾ ವ್ಯಾಪ್ತಿಯಲ್ಲಿ ಬರುವ ಸಾರೆ ಮೇಗಲ ಕೊಪ್ಪಲು ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳೆರಡು ಮತ್ತೊಮ್ಮೆ ಕಾಂಗ್ರೆಸ್ ಬೆಂಬಲಿತರಿಗೆ ಒಲಿದಿದೆ.

ನಿರ್ದೇಶಕರ ಆಯ್ಕೆಯಲ್ಲಿಯೇ ಎಡವಿದ ಜೆಡಿಎಸ್ ಕೇವಲ ನಾಲ್ಕು ಸ್ಥಾನ ಪಡೆಯುವುದರೊಂದಿಗೆ ಹಿನ್ನಡೆ ಅನುಭವಿಸಿದ್ದು ಕಾಂಗ್ರೆಸ್ 7 ಸ್ಥಾನ ಪಡೆದು ಮೇಲುಗೈ ಸಾಧಿಸಿತ್ತು. ಬಾನುವಾರ ನಡೆದ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ಜೇಡಿಎಸ್‌ನ ನಾಲ್ಕು ಸದಸ್ಯರು ಗೈರು ಹಾಜರಾದ ಹಿನ್ನೆಲೆಯಲ್ಲಿ ಚುನಾವಣೆ ನಡೆದು ಚನ್ನಮ್ಮ ರಾಮಣ್ಣ ಅಧ್ಯಕ್ಷರಾಗಿ ಗುಡ್ಡೇಗೌಡ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರೆಂದು ಚುನಾವಣಾಧಿಕಾರಿ ಘೋಷಿಸುತ್ತಿದ್ದಂತೆ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ನಿರ್ದೇಶಕರಾದ ಜವರೇಗೌಡ, ಕೆಂಪೇಗೌಡ, ಪ್ರಕಾಶ, ರಮೇಶ, ಎಸ್.ಪಿ.ಗೋಪಾಲ ಕಾರ್ಯದರ್ಶಿ ಎಸ್.ಬಿ ಸೇರಿದಂತೆ ನೂರಾರು ಕಾರ್ಯಕರ್ತರು ಹಾಜರಿದ್ದರು.

ಜುಲೈ 21ರಂದು ಕೆ.ಆರ್.ಪೇಟೆಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಗೆ ಅಭಿನಂದನಾ ಸಮಾರಂಭ

ಕೆ.ಆರ್.ಪೇಟೆ,ಜು.15–ಮಂಡ್ಯ ಲೋಕಸಭಾ ಕ್ಷೇತ್ರದ ಸಂಸದರು ಹಾಗೂ ನೂತನ ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಅವರು ಜುಲೈ 21ರಂದು ಕೆಆರ್.ಪೇಟೆಗೆ ಅಭಿನಂದನಾ ಕಾರ್ಯಕ್ರಮಕ್ಕೆ ಆಗಮಿಸಲಿರುವ ಹಿನ್ನೆಲೆಯಲ್ಲಿ ಇಂದು ಶಾಸಕ ಹೆಚ್.ಟಿ.ಮಂಜುರವರ ಅಧ್ಯಕ್ಷತೆಯಲ್ಲಿ ತಾಲೂಕು ಜೆಡಿಎಸ್ ಕಚೇರಿಯಲ್ಲಿ ಮುಖಂಡರು ಹಾಗೂ ಕಾರ್ಯ ಕರ್ತರ ಪೂರ್ವಭಾವಿ ಸಭೆಯನ್ನು ಕರೆಯಲಾಗಿತ್ತು.



ಪೂರ್ವಭಾವಿ ಸಭೆಯಲ್ಲಿ ಶಾಸಕ ಎಚ್.ಟಿ.ಮಂಜು ಮಾತನಾಡುತ್ತಿರುವುದು.

ಸಭೆಯನ್ನುದ್ದೇಶಿಸಿ ಮಾತನಾಡಿದ ಶಾಸಕ ಹೆಚ್.ಟಿ.ಮಂಜು, ಕೆಆರ್.ಪೇಟೆ ಪಟ್ಟಣದಲ್ಲಿರುವ ಪುರಸಭಾ ಆವರಣದಲ್ಲಿ ಜುಲೈ 21 ರಂದು ಭಾನುವಾರ ಬೆಳಿಗ್ಗೆ 11 ಘಂಟೆಗೆ ಕೆಆರ್.ಪೇಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮತ್ತು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರಿಂದ ಕುಮಾರಸ್ವಾಮಿಯವರಿಗೆ ಬೃಹತ್ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ಸುಮಾರು 40ರಿಂದ 50 ಸಾವಿರ ಜನರು ಭಾಗವಹಿಸುವ ನಿರೀಕ್ಷೆ ಇರುವುದರಿಂದ ಪ್ರತ್ಯೇಕವಾಗಿ ಮಾಂಸಾಹಾರ ಮತ್ತು ಸಸ್ಯಾಹಾರ ಊಟ ವ್ಯವಸ್ಥೆ ಮಾಡಲಾಗುವುದೆಂದು ಶಾಸಕರು ತಿಳಿಸಿದರು.

ಇದೇ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಜಾನಕೀರಾವ್, ಬಿಜೆಪಿ ತಾಲೂಕು ಅಧ್ಯಕ್ಷ ಸಾರಂಗಿ ನಾಗರಾಜು, ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷ ಬಿ.ವಿ.ನಾಗೇಶ್, ಜಿಲಾ ಪ್ರಧಾನ ಕಾರ್ಯದರ್ಶಿ ಬಿಎಂ.ಕಿರಣ್, ರಾಜ್ಯ ಜೆಡಿಎಸ್ ಸಂಘಟನಾ ಕಾರ್ಯದರ್ಶಿ ಅಕ್ಕಿಹೆಬ್ಬಾಳು ರಘು, ಮಹಾ ಮಂಡಳ ನಿರ್ದೇಶಕ ಎಸ್.ಎಲ್.ಮೋಹನ್, ಕಾಯಿ ಮಂಜೇಗೌಡ, ಬಲ್ಲೇನಹಳ್ಳಿ ನಂದೀಶ್, ಸಾಮಿಲ್ ರವಿಕುಮಾರ್, ಬಿಜೆಪಿ ತಾ. ಪ್ರಧಾನ ಕಾರ್ಯದರ್ಶಿ ಚೋಕನಹಳ್ಳಿ ಪ್ರಕಾಶ್, ಮಾಜಿ ತಾಪಂ ಸದಸ್ಯ ಮಲ್ಲೇನಹಳ್ಳಿ ಮೋಹನ್, ತೆರ್ನೇನಹಳ್ಳಿ ಬಾಲು, ಕೊಟಗಹಳ್ಳಿ ಮಂಜೇಗೌಡ, ಧರ್ಮ, ರವಿ, ಶಾಸಕರ ಆಪ್ತ ಸಹಾಯಕರುಗಳಾದ ಪ್ರತಾಪ್, ಮಾಕವಳ್ಳಿ ಕುಮಾರಸ್ವಾಮಿ ಸೇರಿದಂತೆ ನೂರಾರು ಮುಖಂಡರು ಹಾಗೂ ಮೈತ್ರಿ ಪಕ್ಷಗಳ ಕಾರ್ಯಕರ್ತರು ಉಪಸ್ಥಿತರಿದ್ದರು.

ಪಾರಂಪರಿಕ ರೈತ ಮಾರುಕಟ್ಟೆಗೆ ಕಾಯಕಲ್ಪ ನೀಡುವಂತೆ ರೈತರ ಆಗ್ರಹ



'ಪಾರಂಪರಿಕ ರೈತ ಮಾರುಕಟ್ಟೆ(ಭಾನುವಾರ ರೈತ ಸಂತೆ)' ಆವರಣಕ್ಕೆ ಕಾಯಕಲ್ಪ ನೀಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ (ಸಾಮೂಹಿಕ ನಾಯಕತ್ವ)ದ ವತಿಯಿಂದ ಮಾರುಕಟ್ಟೆ ಮುಂಭಾಗ ಪ್ರತಿಭಟಿಸಲಾಯಿತು.

ಮೈಸೂರು, ಜು.15(ಎಸ್‌ಪಿಎನ್)– ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ 'ಪಾರಂಪರಿಕ ರೈತ ಮಾರುಕಟ್ಟೆ(ಭಾನುವಾರ ರೈತ ಸಂತೆ)' ಆವರಣಕ್ಕೆ ರಾಜ್ಯ ಸರ್ಕಾರ ಕಾಯಕಲ್ಪ ನೀಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ(ಸಾಮೂಹಿಕ ನಾಯಕತ್ವ)ದಿಂದ ಮಾರುಕಟ್ಟೆ ಮುಂಭಾಗ ಪ್ರತಿಭಟಿಸಲಾಯಿತು.

ರೈತ ಸಂಘದ ರಾಜ್ಯ ಕಾರ್ಯದರ್ಶಿ ಮಂಜು ಕಿರಣ್ ಮಾತನಾಡಿ, ರಾಜ್ಯ ಸರ್ಕಾರ ಪ್ರಾರಂಪರಿಕ ಕೃಷಿ ಆಧಾರಿತ ಆಹಾರ ಧಾನ್ಯಗಳಿಗೆ ಮಾರುಕಟ್ಟೆ ಕಲ್ಪಿಸಲು ಮೈಸೂರು ವಿಜಯನಗರ ಒಂದನೇ ಹಂತದಲ್ಲಿ ಭಾನುವಾರ ಸಂತೆ ಪ್ರಾಂಗಣವನ್ನು ಮುಡಾವತಿಯಿಂದ ನಿರ್ಮಿಸಿ, ಪಾರಂಪರಿಕ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ರೈತರಿಗೆ ಮಾರುಕಟ್ಟೆ ಕಲ್ಪಿಸಿರುವುದು ಸರಿಯಷ್ಟೆ, ಆದರೆ, ಈ ಮಾರುಕಟ್ಟೆ ಕಟ್ಟಡ ಮೂಲಸೌಕರ್ಯಗಳಿಂದ ವಂಚಿತವಾಗಿದೆ ಎಂದು ಆರೋಪಿಸಿದರು. ಈ ಮಾರುಕಟ್ಟೆ ಕಟ್ಟಡಕ್ಕೆ ಅಳವಡಿಸಿರುವ ವಿದ್ಯುತ್ ದೀಪಗಳು ಬಳಕೆಗೆ ಯೋಗ್ಯವಾಗಿಲ್ಲ. ಶೌಚಾಲಯ ನಿರ್ವಹಣೆ ಸರಿಯಿಲ್ಲ. ಪಕ್ಕದಲ್ಲಿ ದೊಡ್ಡ ಮೋರಿಯಲ್ಲಿ ಯುಜಿಡಿ ನೀರು ಹರಿಯುತ್ತಿರುವುದರಿಂದ ಸೊಳ್ಳೆ ಕಾಟ ಮತ್ತು ದುರ್ವಾಸನೆ ಬೀರುತ್ತಿದೆ. ಮಾರುಕಟ್ಟೆ ಆವರಣದಲ್ಲಿ ಪಾರ್ಥೇನಿಯಂ ಎದೆ ಉದ್ದ ಬೆಳೆದು ನಿಂತಿದ್ದು, ವಾಹನ ನಿಲ್ದಾಣಕ್ಕೆ ಸಮಸ್ಯೆ ಆಗುತ್ತಿದೆ. ಇದನ್ನು ಸ್ವಚ್ಛಗೊಳಿಸಲು ಮುಡಾ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಕಿವಿಗೊಡುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ಮೈಸೂರಿನಲ್ಲಿ ಜನಸಾಮಾನ್ಯರ ಪರಿಸ್ಥಿತಿ ಈಗಾದರೆ, ಉಳಿದ ಜಿಲ್ಲೆಯಲ್ಲಿ ಜನ ಸಾಮಾನ್ಯರ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ ಎಂದು ಟೀಕಿಸಿದರು.

ಪ್ರೋತ್ಸಾಹ ಅಗತ್ಯ: ಪಾರಂಪರಿಕ ರೈತ ಮಾರುಕಟ್ಟೆಗೆ ಕಟ್ಟಡ ನಿರ್ಮಿಸಿ, ರಾಜ್ಯ ಸರ್ಕಾರ ಸುಮ್ಮನಾದರೆ, ಸಾಲದು, ಪಾರಂಪರಿಕ ಕೃಷಿ ಆಧಾರಿತ ದವಸ–ಧಾನ್ಯಗಳ ಉಪಯೋಗಕ್ಕೂ ಜನರಲ್ಲಿ ಜಾಗೃತಿ ಮೂಡಿಸಬೇಕು. ಈ ಆಹಾರದಿಂದಾಗುವ ಪ್ರಯೋಜನಗಳ ಬಗ್ಗೆಯೂ ಜನರಲ್ಲಿ ಅರಿವು ಮೂಡಿಸಬೇಕು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಕ್ರಮವಹಿಸುವಂತೆ ಮನವಿ ಮಾಡಿದರು.

ತ್ಯಾಜ್ಯ ಗುಂಡಿ ಸ್ಥಾಪನೆಗೆ ಆಗ್ರಹ: ವಾರಕ್ಕೊಮ್ಮೆ ನಡೆಯುವ ರೈತ ಸಂತೆಯಲ್ಲಿ ಮಾರಾಟವಾಗದೇ ಉಳಿಯುವ ಕೊಳೆತ ಹಣ್ಣು ತರಕಾರಿ, ಸೊಪ್ಪುಗಳನ್ನು ಒಂದೆಡೆ ಹಾಕಲು ಮಾರುಕಟ್ಟೆ ಆವರಣದಲ್ಲಿ ತ್ಯಾಜ್ಯ ಗುಂಡಿ ಸ್ಥಾಪಿಸಬೇಕು. ಇದರ ವಿಲೇವಾರಿಗೂ ಕ್ರಮವಹಿಸಬೇಕು. ಇಲ್ಲದಿದ್ದರೆ, ರೈತರಿಂದ ಮಾರಾಟವಾಗದೇ ಉಳಿದ ಕೊಳೆತ ತರಕಾರಿಗಳನ್ನು ಖಾಲಿ ಜಾಗದಲ್ಲಿ ಅಥವಾ ರಸ್ತೆ ಪಕ್ಕದಲ್ಲಿ ಸುರಿದು ಹೋಗುತ್ತಾರೆ ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿ ಬಂದಿದೆ ಎಂದು ಇಲ್ಲಿನ ಸಮಸ್ಯೆಯನ್ನು ತಿಳಿಸಿದರು.

ಈ ವೇಳೆ ರೈತ ಮುಖಂಡರಾದ ಮೂರ್ತಿ, ಭಾನುವಾರ ರೈತ ಸಂತೆ ಮಾರುಕಟ್ಟೆಯ ಸಂಚಾಲಕ ವೇಣುಗೋಪಾಲ್, ಸತೀಶ್, ಪರಿಸರ ಉಳಿಸಿ ಸಮಿತಿ ಸಂಚಾಲಕ ಕಿರಣ್, ಶಂಕರೇಗೌಡ, ಥಾಮಸ್, ಗಿರೀಶ್, ಸುರೇಶ್, ಚಂದ್ರಶೇಖರ್, ಪ್ರೊ.ಶ್ಯಾಂ ಸುಂದರ್, ಕರಿಯಪ್ಪ, ಸುಧಾರಾವ್, ವಾಣಿಕ, ಶಶಿಕಲಾ ಸೇರಿದಂತೆ ರೈತರು ಉಪಸ್ಥಿತರಿದ್ದರು.

'ವಿಶ್ವ ಜನಸಂಖ್ಯಾ ದಿನಾಚರಣೆ' ಜಾಗೃತಿ ಕಾರ್ಯಕ್ರಮ



ಮೈಸೂರು ನಗರದ ಯೂತ್ ಹಾಸ್ಟೆಲ್‌ನಲ್ಲಿ ಇತ್ತೀಚೆಗೆ 'ವಿಶ್ವ ಜನಸಂಖ್ಯಾ ದಿನ' ಜಾಗೃತಿ ಕಾರ್ಯಕ್ರಮ ಆಚರಿಸಲಾಯಿತು. ಈ ಸಂದರ್ಭದಲ್ಲಿ ಯೂತ್ ಹಾಸ್ಟೆಲ್‌ನ ವ್ಯವಸ್ಥಾಪಕ ಪ್ರಸಾದ್ ಸೇರಿದಂತೆ ಕೆಎಚ್‌ಪಿಟಿ ಸಿಬ್ಬಂದಿ ಉಪಸ್ಥಿತರಿದ್ದರು.

10 ಸಾವಿರ ಶಿಕ್ಷಕರ ನೇಮಕ ಪ್ರಕ್ರಿಯೆಗೆ ಸಿದ್ದತೆ

ಬೆಂಗಳೂರು: 10 ಸಾವಿರ ಶಿಕ್ಷಕರ ನೇಮಕ ಪ್ರಕ್ರಿಯೆಗೆ ಸಿದ್ದತೆ ಮಾಡಿದ್ದೇವೆ. ಆರ್ಥಿಕ ಇಲಾಖೆ ಒಪ್ಪಿಗೆ ಕೊಟ್ಟ ಕೂಡಲೇ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಶುರು ಮಾಡೋದಾಗಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.

ವಿಧಾನ ಪರಿಷತ್ ಪಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ತಳವಾರ್ ಸಾಬಣ್ಣ ಪ್ರಶ್ನೆ ಕೇಳಿದ್ರು.ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷರ ಕೊರತೆ ಇದೆ. ಶಿಕ್ಷಕರು ಇಲ್ಲದೆ ಪ್ರತಿ ಬಾರಿ ರಿಸಲ್ಟ್ ನಲ್ಲಿ ಕಲ್ಯಾಣ ಕರ್ನಾಟಕ ಹಿಂದೆ ಬೀಳುತ್ತಿದೆ. 19 ಸಾವಿರ ಶಿಕ್ಷಕರ ಕೊರತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಇದೆ. ಶಿಕ್ಷಕರ ಜೊತೆಗೆ ಕೊಠಡಿಗಳ ಸಮಸ್ಯೆ ಇದೆ. ಕೂಡಲೇ ಶಿಕ್ಷಕರ ನೇಮಕ ಮಾಡಬೇಕು ಅಂತ ಆಗ್ರಹಿಸಿದರು.

ಇದಕ್ಕೆ ಸಚಿವ ಮಧು ಬಂಗಾರಪ್ಪ ಉತ್ತರ ನೀಡಿ, ಶಿಕ್ಷಣ ಇಲಾಖೆಯಲ್ಲಿ 50 ಸಾವಿರ ಶಿಕ್ಷಕರ ಕೊರತೆ ಇದೆ. 10 ಸಾವಿರ ಶಿಕ್ಷಕರ ನೇಮಕಕ್ಕೆ ಆರ್ಥಿಕ ಇಲಾಖೆಗೆ ಪತ್ರ ಬರೆಯಲಾಗಿದೆ. ಆರ್ಥಿಕ ಇಲಾಖೆ ಅನುಮತಿ ಕೊಟ್ಟ ಬಳಿಕ 10 ಸಾವಿರ ಹುದ್ದೆ ನೇಮಕ ಪ್ರಕ್ರಿಯೆ ಶುರು ಮಾಡುತ್ತೇವೆ ಎಂದರು.

10 ಸಾವಿರ ಹುದ್ದೆಗಳಲ್ಲಿ 6,500 ಹುದ್ದೆ ಕಲ್ಯಾಣ ಕರ್ನಾಟಕ ಭಾಗಕ್ಕೆ ಕೊಡಲಾಗುತ್ತದೆ. ಸದ್ಯ ಶಿಕ್ಷಕರ ಕೊರತೆ ನೀಗಿಸಲು ಅತಿಥಿ ಶಿಕ್ಷಕರ ನೇಮಕ ಮಾಡಲಾಗಿದೆ. ಆರ್ಥಿಕ ಇಲಾಖೆ ಅನುಮತಿ ಕೊಟ್ಟ ಬಳಿಕ ಆದಷ್ಟು ಬೇಗ ನೇಮಕಾತಿ ಪ್ರಕ್ರಿಯೆ ಪ್ರಾರಂಭ ಮಾಡುತ್ತೇವೆ ಎಂದು ತಿಳಿಸಿದರು.

ಈ ವೇಳೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿ 6500 ಶಿಕ್ಷಕರ ಹುದ್ದೆ ಖಾಲಿ ಇವೆ. ಈಗಾಗಲೇ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಸಭೆ ಆಗಿದೆ. ಕಲ್ಯಾಣ ಕರ್ನಾಟಕ ಭಾಗದ ಹುದ್ದೆ ತುಂಬಲು ಆರ್ಥಿಕ ಇಲಾಖೆ ಅನುಮತಿ ಬೇಕಿಲ್ಲ ಅನ್ನೋ ನಿಯಮ ಇದೆ. ಹೀಗಾಗಿ ಶಿಕ್ಷಕರ ನೇಮಕಕ್ಕೆ ಪ್ರಕ್ರಿಯೆ ಶುರುವಾಗಿದೆ. ಆದಷ್ಟು ಬೇಗ ನೇಮಕ ಪ್ರಕ್ರಿಯೆ ಮಾಡಿಕೊಳ್ಳುತ್ತೇವೆ ಎಂದರು.

ನೂತನ ಜಿಲ್ಲಾಧಿಕಾರಿಗೆ ಅಭಿನಂದನೆ



ಮೈಸೂರು ನೂತನ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರನ್ನು ಜೆಡಿಎಸ್ ವಕ್ತಾರ ವಿ.ರಾಮಚಂದ್ರ, ಮಹೇಶ್, ಕೃಷ್ಣ ಇಂದ್ರೇಶ್‌ಗೌಡ, ಲೋಕೇಶ್‌ಗೌಡ ಸೋಮವಾರ ಆತ್ಮೀಯವಾಗಿ ಅಭಿನಂದಿಸಿದರು.

ವಿದ್ಯಾರ್ಥಿಗಳಿಗೆ ಕಲಾ ಕಮ್ಮಟಗಳ ಪರಿಚಯಿಸುವುದು ಅವಶ್ಯ

ಮೈಸೂರು, ಜು.15(ಎಸ್‌ಪಿಎನ್)– ಶಾಸ್ತ್ರೀಯ ಕಲೆಗಳ ಉಳಿವಿಗೆ ಶ್ರಮಿಸಿರುವ 'ಗುರು ಪರಂಪರೆ' ಕುರಿತು ಇಂದಿನ ವಿದ್ಯಾರ್ಥಿಗಳಿಗೆ 'ಕಲಾ ಕಮ್ಮಟ'ಗಳ ಪರಿಚಯಿಸುವುದು ಅವಶ್ಯ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ ಅಭಿಪ್ರಾಯಪಟ್ಟರು.




ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಡೆದ 'ಗುರು ಪರಂಪರಾ ಉತ್ಸವ'ದ ಸಮಾರೋಪದಲ್ಲಿ ವಿದ್ಯಾರ್ಥಿ ವೃಂದ ಕಾಣಬಹುದು.

ಮೈಸೂರು ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ನಡೆದ 'ಗುರು ಪರಂಪರಾ ಉತ್ಸವ'ದ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು. ಈ ಹಿಂದೆ ಕಲೆಯನ್ನೇ ಉಸಿರಾಗಿಸಿಕೊಂಡವರಿಗೆ ಪದವಿಯ ಅವಶ್ಯಕತೆ ಇರುವುದಿಲ್ಲ. ಪ್ರಸ್ತುತ ವ್ಯವಸ್ಥೆಯಲ್ಲಿ ಪದವಿಗಳು ಶೈಕ್ಷಣಿಕ ಮಾನದಂಡವೇ ಹೊರತು ಅನುಭವ ಮತ್ತು ಸಾಧನೆಗೆ ಈ ಪ್ರಮಾಣ ಪತ್ರಗಳು ಯಾವುದಕ್ಕೂ ಸಾಟಿಯಲ್ಲ ಎಂಬ ಆಯೋಜಕರು ಹೇಳಿದ ಮಾತನ್ನು ಅನುಮೋದಿಸುತ್ತ, ಈ ಹಿಂದಿನ ಕಾಲಘಟ್ಟದಲ್ಲಿ ಅನೇಕರು, ಕಲೆಯನ್ನು ಉಸಿರಾಗಿಸಿಕೊಂಡು 'ಗುರು ಪರಂಪರೆ'ಯಲ್ಲಿ ಸಂಗೀತ, ನೃತ್ಯ, ಚಿತ್ರಕಲೆಗಳನ್ನು ಅನೇಕ ವರ್ಷಗಳು ಕಲಿತು ಸಾಧನೆ ಮಾಡಿದ್ದಾರೆ. ಅಂದಿನ ಮಹಾ ಸಾಧಕರಿಗೆ ಇಂದಿನ ಯಾವುದೇ ಪದವಿ ಮಾನದಂಡವಾಗುವುದಿಲ್ಲ ಎಂದು ಕೆಲವು ಸಾಧಕರ ಹೆಸರನ್ನು ಉಲ್ಲೇಖಿಸಿ ತಿಳಿಸಿದರು.

ಕಲೆ ನಿಂತ ನೀರಾದರೆ ಏನು ಚೆಂದ ಎಂಬ ಆತಂಕವೂ ಅನೇಕರಲ್ಲಿದೆ. ಆದರೆ, ಬದಲಾದ ಕಾಲಕ್ಕೆ ಕಲೆಗೂ ಶೈಕ್ಷಣಿಕ ಮಾನ್ಯತೆ ಬೇಡವೇ ಎಂದು ಮತ್ತೊಂದು ವರ್ಗದ ಅಭಿಪ್ರಾಯವಾಗಿದೆ. ಹಾಗಾಗಿ ವಿವಿಧ ಕಲಾ ಪ್ರಕಾರಗಳ ಬಗ್ಗೆ, ಅವುಗಳ ಇತಿಹಾಸದ ಕುರಿತು ಇಂದಿನ ವಿದ್ಯಾರ್ಥಿಗಳಿಗೆ 'ಕಲಾ ಕಮ್ಮಟ'ಗಳನ್ನು ಹಮ್ಮಿಕೊಂಡು ಹಿಂದಿನ 'ಗುರು ಪರಂಪರೆ' ಕುರಿತು ತರಬೇತಿ ನೀಡಲು ಮೈಸೂರಿನ ಕಲಾ ಸಂಸ್ಥೆಗಳು ಮುಂದಾಗಬೇಕು ಎಂದು ಸಲಹೆ ನೀಡಿದರು. ವೇದಿಕೆಯಲ್ಲಿ ವಿದ್ವಾನ್ ಪ್ರೊ.ಕೆ.ರಾಮಮೂರ್ತಿರಾವ್ ಸೇರಿದಂತೆ ಇತರರಿದ್ದರು. ವೇದಿಕೆ ಕಾರ್ಯಕ್ರಮ ನಂತರ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್‌ನ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ನೈಪಥ್ಯದಲ್ಲಿ ವಿದ್ವಾನ್ ಎಂ.ಆರ್. ಹನುಮಂತರಾಜು (ಮೃದಂಗ), ವಿದ್ವಾನ್ ಎಚ್.ಎಸ್.ತಾಂಡವಮೂರ್ತಿ (ವಯೋಲಿನ್) ಸೇರಿದಂತೆ ಇನ್ನಿತರರಿದ್ದರು.

ಎಂ.ಶಿವಣ್ಣ ಅವರಿಗೆ ಹುಟ್ಟುಹಬ್ಬದ ಶುಭಾಶಯ



ಸೋಮವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ನಗರಪಾಲಿಕೆ ಮಾಜಿ ಸದಸ್ಯರಾದ ಎಂ.ಶಿವಣ್ಣ ಅವರನ್ನು ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಿ, ಶುಭ ಕೋರಲಾಯಿತು. ಚಿತ್ರದಲ್ಲಿ ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ನಗರಪಾಲಿಕೆ ಮಾಜಿ ಸದಸ್ಯ ಭಾಷಾ, ಕಾರ್ಯದರ್ಶಿ ರಾಜು ಉಪ್ಪಾರ್, ಉಪಾಧ್ಯಕ್ಷರಾದ ದಿವಾಕರ್, ಮಹೇಶ್ ಮಡಿವಾಳ, ಕಾರ್ಯದರ್ಶಿ ರವಿಕುಮಾರ್, ಕಿರಣ್‌ಕುಮಾರ್ ವಿಶ್ವಕರ್ಮ ಇನ್ನಿತರರನ್ನು ಕಾಣಬಹುದು.

ದೇಶ - ವಿದೇಶ

ಸಂಭ್ರಮಾಚರಣೆಗೆ ಇಲ್ಲಿಗೇ ಬನ್ನಿ: ಟಿ–20 ವಿಶ್ವಕಪ್ ಗೆದ್ದ ಟೀಂ ಇಂಡಿಯಾಗೆ ಮಾಲ್ಡೀವ್ಸ್ ಆಹ್ವಾನ



ಮಾಲ್ಡೀವ್: ಇತ್ತೀಚೆಗೆ ಮುಕ್ತಾಯವಾದ ಐಸಿಸಿ ಟಿ–20 ವಿಶ್ವಕಪ್ ಟೂರ್ನಿಯಲ್ಲಿ ಜಯಭೇರಿ ಭಾರಿಸಿ ವಿಶ್ವಕಪ್ ಗೆದ್ದಿರುವ ಭಾರತ ತಂಡವನ್ನು ಸಂಭ್ರಮಾಚರಣೆಗೆ ಆಗಮಿಸುವಂತೆ ಮಾಲ್ಡೀವ್ಸ್ ಆಹ್ವಾನಿಸಿದೆ. ಮಾಲ್ಡೀವ್ಸ್ ಪ್ರವಾಸೋದ್ಯಮ ಇಲಾಖೆ, ಭಾರತ ಕ್ರಿಕೆಟ್ ತಂಡಕ್ಕೆ ಈ ಆಹ್ವಾನ ನೀಡಿದ್ದು, ಭಾರತೀಯ ಕ್ರಿಕೆಟ್ ತಂಡವನ್ನು ಸ್ವಾಗತಿಸಲು ಮತ್ತು ಅವರ ವಿಜಯದ ಸಂತೋಷದಲ್ಲಿ ಪಾಲ್ಗೊಳ್ಳಲು ಮಾಲ್ಡೀವ್ಸ್ ಉತ್ಸುಕವಾಗಿದೆ ಎಂದು ಹೇಳಿದೆ. ಜೂ.29ರಂದು ನಡೆದ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು 7 ರನ್‌ಗಳಿಂದ ಸೋಲಿಸಿದ ನಂತರ ರೋಹಿತ್ ಶರ್ಮಾ ನೇತೃತ್ವದ ಭಾರತ ತಂಡ ಬಾರ್ಬಡೋಸ್‌ನಲ್ಲಿ ಟಿ20 ಟ್ರೋಫಿ ಗೆದ್ದುಕೊಂಡಿತು. ಇದರ ಬೆನ್ನಲ್ಲೇ ಮಾಲ್ಡೀವ್ಸ್ ಮಾರ್ಕೆಟಿಂಗ್ ಮತ್ತು ಪಬ್ಲಿಕ್ ರಿಲೇಷನ್ಸ್ ಕಾರ್ಪೊರೇಷನ್ ಮಾಲ್ಡೀವ್ಸ್ ಅಸೋಸಿಯೇಷನ್ ಆಫ್ ಟೂರಿಸಂ ಇಂಡಸ್ಟ್ರಿ ಸಹಯೋಗದೊಂದಿಗೆ ಜಂಟಿಯಾಗಿ ಭಾರತೀಯ ರಾಷ್ಟ್ರೀಯ ಕ್ರಿಕೆಟ್ ತಂಡಕ್ಕೆ ವಿಶೇಷ ಮತ್ತು ಮುಕ್ತ ಆಹ್ವಾನವನ್ನು ನೀಡಿದ್ದೇವೆ ಎಂದು ಎರಡು ಸಂಸ್ಥೆಗಳು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ.

ಇಮ್ರಾನ್‌ಖಾನ್‌ಗೆ ದೇಶ ವಿರೋಧಿ ಚಟುವಟಿಕೆ ಆರೋಪದಡಿ ಪಿಟಿಐ ನಿಷೇಧ



ಇಸ್ಲಾಮಾಬಾದ್: ಅಧಿಕಾರ ಕಳೆದುಕೊಂಡ ಬಳಿಕ ಹಗರಣಗಳ ಆರೋಪಗಳಡಿ ಸೆರೆವಾಸ ಅನುಭವಿಸುತ್ತಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಮತ್ತೊಂದು ಆಘಾತ ಎದುರಾಗಿದೆ. ದೇಶ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡ ಆರೋಪದಡಿ ಇಮ್ರಾನ್ ಖಾನ್ ಅವರ ಪಾಕಿಸ್ತಾನ್ ತೆಹ್ರೀಕ್ ಇ ಇನ್ಸಾಫ್ (ಪಿಟಿಐ) ಪಕ್ಷವನ್ನು ನಿಷೇಧಿಸಲಾಗುವುದು ಎಂದು ಸರ್ಕಾರ ಸೋಮವಾರ ತಿಳಿಸಿದೆ.

ಪಿಟಿಐ ಅನ್ನು ನಿಷೇಧಿಸುವ ಪ್ರಕರಣವನ್ನು ಫೆಡರಲ್ ಸರ್ಕಾರ ದಾಖಲಿಸಲಿದೆ. ಈ ಪ್ರಕರಣವನ್ನು ಸುಪ್ರೀಂಕೋರ್ಟ್‌ಗೆ ಕೊಂಡೊಯ್ಯಲಾಗುವುದು ಎಂದು ಮಾಹಿತಿ ಸಚಿವ ಅತೌಲ್ಲಾ ತರಾತ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಇಮ್ರಾನ್ ಖಾನ್ ಅವರು 1996ರಲ್ಲಿ ಪಾಕಿಸ್ತಾನ್ ತೆಹ್ರೀಕ್ ಇ ಇನ್ಸಾಫ್ ಪಕ್ಷವನ್ನು ಸ್ಥಾಪಿಸಿದ್ದರು. ಸಾಕಷ್ಟು ರಾಜಕೀಯ ಸಂಘರ್ಷಗಳ ಬಳಿಕ 2018ರಲ್ಲಿ ಅವರ ಪಕ್ಷ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿತ್ತು. ಇಮ್ರಾನ್ ಖಾನ್ ಪ್ರಧಾನಿಯಾಗುವುದರಲ್ಲಿ ಯಶಸ್ವಿಯಾಗಿದ್ದರು. ಆದರೆ 2022ರಲ್ಲಿ ವಿಶ್ವಾಸ ಮತ ಕಳೆದುಕೊಂಡ ಬಳಿಕ ಅವರ ಸರ್ಕಾರ ಪತನಗೊಂಡಿತ್ತು. ನವಾಜ್ ಷರೀಫ್ ಅವರ ಸಹೋದರ ಶೆಹಬಾಜ್ ಷರೀಫ್ ನೇತೃತ್ವದ ಸರ್ಕಾರ ರಚನೆಯಾಗಿತ್ತು. ಅದರ ಬೆನ್ನಲ್ಲೇ ಇಮ್ರಾನ್ ಖಾನ್ ಅವರನ್ನು ಸಂಪೂರ್ಣವಾಗಿ ಹಣಿಯುವ ಪ್ರಯತ್ನಗಳು ಆರಂಭವಾಗಿದ್ದವು. ಉಡುಗೊರೆಗಳ ದುರ್ಬಳಕೆ ಸೇರಿದಂತೆ ಅನೇಕ ಹಗರಣಗಳ ಅಡಿ ಇಮ್ರಾನ್ ಖಾನ್ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಪ್ರಸ್ತುತ ಅವರು ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿದ್ದಾರೆ.

ದೇಶಕ್ಕೆ ನಿಗೂಢ ವೈರಸ್ ಪ್ರವೇಶ, 2 ದಿನದಲ್ಲಿ 5 ಮಕ್ಕಳ ಸಾವು



ಅಹಮದಾಬಾದ್: ದೇಶವು ಕೊರೊನಾ ಭಯದಿಂದ ಚೇತರಿಸಿಕೊಂಡಿದೆಯಷ್ಟೇ. ಆದರೀಗ ಇದರ ಬೆನ್ನಲ್ಲೇ ಹೊಸ ವೈರಸ್ ಅಟ್ಟಹಾಸ ಆರಂಭಿಸಿದೆ. ಗುಜರಾತ್‌ನ ಸಬರಕಾಂತ ಮತ್ತು ಅರಾವಳಿ ಜಿಲ್ಲೆಗಳಲ್ಲಿ 'ಚಂಡೀಪುರ' ಹೆಸರಿನ ವೈರಸ್ ತಟ್ಟಿದೆ. ಇದನ್ನು 'ಮಿಸ್ಟರಿ ವೈರಸ್' ಎಂದು ಕರೆಯಲಾಗುತ್ತದೆ. ಇದರಿಂದ 2 ದಿನದಲ್ಲಿ ಐದು ಮಕ್ಕಳು ಸಾವನ್ನಪ್ಪಿವೆ ಎಂದು ಹೇಳಲಾಗುತ್ತಿದೆ. ಸಬರಕಾಂತ ಸಿವಿಲ್ ಆಸ್ಪತ್ರೆಯಲ್ಲಿ 4 ಮಕ್ಕಳು ಸಾವನ್ನಪ್ಪಿದ್ದಾರೆ. ಸದ್ಯ ಮಕ್ಕಳ ರಕ್ತ, ಅಂಗಾಂಗ ಮಾದರಿಗಳನ್ನು ಪರೀಕ್ಷೆಗಾಗಿ ಪುಣೆಗೆ ಕಳುಹಿಸಲಾಗಿದೆ. ವೈದ್ಯರ ಪ್ರಕಾರ, 'ಚಂಡೀಪುರ' ಸೋಂಕಿತ ಮಕ್ಕಳ ಮೆದುಳಿನಲ್ಲಿ ಊತ ಸೇರಿದಂತೆ ಹಲವು ರೋಗಲಕ್ಷಣಗಳು ಕಂಡುಬಂದಿವೆ. ಸೋಂಕಿತ ಮಕ್ಕಳ ಕುಟುಂಬದವರ ಮಾದರಿಗಳನ್ನು ಆರೋಗ್ಯ ಇಲಾಖೆ ತೆಗೆದುಕೊಳ್ಳುತ್ತಿದೆ. ಹಿಮ್ಮತ್‌ನಗರ ಸಿವಿಲ್ ಆಸ್ಪತ್ರೆಯಲ್ಲಿ ಒಟ್ಟು 6 ರೋಗಿಗಳು ದಾಖಲಾಗಿದ್ದಾರೆ. ಸಬರಕಾಂತದ ಖೇಡಬ್ರಹ್ಮದ ರೋಗಿಯೊಬ್ಬರು ಸಾವನ್ನಪ್ಪಿದ್ದಾರೆ. ಅರಾವಳಿ ಜಿಲ್ಲೆಯ ಭಿಲೋರಾದ ಇಬ್ಬರು ಕೂಡ ಸಾವನ್ನಪ್ಪಿದ್ದಾರೆ.

ನೇಪಾಳದ ನೂತನ ಪ್ರಧಾನಿಯಾಗಿ ಕೆ.ಪಿ.ಶರ್ಮಾ ಓಲಿ ಪದಗ್ರಹಣ



ಕಠ್ಮಂಡು: ನೇಪಾಳದ ನೂತನ ಪ್ರಧಾನಿಯಾಗಿ ಕೆ.ಪಿ ಶರ್ಮಾ ಓಲಿ ಅವರು ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. ನಾಲ್ಕನೇ ಬಾರಿಗೆ ಅವರು ಪ್ರಧಾನಿಯಾಗಿದ್ದಾರೆ.

ಶುಕ್ರವಾರ ನಡೆದ ವಿಶ್ವಾಸಮತ ಯಾಚನೆಯಲ್ಲಿ ಪುಷ್ಪ ಕಮಲ್ ದಹಲ್ ಪ್ರಚಂಡ ಅವರು, ಬಹುಮತ ಸಾಬೀತುಪಡಿಸಲು ವಿಫಲರಾಗಿ, ಪ್ರಧಾನಿ ಪಟ್ಟ ಕಳೆದುಕೊಂಡಿದ್ದರು. ಹೀಗಾಗಿ ಹೊಸ ಸರ್ಕಾರ ರಚನೆಯ ಪ್ರಕ್ರಿಯೆಗಳು ಆರಂಭವಾಗಿದ್ದವು. 72 ವರ್ಷದ ಓಲಿ ಅವರನ್ನು ನೂತನ ಪ್ರಧಾನಿಯನ್ನಾಗಿ ನೇಮಕ ಮಾಡಲಾಗಿದೆ ಎಂದು ರಾಷ್ಟ್ರಪತಿ ರಾಮ್‌ಚಂದ್ರ ಪೌಡೆಲ್ ಅವರ ಕಚೇರಿ ಪ್ರಕಟಣೆಯಲ್ಲಿ ತಿಳಿಸಿತ್ತು. ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ–ಯುನಿಫೈಡ್ ಮಾರ್ಕ್ಸಿಸ್ಟ್ ಲೆನಿನಿಸ್ಟ್ ಅಧ್ಯಕ್ಷ ಓಲಿ ಅವರಿಗೆ ರಾಷ್ಟ್ರಪತಿ ಭವನ ಶೀತಲ್ ನಿವಾಸದಲ್ಲಿ ರಾಷ್ಟ್ರಪತಿ ಪೌಡೆಲ್ ಅವರು ಪ್ರಮಾಣವಚನ ಬೋಧಿಸಿದರು. ಇಬ್ಬರು ಉಪ ಪ್ರಧಾನಿಗಳಾದ ಪ್ರಕಾಶ್ ಮಾನ್‌ಸಿಂಗ್ ಮತ್ತು ವಿಷ್ಣು ಪ್ರಕಾಶ್ ಪೌಡೆಲ್ ಹಾಗೂ ಇತರ 19 ಸಚಿವರಿಗೆ ರಾಷ್ಟ್ರಪತಿಯವರು ಪ್ರಮಾಣ ವಚನ ಬೋಧಿಸಿದರು.

ನೇಪಾಳಿ ಕಾಂಗ್ರೆಸ್‌ನಿಂದ 10 ಮಂದಿ ಕ್ಯಾಬಿನೆಟ್ ಮಂತ್ರಿಗಳಿದ್ದಾರೆ. ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳ–ಯುನಿಫೈಡ್ ಮಾರ್ಕ್ಸಿಸ್ಟ್ ಲೆನಿನಿಸ್ಟ್‌ನಿಂದ ಪ್ರಧಾನ ಮಂತ್ರಿಯನ್ನು ಹೊರತುಪಡಿಸಿ 8 ಮಂದಿ, ಜನತಾ ಸಮಾಜವಾದಿ ಪಕ್ಷದಿಂದ ಇಬ್ಬರು ಮತ್ತು ಲೋಕತಾಂತ್ರಿಕ ಸಮಾಜವಾದಿ ಪಕ್ಷದಿಂದ ಒಬ್ಬರಿಗೆ ಸಚಿವ ಸ್ಥಾನ ನೀಡಲಾಗಿದೆ. ವಿದೇಶಿ ರಾಜತಾಂತ್ರಿಕರು ಮತ್ತು ಇತರ ಗಣ್ಯರು ಭಾಗವಹಿಸಿದ್ದ ಸಮಾರಂಭದಲ್ಲಿ ನಿರ್ಗಮಿತ ಪ್ರಧಾನಿ ಪ್ರಚಂಡ ಕೂಡ ಉಪಸ್ಥಿತರಿದ್ದರು.

ಅಪಾಯಕ್ಕೆ ಸಿಲುಕಿದ ಪ್ರವಾಸಿಗರು: ಮಾನವ ಸರಪಳಿ ನಿರ್ಮಿಸಿ ಬಚಾವ್

ಮುಂಬೈ: ನೆರೆಯ ಮಹಾರಾಷ್ಟ್ರದಲ್ಲಿ ಮಳೆ ಆರ್ಭಟ ಮುಂದುವರೆದಿದ್ದು, ಪ್ರಖ್ಯಾತ ಅಂಜನೇರಿ ಜಲಪಾತ ವೀಕ್ಷಣೆಗೆ ತೆರಳಿದ ಪ್ರವಾಸಿಗರು ದಿಢೀರ್ ಪ್ರವಾಹದಿಂದಾಗಿ ಅಪಾಯಕ್ಕೆ ಸಿಲುಕಿದ ವಿಡಿಯೋ ವೈರಲ್ ಆಗುತ್ತಿದೆ. ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿರುವ ಅಂಜನೇರಿ ಜಲಪಾತ ಪ್ರವಾಸಿ ತಾಣದಲ್ಲಿ ಈ ಘಟನೆ ನಡೆದಿದ್ದು, ಬರೋಬ್ಬರಿ 6 ಗಂಟೆಗಳ ಕಾರ್ಯಾಚರಣೆ ನಡೆಸಿ ಪ್ರವಾಸಿಗರನ್ನು ರಕ್ಷಣೆ ಮಾಡಲಾಗಿದೆ.



ಸುಮಾರು 15ಕ್ಕಿಂತ ಹೆಚ್ಚು ಪ್ರವಾಸಿಗರು ಅಂಜನೇರಿ ಜಲಪಾತ ವೀಕ್ಷಣೆಗೆ ತೆರಳಿದ್ದರು. ಈ ವೇಳೆ ದಿಢೀರ್ ಭಾರಿ ಮಳೆ ಸುರಿದಿದ್ದು, ಜಲಪಾತ ಉಕ್ಕಿ ಹರಿದಿದೆ. ಪರಿಣಾಮ ಪ್ರವಾಸಿಗರು ನಿಂತಿದ್ದ ಪ್ರದೇಶಕ್ಕೂ ಪ್ರವಾಹದ ನೀರು ನುಗ್ಗಿದ್ದು, ನೋಡ ನೋಡುತ್ತಲೇ ನೀರಿನ ಪ್ರವಾಹ ಹೆಚ್ಚಾಗಿದೆ. ಕೂಡಲೇ ಅಲ್ಲಿದ್ದ ಪ್ರವಾಸಿಗರು ತಾವೇ ಮಾನವ ಸರಪಳಿ ನಿರ್ಮಿಸಿಕೊಂಡು ನಿಧಾನವಾಗಿ ಮೆಟ್ಟಿಲುಗಳ ಮೂಲಕ ಇಳಿದು ಪಕ್ಕದ ಸುರಕ್ಷಿತ ಜಾಗಕ್ಕೆ ಬಂದಿದ್ದಾರೆ. ಈ ವೇಳೆ ಸ್ಥಳದಲ್ಲಿದ್ದ ಅರಣ್ಯಾಧಿಕಾರಿಗಳು ಪ್ರವಾಸಿಗರಿಗೆ ಮಾನವ ಸರಪಳಿ ಮಾರ್ಗದರ್ಶನ ನೀಡಿ ಸುಮಾರು 6 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಪ್ರವಾಸಿಗರನ್ನು ಸುರಕ್ಷಿತವಾಗಿ ಕೆಳಗೆ ಕರೆ ತಂದಿದ್ದಾರೆ.

ವೇತನ, ಗ್ರಾಚ್ಯುಟಿ ಇತರ ಸೌಲಭ್ಯಗಳಿಗೆ ಆಗ್ರಹಿಸಿ ಮಿಷನ್ ಆಸ್ಪತ್ರೆ ನೌಕರರ ಧರಣಿ

ಮೈಸೂರು, ಜು. 15(ಆರ್‌ಕೆ)– ಬಾಕಿ ಇರುವ ವೇತನ, ಗ್ರಾಚ್ಯುಟಿ ಹಾಗೂ ಇನ್ನಿತರ ಸೌಲಭ್ಯಕ್ಕೆ ಒತ್ತಾಯಿಸಿ ಮೈಸೂರಿನ ಸಿಎಸ್‌ಐ ಹೋಲ್ಡ್ಸ್‌ವರ್ತ್ ಮೆಮೋರಿಯಲ್ (ಮಿಷನ್) ಆಸ್ಪತ್ರೆ ನೌಕರರು ಸೋಮವಾರ ಆಸ್ಪತ್ರೆ ಎದುರು ಪ್ರತಿಭಟನಾ ಧರಣಿ ನಡೆಸಿದರು.

ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಸಹಯೋಗದಲ್ಲಿ ಗ್ರೂಪ್ 'ಡಿ' ನೌಕರರು, ನರ್ಸ್‌ಗಳು, ವಾರ್ಡನ್‌ಗಳು ಸೇರಿ 150 ಮಂದಿ ಧರಣಿಯಲ್ಲಿ ಪಾಲ್ಗೊಂಡಿದ್ದು, ತಮಗೆ ಕಳೆದ 4 ತಿಂಗಳಿಂದ ಸಂಬಳ ನೀಡಿಲ್ಲ, ಕಳೆದ 7 ವರ್ಷಗಳಿಂದ ವೇತನ ಪರಿಷ್ಕರಣೆ ಮಾಡಿಲ್ಲ, ನಮ್ಮ ಸಂಬಳದಿಂದ ಕಡಿತಗೊಳಿಸಿರುವ ಇಎಸ್‌ಐ, ಪಿಎಫ್ ಹಣವನ್ನು ಸಂಸ್ಥೆಗೆ ಪಾವತಿಸಿಲ್ಲ ಎಂದು ಆರೋಪಿಸುತ್ತಿದ್ದರು.



ಸಿಎಸ್‌ಐ ಹೋಲ್ಡ್ಸ್‌ವರ್ತ್ ಮೆಮೋರಿಯಲ್ (ಮಿಷನ್) ಆಸ್ಪತ್ರೆ

ಸಿಬ್ಬಂದಿ, ಕುಟುಂಬದವರಿಗೆ ನೀಡುತ್ತಿದ್ದ ಉಚಿತ ವೈದ್ಯಕೀಯ ಸೇವೆ ಮತ್ತು ಔಷಧಿ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನೂ ಸ್ಥಗಿತಗೊಳಿಸಲಾಗಿದೆ. 118 ವರ್ಷ ಇತಿಹಾಸ ಉಳ್ಳ ಆಸ್ಪತ್ರೆಯನ್ನೇ ನಂಬಿಕೊಂಡು ಜೀವನ ನಡೆಸುತ್ತಿರುವ ನಮ್ಮ ಕುಟುಂಬಗಳು ಸಂಕಷ್ಟದಲ್ಲಿವೆ ಎಂದು ಅವರು ತಮ್ಮ ಸಮಸ್ಯೆ ತೋಡಿಕೊಂಡರು.

ನಮ್ಮ ಸಂಬಳದಿಂದ ಕಡಿತಗೊಳಿಸಿರುವ ಇಎಸ್‌ಐ, ಪಿಎಫ್, ಎಲ್‌ಐಸಿ ಕಂತಿನ ಹಣವನ್ನು ಪಾವತಿಸದೇ ಆಸ್ಪತ್ರೆ ಆಡಳಿತ ಮಂಡಳಿ ದುರ್ಬಳಕೆ ಮಾಡಿಕೊಂಡಿದೆ. ಅದನ್ನು ಪ್ರಶ್ನಿಸಿದ ನೌಕರರನ್ನು ಕೆಲಸದಿಂದ ತೆಗೆದು ಹಾಕುತ್ತೇವೆ ಎಂದು ಬೆದರಿಸುತ್ತಿದ್ದಾರೆ ಎಂದು ಧರಣಿ ನಿರತರು ಆರೋಪಿಸಿದರು. ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ, ಪ್ರತಿಭಟನೆ ಮುಂದುವರೆಸುತ್ತೇವೆ. ಆಡಳಿತ ಮಂಡಳಿಯು ನಮ್ಮ ಬಳಿ ಬಂದು ಭರವಸೆ ನೀಡಿ ಕ್ರಮ ವಹಿಸಬೇಕು. ತಪ್ಪಿದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಎಐಟಿಯುಸಿ ಮೈಸೂರು ಪ್ರಾಂತದ ಮುಖ್ಯಸ್ಥ ಶೇಷಾದ್ರಿ, ಶಂಕರ್, ವಿಲ್ಸನ್ ಪ್ರಭಾಕರ, ಸಿದ್ದರಾಜು, ಪುನೀತ್ ಧರಣಿಯಲ್ಲಿ ಪಾಲ್ಗೊಂಡಿದ್ದಾರೆ.

ಸಮಸ್ಯೆಗೆ ಪರಿಹಾರ: ಆಸ್ಪತ್ರೆ ಸ್ಪಷ್ಟೀಕರಣ

ಧರಣಿ ನಿರತ ನೌಕರರ ಆರೋಪಕ್ಕೆ ಪ್ರತಿಕ್ರಿಯೆ ನೀಡಿರುವ ಆಸ್ಪತ್ರೆ ನಿರ್ದೇಶಕಿ (ಪ್ರಭಾರ) ಡಾ.ಸುಗುಣಶಾಂತಿ, ನಾನೂ ಒಬ್ಬ ನೌಕರಳಾಗಿ ನನ್ನ ಸಹೋದ್ಯೋಗಿಗಳ ಸಮಸ್ಯೆ, ಬೇಡಿಕೆಗಳನ್ನು ಸೌಹಾರ್ದಯುತವಾಗಿ ಬಗೆಹರಿಸುತ್ತೇನೆ ಎಂದರು.

ಕೊರೊನಾ ಮೊದಲನೇ ಅಲೆಯಲ್ಲಿ ಆಸ್ಪತ್ರೆ ತೀವ್ರ ಸಂಕಷ್ಟದಲ್ಲಿತ್ತು. ತದನಂತರ ನಿಧಾನಗತಿಯಲ್ಲಿ ಚೇತರಿಕೆ ಕಂಡಿತು. ಎರಡನೇ ಅಲೆಯಲ್ಲಿ ಹೆಚ್ಚು ಮಂದಿ ರೋಗಿಗಳು ದಾಖಲಾದ ಕಾರಣ ಆರ್ಥಿಕವಾಗಿ ಸದೃಢಗೊಂಡಿತಾದರೂ, ಆಸ್ಪತ್ರೆ ನಿರ್ವಹಣಾ ವೆಚ್ಚ ಜಾಸ್ತಿಯಾದ ಕಾರಣ ಸರಿದೂಗಿಸುತ್ತಾ ಬಂದೆವು. ಅದಕ್ಕಾಗಿ 3 ತಿಂಗಳ ವೇತನ ಬಾಕಿ ಉಳಿದಿದೆ ಎಂದರು. ಪಿಎಫ್, ಇಎಸ್‌ಐ ಕಂತುಗಳನ್ನು ನೌಕರರ ಹೆಸರಿನಲ್ಲಿ ಪಾವತಿಸಲು ಕ್ರಮ ವಹಿಸುತ್ತೇವೆ. ಆಸ್ಪತ್ರೆಯ ಪ್ರಸ್ತುತ ಹಣಕಾಸಿನ ಪರಿಸ್ಥಿತಿಯಲ್ಲಿ ವೇತನ ಪರಿಷ್ಕರಿಸಲು ಸಾಧ್ಯವಿಲ್ಲ. ಆದರೆ ಶೀಘ್ರ ಬಾಕಿ ಇರುವ ಮೂರು ತಿಂಗಳ ವೇತನವನ್ನು ಪಾವತಿಸುತ್ತೇವೆ ಎಂದು ಭರವಸೆ ನೀಡಿದರು.

ಸಮಸ್ಯೆಗಳಿದ್ದರೆ ನನ್ನ ಕಾರ್ಯಾಲಯಕ್ಕೆ ಬನ್ನಿ, ಪರಿಹರಿಸುವೆ

ಜೆಡಿಎಸ್‌ನವರಿಗೆ ಸಂಸದ ಯದುವೀರ್ ಒಡೆಯರ್ ಭರವಸೆ



ಸಂಸದರಾಗಿ ಆಯ್ಕೆಯಾದ ನಂತರ ಮೊದಲ ಬಾರಿಗೆ ಮೈಸೂರಿನ ಜೆಡಿಎಸ್ ಕಚೇರಿಗೆ ಆಗಮಿಸಿದ ಸಂಸದ ಯದುವೀರ್ ಅವರನ್ನು ಮಾಜಿ ಶಾಸಕ ಸಾ.ರಾ.ಮಹೇಶ್ ಸೇರಿದಂತೆ ಇತರರು ಸೋಮವಾರ ಅಭಿನಂದಿಸಿದರು.

ಮೈಸೂರು, ಜು.15(ಬಿಎಲ್‌ಯು)– ಸಾರ್ವಜನಿಕರ ಯಾವುದೇ ಸಮಸ್ಯೆ ಇದ್ದರೂ ನನ್ನ ಕಾರ್ಯಾಲಯಕ್ಕೆ ಬಂದರೆ ಪರಿಹಾರ ಮಾಡುತ್ತೇನೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ ನೀಡಿದ್ದಾರೆ.

ಸಂಸದರಾಗಿ ಆಯ್ಕೆಯಾದ ನಂತರ ಮೊದಲ ಬಾರಿಗೆ ಸೋಮವಾರ ಮೈಸೂರಿನ ಜೆಡಿಎಸ್ ಕಚೇರಿಗೆ ಭೇಟಿ ನೀಡಿದ್ದರು. ಈ ವೇಳೆ ಜೆಡಿಎಸ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ನನ್ನ ಗೆಲುವಿಗೆ ನೀವೆಲ್ಲಾ ಬಹಳಷ್ಟು ಸಹಕಾರ ನೀಡಿದ್ದೀರಾ. ಈಗ ನಿಮ್ಮ ಏನೇ ಸಮಸ್ಯೆಗಳಿದ್ದರೂ ಅದನ್ನು ಪರಿಹಾರ ಮಾಡಲು ನಾನು ಬದ್ಧನಾಗಿದ್ದೇನೆ ಎಂದು ಆಶ್ವಾಸನೆ ನೀಡಿದರು.

ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿರುವುದು ಸಂತೋಷದ ಸಂಗತಿ. ಮಂಡ್ಯದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಗಿಂತ ಕುಮಾರಸ್ವಾಮಿ ಅವರ ಜನಪರ ಕೆಲಸಗಳನ್ನು ಮೆಚ್ಚಿ ಜನರು ಗೆಲ್ಲಿಸಿದ್ದಾರೆ ಎಂದರು.

ಮಾಜಿ ಶಾಸಕ ಸಾ.ರಾ.ಮಹೇಶ್, ಜೆಡಿಎಸ್ ನಗರಾಧ್ಯಕ್ಷ ಚೆಲುವೇಗೌಡ, ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮಾಜಿ ಮೇಯರ್ ಎಂ.ಜೆ.ರವಿಕುಮಾರ್, ಆರ್.ಲಿಂಗಪ್ಪ ಸೇರಿದಂತೆ ಹಲವು ನಾಯಕರು ಸಂಸದ ಯದುವೀರ್ ಅವರನ್ನು ಅಭಿನಂದಿಸಿದರು.

ಅರ್ಜಿ ಆಹ್ವಾನ

ಮೈಸೂರು: 2024–25 ನೇ ಸಾಲಿನ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಡಿಪ್ಲೋಮಾ ಪ್ರವೇಶಕ್ಕಾಗಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪ್ರಾರಂಭಿಸಿದ್ದು, ಎಸ್‌ಎಸ್‌ಎಲ್‌ಸಿ ಪಾಸಾದ ಅರ್ಹ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಎಸ್.ಎಸ್.ಎಲ್.ಸಿ ಪಾಸಾದ ಅಭ್ಯರ್ಥಿಗಳಿಗೆ ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್, ಡಿಪ್ಲೋಮಾ ಇನ್ ಪ್ರಿಶಿಷನ್ ಮ್ಯಾನುಫ್ಯಾಕ್ಚರಿಂಗ್, ಡಿಪ್ಲೊಮೊ ಇನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಕೋರ್ಸ್‌ಗಳು ಲಭ್ಯವಿದ್ದು, 3 ವರ್ಷ ಹಾಗೂ ಕಡ್ಡಾಯ 1 ವರ್ಷದ ಇಂಟರ್ನ್‌ಶಿಪ್ ತರಬೇತಿ ನೀಡಲಾಗುವುದು. ಅರ್ಜಿ ಸಲ್ಲಿಸಲು ಜುಲೈ 31 ಕೊನೇ ದಿನ. ಹೆಚ್ಚಿನ ಮಾಹಿತಿಗೆ ದೂ.ಸಂ: 821–2582750 ಹಾಗೂ ಸಹಾಯವಾಣಿ: 155267, ಮೊ.:9980557205, 8660139259, 9141630315, 9880068986 ಅಥವಾ https://gttc.karnataka.gov.in ಹಾಗೂ http://cetonline. karnataka.gov.in/kea ಅನ್ನು ಸಂರ್ಕಿಸಬಹುದು.

ಬೆಂಗಳೂರಲ್ಲಿ 25 ವರ್ಷ ಬಾಳಿಕೆ ಬರುವಂತೆ ರಸ್ತೆಗಳಿಗೆ ವೈಟ್ ಟಾಪಿಂಗ್

- ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಮಾಹಿತಿ
- ಇದಕ್ಕೆ 1,800 ಕೋಟಿ ರೂ. ವೆಚ್ಚ ಮಾಡಲು ನಿರ್ಧಾರ



ಬೆಂಗಳೂರಿನ ಚಾಮರಾಜಪೇಟೆ, ಗಾಂಧಿನಗರ, ಮಲ್ಲೇಶ್ವರ, ಮಹಾಲಕ್ಷ್ಮಿಪುರದಲ್ಲಿ 200 ಕೋಟಿ ರೂ. ವೆಚ್ಚದಲ್ಲಿ 19.67 ಕಿ.ಮೀ. ವೈಟ್ ಟಾಪಿಂಗ್ ರಸ್ತೆ ನಿರ್ಮಾಣ ಕಾಮಗಾರಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು.


ಬೆಂಗಳೂರು, ಜು.15(ಕೆಎಂಶಿ)–ಪದೇ ಪದೆ ಕಿತ್ತುಹೋಗುತ್ತಿರುವ ನಗರದ ರಸ್ತೆಗಳ ಶಾಶ್ವತ ದುರಸ್ತಿಗೆ 1,800 ಕೋಟಿ ರೂ. ವೆಚ್ಚದಲ್ಲಿ 157 ಕಿ.ಮೀ. ವೈಟ್ ಟಾಪಿಂಗ್ ರಸ್ತೆ ನಿರ್ಮಿಸಲಾಗುವುದು ಎಂದು ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನೂ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

'ಬ್ರ್ಯಾಂಡ್ ಬೆಂಗಳೂರು–ಸುಗಮ ಸಂಚಾರ ಬೆಂಗಳೂರು' ಪರಿಕಲ್ಪನೆಯಡಿ ನಗರದ ಚಾಮರಾಜಪೇಟೆ, ಗಾಂಧಿನಗರ, ಮಲ್ಲೇಶ್ವರ, ಮಹಾಲಕ್ಷ್ಮಿಪುರದಲ್ಲಿ 200 ಕೋಟಿ ರೂ. ವೆಚ್ಚದಲ್ಲಿ 19.67 ಕಿ.ಮೀ. ವೈಟ್ ಟಾಪಿಂಗ್ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನ ಪ್ರಮುಖ ರಸ್ತೆಗಳಲ್ಲಿ ಗುಂಡಿಗಳು ಬೀಳಬಾರದೆಂಬ ಉದ್ದೇಶದಿಂದ ವೈಟ್ ಟಾಪಿಂಗ್ ಮಾಡಲಾಗುತ್ತಿದೆ. ಈ ರಸ್ತೆಗಳು ಸುಮಾರು 25 ವರ್ಷ ಬಾಳಿಕೆ ಬರಲಿವೆ ಎಂದರು. ನಗರದ ಮೂರ್ನಾಲ್ಕು ವಾರ್ಡ್‌ಗಳಲ್ಲಿ ಪ್ರತಿನಿತ್ಯ ವೈಟ್ ಟಾಪಿಂಗ್ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗುವುದು, ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು. ಸಂಚಾರ ದಟ್ಟಣೆ ಸಮಸ್ಯೆ ಬಗೆಹರಿಸಲು 200 ಕಿ.ಮೀ. ನಷ್ಟು ಹೊಸ ರಸ್ತೆ ನಿರ್ಮಾಣಕ್ಕೆ ತೀರ್ಮಾನಿಸಿದ್ದು, ಉನ್ನತ ಗುಣಮಟ್ಟಕ್ಕಾಗಿ ವೈಟ್ ಟಾಪಿಂಗ್‌ಗೆ ಸೂಚಿಸಲಾಗಿದೆ ಎಂದರು.

ಜು.23ರಂದು ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿ

ಮೈಸೂರು, ಜು.15– ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜುಲೈ 23ರಂದು ಬೆಳಗ್ಗೆ 10 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿ ಆಯೋಜಿಸಲಾಗಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉಪಸ್ಥಿತರಿರಲಿದ್ದು, ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ.

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಅನಿಲ್ ಕುಮಾರ್ ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ ರಮೇಶ್ ಬಂಡಿಸಿದ್ದೇಗೌಡ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಡಾ.ಪುಷ್ಪ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನಿಲ್ ಬೋಸ್ ಆಗಮಿಸಲಿದ್ದಾರೆ.

ಶಾಸಕರಾದ ತನ್ವೀರ್ ಸೇಠ್, ಜಿ.ಟಿ ದೇವೇಗೌಡ, ರವಿಶಂಕರ್ ಡಿ, ಟಿ.ಎಸ್ ಶ್ರೀವತ್ಸ, ಜಿ.ಡಿ ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್ ಹಾಗೂ ವಿಧಾನ ಪರಿಷತ್‌ನ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಯತಿಂದ್ರ ಮತ್ತು ವಿವೇಕಾನಂದ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ದೇವನೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜ್ ಉಪನ್ಯಾಸಕರು ಮತ್ತು ಲೇಖಕ ಡಾ.ಉಮೇಶ ಬೇವಿನಹಳ್ಳಿ ಉಪನ್ಯಾಸ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಸುವರ್ಣ ಮಹೋತ್ಸವದ ವಿಶೇಷ ಉಪನ್ಯಾಸ ಕಾರ್ಯಕ್ರಮ

ಮೈಸೂರು.ಜು.15– ಮೈಸೂರು ವಿಶ್ವವಿದ್ಯಾನಿಲಯದ ಫುಡ್ ಸೈನ್ಸ್ ಅಂಡ್ ನ್ಯೂಟ್ರೀಷಿಯನ್ ವಿಭಾಗದ ವತಿಯಿಂದ ಜುಲೈ 16 ರಂದು ಮಧ್ಯಾಹ್ನ 3 ಗಂಟೆಗೆ ಮಾನಸ ಗಂಗೋತ್ರಿ ವಿಜ್ಞಾನ ಭವನದಲ್ಲಿ 'ಎಫ್‌ಎಸ್‌ಎನ್ ಗೋಲ್ಡನ್ ಜುಬಿಲಿ ಗ್ರೂಪ್‌ನ ಉದ್ಘಾಟನೆ ಮತ್ತು ವಿಶೇಷ ಉಪನ್ಯಾಸ' ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಹೈದರಾಬಾದ್‌ನ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರೀಷಿಯನ್‌ನ ಮಾಜಿ ನಿರ್ದೇಶಕ ಡಾ.ಸೆಸಿಕೆರಾನ್ ಸುವರ್ಣ ಮಹೋತ್ಸವದ ವಿಶೇಷ ಉಪನ್ಯಾಸ ನೀಡಲಿದ್ದು, ಮೈಸೂರು ವಿವಿ ಕುಲಪತಿ ಡಾ.ಲೋಕನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ರಾಷ್ಟ್ರೀಯ ಸಾರ್ವಜನಿಕ ಸಹಕಾರ–ಮಕ್ಕಳ ಅಭಿವೃದ್ಧಿ ಸಂಸ್ಥೆಯ ಪ್ರಾದೇಶಿಕ ಕೇಂದ್ರದ ಮಾಜಿ ಪ್ರಾದೇಶಿಕ ನಿರ್ದೇಶಕಿ ಡಾ.ತಾರಾ ಮಾತನಾಡಲಿದ್ದು, ಮೈಸೂರು ವಿವಿ ರಿಜಿಸ್ಟ್ರಾರ್ ವಿ.ಆರ್.ಶೈಲಜಾ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಫುಡ್ ಸೈನ್ಸ್ ಅಂಡ್ ನ್ಯೂಟ್ರೀಷಿಯನ್ ವಿಭಾಗದ ಮುಖ್ಯಸ್ಥರು, ಅಲುಮ್ನಿ ಅಸೋಸಿಯೇಷನ್‌ನ ಅಧ್ಯಕ್ಷೆ ಪ್ರೊ.ಹಸ್ನ ಉರೂಜ್ ಉಪಸ್ಥಿತರಿರಲಿದ್ದಾರೆ.

ಮಾದೇಗೌಡನಹುಂಡಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ



ತಿ.ನರಸೀಪುರ ತಾಲೂಕಿನ ಮಾದೇಗೌಡನಹುಂಡಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ಹುನಗನಹಳ್ಳಿಹುಂಡಿ ಹೆಚ್.ಎಸ್.ರಾಜೇಶ ಹಾಗೂ ಉಪಾಧ್ಯಕ್ಷೆಯಾಗಿ ಮಾದೇಗೌಡನಹುಂಡಿ ನಾಗಮ್ಮ ಅವಿರೋಧವಾಗಿ ಆಯ್ಕೆಯಾದರು. ಇದೇ ವೇಳೆ ಸಂಘದ ಸದಸ್ಯರು ಇವರನ್ನು ಅಭಿನಂದಿಸಿದರು.

ಸ್ವಚ್ಛ–ಸ್ಪಷ್ಟ ಕನ್ನಡದ ಅನನ್ಯ ನಿರೂಪಕಿ ಅಪರ್ಣಾ; ಶ್ರದ್ಧಾಂಜಲಿ



ಕರ್ನಾಟಕ ಸುಗಮ ಸಂಗೀತ ಪರಿಷತ್ ವತಿಯಿಂದ ಇತ್ತೀಚೆಗೆ ಅಗಲಿದ ಕನ್ನಡದ ನಟಿ ಹಾಗೂ ಖ್ಯಾತ ನಿರೂಪಕಿ ಶ್ರೀಮತಿ ಅಪರ್ಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಜು. 15– ನಾಡು ನುಡಿ ಹಾಗೂ ಸಾಂಸ್ಕೃತಿಕ ಇತಿಹಾಸದ ಬಗ್ಗೆ ಹೆಚ್ಚಿನ ಅರಿವು ಹೊಂದಿದವರು ಅಪರ್ಣಾ. ಅವರು ತಮ್ಮ ಸ್ವಚ್ಛ ಕನ್ನಡ ನುಡಿಯ ಮೂಲಕ ವೇದಿಕೆಯ ಕಾರ್ಯಕ್ರಮಗಳಲ್ಲಿ ಕನ್ನಡದ ಕಂಪನ್ನು ಮೂಡಿಸಿದವರು ಎಂದು ಡಾ.ನಾಗರಾಜ್ ವಿ.ಭೈರಿ ಹೇಳಿದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ ವತಿಯಿಂದ ಇತ್ತೀಚೆಗೆ ಅಗಲಿದ ಕನ್ನಡದ ನಟಿ ಹಾಗೂ ಖ್ಯಾತ ನಿರೂಪಕಿ ಅಪರ್ಣಾ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿ, ಕನ್ನಡ ನಾಡಿನ ಅನನ್ಯ ನಿರೂಪಕಿಯಾಗಿ ಆಕರ್ಷಣೆ ತಂದವರು. ಚಲನಚಿತ್ರ ಧಾರಾವಾಹಿಗಳ ಅಭಿನೇತ್ರಿಯಾಗಿ ಗಮನ ಸೆಳೆದಿದ್ದ ಅಪರ್ಣಾ ಅವರು ರಾಜ್ಯದ ಯಾವುದೇ ಸರ್ಕಾರಿ ಖಾಸಗಿ ಸಂಘ ಸಂಸ್ಥೆಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಾರ್ಯಕ್ರಮ ಸ್ಪಷ್ಟ ಒಳ ನೋಟಗಳನ್ನು ಗ್ರಹಿಸಿ ಕಾರ್ಯಕ್ರಮ ನಿರೂಪಿಸುತ್ತಿದ್ದ ರೀತಿ ಎಂತಹವರನ್ನು ತಲೆತೂಗಿಸುವಂತಿತ್ತು ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಮಾತನಾಡಿ, ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆ ಹಾಗೂ ರಂಗಭೂಮಿ ಸಂಗೀತ ಕ್ಷೇತ್ರಗಳ ಆಳ ಅರಿವು ಬೆಳೆಸಿಕೊಂಡಿದ್ದ ಅಪರ್ಣ, ಕನ್ನಡ ಸಾಂಸ್ಕೃತಿಕ ನೆಲೆಗಟ್ಟಿನ ನಿರೂಪಣೆಗೆ ಆಭರಣದಂತಿದ್ದರು ಎಂದು ಅಭಿಪ್ರಾಯಪಟ್ಟರು.

ಕರ್ನಾಟಕ ಸುಗಮ ಸಂಗೀತ ಪರಿಷತ್‌ನ ಕಾರ್ಯದರ್ಶಿ, ಸಿರಿ ಬಾಲು, ಕನ್ನಡ ಸುಗಮ ಸಂಗೀತ ಪರಿಷತ್ತಿನ ಮಾಧ್ಯಮ ಸಲಹೆಗಾರ ಎನ್.ಬೆಟ್ಟೇಗೌಡ, ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಯ ಮೈಸೂರು ಘಟಕದ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮುಡಾ ಮಾಜಿ ಸದಸ್ಯೆ ಲಕ್ಷ್ಮಿ ದೇವಿ, ಕನ್ನಡ ಜಾನಪದ ಪರಿಷತ್ ಮೈಸೂರು ಘಟಕದ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ಕಾವೇರಿ ಪ್ರಕಾಶ್, ಅಲಿಯನ್ಸ್ ಕ್ಲಬ್ ಇಂಟರ್ ನ್ಯಾಷನಲ್ ಮೈಸೂರು ಘಟಕದ ರಾಜ್ಯಪಾಲರಾದ ಸಿರಿ ಬಾಲು, ಮೈಸೂರು ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.



ಕನ್ನಡದ ಸ್ಪಷ್ಟ ಭಾಷಾ ಶೈಲಿಯ ನಿರೂಪಕಿ ಹಾಗೂ ನಟಿ ಅಪರ್ಣಾ ಅವರ ನಿಧನಕ್ಕೆ ಜೈಭೀಮ್ ಜನಸ್ಪಂದನ ವೇದಿಕೆ ವತಿಯಿಂದ ನುಡಿನಮನ ಸಲ್ಲಿಸಲಾಯಿತು. ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ರಾಘವೇಂದ್ರ, ಅಜಯ್ ಶಾಸ್ತ್ರಿ, ವೇದಿಕೆ ಅಧ್ಯಕ್ಷ ಚೇತನ್ ಕಾಂತರಾಜು, ರವಿಚಂದ್ರ, ವರುಣ ಮಹಾದೇವ್, ಲೋಕೇಶ್, ಗೋಬಿ ನಾಗರಾಜ್, ಸ್ವಾಮಿ, ಕಡಕೊಳ ಶಿವು, ಸಂತೋಷ್ ಕಿರಾಲು, ಎಸ್.ಎನ್.ರಾಜೇಶ್, ರಾಕೇಶ್, ಹರೀಶ್ ನಾಯ್ಡು, ದುರ್ಗಾಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಹಲವೆಡೆ ಮನೆಗಳಿಗೆ ಅಪಾರ ಹಾನಿ

● ರಸ್ತೆಗೆ ಬಿದ್ದ ಮರಗಳು ● ಕೊಡಗಿನ ವಿವಿಧೆಡೆ ಮುಂಗಾರು ಮಳೆ ಬಿರುಸು

ಮಡಿಕೇರಿ, ಜು.15–ಕೊಡಗು ಜಿಲ್ಲೆಯ ವಿವಿಧ ಭಾಗಗಳಲ್ಲಿ ಮುಂಗಾರು ಮಳೆ ಬಿರುಸುಗೊಂಡಿದ್ದು, ಜಿಲ್ಲಾದ್ಯಂತ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಗಾಳಿ ಸಹಿತ ಮಳೆಯಾಗುತ್ತಿರುವ ಕಾರಣ ಹಲವೆಡೆ ಮನೆಗಳಿಗೆ ಹಾನಿಯಾಗಿದೆ.

ಗಾಳಿಗೆ ಮರಗಳು ರಸ್ತೆಗೆ ಬಿದ್ದಿದ್ದು, ಅವುಗಳನ್ನು ತೆರವು ಮಾಡಿ ವಾಹನ ಸಂಚಾರಕ್ಕೆ ಅನುವು ಮಾಡಲಾಗಿದೆ. ಮರ ಬಿದ್ದ ಪರಿಣಾಮ ವಿದ್ಯುತ್ ಕಂಬಗಳ ಸಹಿತ ತಂತಿಗಳು ತುಂಡಾಗಿದ್ದು, ಹಲವು ಗ್ರಾಮಗಳಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಮಳೆ ನಡುವೆಯೇ ದುರಸ್ತಿ ಕಾರ್ಯವೂ ಭರದಿಂದ ಸಾಗಿದೆ. ಇನ್ನು ಗ್ರಾಮೀಣ ಭಾಗಗಳು ವಿದ್ಯುತ್ ಇಲ್ಲದೇ ಕತ್ತಲಲ್ಲಿ ಮುಳುಗಿವೆ.


ಭಾಗಮಂಡಲ, ತಲಕಾವೇರಿ, ಕೋರಂಗಾಲ, ಚೇರಂಗಾಲ, ಕೋಳಿಕಾಡು ಸೇರಿದಂತೆ ಕಾವೇರಿ ನದಿ ಪ್ರದೇಶಗಳಲ್ಲಿ ವ್ಯಾಪಕ ಮಳೆ ಸುರಿಯುತ್ತಿದೆ. ಸೋಮವಾರ ಬೆಳಗ್ಗೆ 8.30ರಲ್ಲಿ 120 ಮಿ.ಮೀ. ಮಳೆಯಾಗಿದ್ದು, ಭಾಗಮಂಡಲ ತ್ರಿವೇಣಿ ಸಂಗಮದಲ್ಲಿ ಮತ್ತೆ ನೀರಿನ ಮಟ್ಟ ಏರಿಕೆಯಾಗಿದೆ. ಸೋಮವಾರಪೇಟೆ ತಾಲೂಕಿನ ಶಾಂತಳ್ಳಿಯಲ್ಲಿ ದಾಖಲೆಯ 140 ಮಿ.ಮೀ ಮಳೆಯಾಗಿದೆ. ಸಂಪಾಜೆ ಹೋಬಳಿಯಲ್ಲಿ 89 ಮಿ.ಮೀ., ಸುಂಟಿಕೊಪ್ಪ ಭಾಗದಲ್ಲಿ 66.2 ಮಿ.ಮೀ. ಮಳೆ ಸುರಿದಿದೆ. ಕಾವೇರಿ ನದಿ ಹರಿಯುವ ಗ್ರಾಮಗಳಲ್ಲಿ ಧಾರಾಕಾರ ಮಳೆ ಯಾಗುತ್ತಿದ್ದು, ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಸಿದ್ದಾಪುರ ಸಮೀಪದ ಕರಡಿಗೋಡು ಗ್ರಾಮದ ತಗ್ಗು ಪ್ರದೇಶಗಳಿಗೆ ನೀರು ನುಗ್ಗುವ ಆತಂಕ ಎದುರಾಗಿದೆ. ಕಂದಾಯ ಇಲಾಖೆ ಸುರಕ್ಷತಾ ಕ್ರಮ ಕೈಗೊಂಡಿದೆ.

ಹತ್ತಾರು ಮನೆಗಳಿಗೆ ಹಾನಿ: ಭಾರೀ ಗಾಳಿ ಮಳೆಗೆ ಹಲವಾರು ವಾಸದ ಮನೆಗಳಿಗೆ ಹಾನಿ ಸಂಭವಿಸಿದ ಬಗ್ಗೆಯೂ ವರದಿಯಾಗಿದೆ. ಮಡಿಕೇರಿ ಹೋಬಳಿಯ ಮರಗೋಡು ಗ್ರಾಮದ ಎಂ.ಕೆ.ಅಣ್ಣು ಅವರ ವಾಸದ ಮನೆಗೆ ಸಂಪೂರ್ಣ ಹಾನಿಯಾಗಿದೆ.

ಸಂತ್ರಸ್ತ ಕುಟುಂಬವನ್ನು ಬೇರೊಂದು ಮನೆಗೆ ಸ್ಥಳಾಂತರಿಸಲಾಗಿದೆ. ಮರಗೋಡು ಗ್ರಾಮದ ಲಲಿತಾ ಅವರ ಮನೆ ಹಿಂಭಾಗ ಬರೆ ಕುಸಿದಿದ್ದು, ಗೋಡೆಗಳಿಗೆ ಅಲ್ಪ ಪ್ರಮಾಣದ ಹಾನಿಯಾಗಿದೆ. ಕುಶಾಲನಗರದ ಮಾದಾಪಟ್ಟಣ ಗ್ರಾಮದ ಬಸವರಾಜು ಅವರ ವಾಸದ ಮನೆ ಗೋಡೆ ಕುಸಿದಿದೆ. ಭಾಗಮಂಡಲ ಹೋಬಳಿಯ ಬೆಟ್ಟತ್ತೂರು ಗ್ರಾಮದ ದೇವರಕೊಲ್ಲಿ ಎಂಬಲ್ಲಿ ಕುಡಿಯರ ಗೌರಮ್ಮ ಕರುಂಬಯ್ಯ ಅವರ ಮನೆ ಮೇಲೆ ಮರ ಬಿದ್ದು ಹಾನಿಯಾಗಿದೆ.

ಸೋಮವಾರಪೇಟೆ ಹೋಬಳಿಯ ನೇಗಳ್ಳಿ ಕರ್ಕಳ್ಳಿ ನಿವಾಸಿ ಜಯಂತಿ ಅವರ ಮನೆಯ ಮೇಲೆ ಭಾರೀ ಗಾತ್ರದ ಮರ ಬಿದ್ದಿದ್ದು, ಮನೆ ಸಂಪೂರ್ಣವಾಗಿ ಜಖಂಗೊಂಡಿದೆ. ಇದರಿಂದ ಗೃಹೋಪಯೋಗಿ ವಸ್ತುಗಳಿಗೆ ಹಾನಿಯಾಗಿದೆ. ಮನೆ ಹಿಂಭಾಗದ ಗೋಡೆ ಸಂಪೂರ್ಣ ಕುಸಿದಿದ್ದು, ಅಪಾರ ನಷ್ಟ ಸಂಭವಿಸಿದೆ. ಕೊಡಗರಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಅಬ್ಬಾಸ್ ಅವರ ಮನೆ ಛಾವಣಿ ಗಾಳಿಗೆ ಹಾರಿಹೋಗಿದೆ. ಕುಶಾಲನಗರ ಹೋಬಳಿಯ ಹೆಗ್ಗಡಳ್ಳಿ ಗ್ರಾಮದ ಲಕ್ಷ್ಮಿ ಅವರ ಮನೆಯ ಗೋಡೆ ಕುಸಿದಿದೆ. ಮಳೆ ಹಾನಿ ಸ್ಥಳಗಳಿಗೆ ಕಂದಾಯ ಇಲಾಖೆ ಹಾಗೂ ಸ್ಥಳೀಯ ಗ್ರಾಪಂ ಅಧಿಕಾರಿಗಳು ತೆರಳಿ ನಷ್ಟ ಪರಿಶೀಲನೆ ನಡೆಸಿದ್ದಾರೆ.

ಅಧಿಕಾರಿಗಳಿಂದ ಪರಿಶೀಲನೆ: ಮಡಿಕೇರಿಯಲ್ಲಿ ವ್ಯಾಪಕ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ನಗರಸಭಾ ವ್ಯಾಪ್ತಿ ಸಣ್ಣಪುಟ್ಟ ಹಾನಿಯಾಗಿದೆ. ಈ ಸ್ಥಳಗಳಿಗೆ ಪೌರಾಯುಕ್ತ ವಿಜಯ್ ಭೇಟಿ ನೀಡಿ, ಪರಿಶೀಲಿಸಿದರು. ಮಡಿಕೇರಿ ತಾಲೂಕಿನ ಹಾನಿ ಪ್ರದೇಶಗಳಿಗೆ ತಹಸೀಲ್ದಾರ್ ಪ್ರವೀಣ್ ಭೇಟಿ ನೀಡಿದರೆ, ಕುಶಾಲನಗರ ತಾಲೂಕು ವ್ಯಾಪ್ತಿಯ ಕಾವೇರಿ ನದಿ ಪ್ರದೇಶಗಳಿಗೆ ತಹಸೀಲ್ದಾರ್ ಕಿರಣ್ ಗೌರಯ್ಯ ಭೇಟಿ ನೀಡಿ, ಅಲ್ಲಿನ ಪರಿಸ್ಥಿತಿ ವೀಕ್ಷಿಸಿದರು.



ಕೊಡಗಿನಲ್ಲಿ ಮಳೆ ಬಿರುಸುಗೊಂಡಿರುವುದರಿಂದ ಕೊಪ್ಪ ಸೇತುವೆ ಬಳಿಯ ಕಾವೇರಿ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿರುವುದು.





ಸೋಮವಾರಪೇಟೆ ಹೋಬಳಿಯ ನೇಗಳ್ಳಿ ಕರ್ಕಳ್ಳಿ ನಿವಾಸಿ ಜಯಂತಿ ಅವರ ಮನೆಯ ಮೇಲೆ ಭಾರೀ ಗಾತ್ರದ ಮರ ಬಿದ್ದು ಗೃಹೋಪಯೋಗಿ ವಸ್ತುಗಳು ಹಾನಿಯಾಗಿರುವುದು.



ಮಡಿಕೇರಿ ಹೋಬಳಿಯ ಮರಗೋಡು ಗ್ರಾಮದ ಎಂ.ಕೆ.ಅಣ್ಣು ಅವರ ವಾಸದ ಮನೆ ಸಂಪೂರ್ಣ ಹಾನಿಯಾಗಿರುವುದು.

ಇಂದು ಶಾಲಾ–ಕಾಲೇಜಿಗೆ ರಜೆ

ಮಡಿಕೇರಿ: ಕೊಡಗು ಜಿಲ್ಲಾದ್ಯಂತ ಭಾರೀ ಗಾಳಿ ಸಹಿತ ಮಳೆ ಮುಂದುವರೆದಿರುವ ಹಿನ್ನೆಲೆಯಲ್ಲಿ ಮಕ್ಕಳ ಸುರಕ್ಷತಾ ದೃಷ್ಟಿಯಿಂದ ಮಂಗಳವಾರ (ಜು.16) ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರ, ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಿಗೆ ರಜೆ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ರಂಗದಾಮಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಟರಾಜು ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಮಂಜುಳಾ ಆದೇಶ ನೀಡಿದ್ದಾರೆ.

ಲೋಕ್ ಅದಾಲತ್‌ನಲ್ಲಿ 371 ಪ್ರಕರಣ ಇತ್ಯರ್ಥ

ವಿರಾಜಪೇಟೆ, ಜು.15–ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ವಿರಾಜಪೇಟೆ ನ್ಯಾಯಾಲಯದಲ್ಲಿ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ 834 ಪ್ರಕರಣಗಳಲ್ಲಿ 371 ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಂಡವು.

ಇದರಲ್ಲಿ 68 ಚೆಕ್‌ಬೋನ್ಸ್ ಪ್ರಕರಣ, ಗಣಿ ಮತ್ತು ಖನಿಜ ನಿಯಂತ್ರಣ ಕಾಯ್ದೆಯಡಿ 26 ಹಾಗೂ 35 ಸಿವಿಲ್ ಪ್ರಕರಣ ಇತ್ಯರ್ಥಗೊಂಡವು. ಇನ್ನು 617 ಪ್ರಕರಣಗಳು ಬಾಕಿ ಉಳಿದಿವೆ.

ಲೋಕ್ ಅದಾಲತ್‌ನಲ್ಲಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಎಸ್.ಸುಜಾತ, ಹಿರಿಯ ಸಿವಿಲ್ ನ್ಯಾಯಾಧೀಶ ಆರ್.ಮಂಜುನಾಥ್, ಪ್ರಧಾನ ಸಿವಿಲ್ ನ್ಯಾಯಾಧೀಶ ಸಂತೋಷ ಕೊಠಾರಿ, ಅಪರ ಸಿವಿಲ್ ನ್ಯಾಯಾಧೀಶ ಪ್ರದೀಪ್ ಪೋತದಾರ ಹಾಗೂ ವಕೀಲರಾದ ಎಂ.ಕೆ.ದಿನೇಶ್, ಕೆ.ಎನ್.ವಿಶ್ವನಾಥ್, ಬಿ.ಎನ್.ಜಗದೀಶ್, ಸಿ.ಬಿ.ಅನಿತಾ, ಎನ್.ಬಿ.ದೇವಯ್ಯ ಮತ್ತಿತರರು ಹಾಜರಿದ್ದರು.



ವಿರಾಜಪೇಟೆ ನ್ಯಾಯಾಲಯದಲ್ಲಿ ನಡೆದ ಲೋಕ್ ಅದಾಲತ್‌ನಲ್ಲಿ ನ್ಯಾಯಾಧೀಶರು ಕೆಲ ಪ್ರಕರಣಗಳನ್ನು ಇತ್ಯರ್ಥಪಡಿಸಿದರು.

ಭೂ ಪರಿವರ್ತನೆಗೆ ಸರ್ಕಾರ ಬೆಂಬಲ: ಸಿಎನ್‌ಸಿ ಆರೋಪ



ಪೊನ್ನಂಪೇಟೆಯಲ್ಲಿ ಜನಜಾಗೃತಿಯ ಮಾನವ ಸರಪಳಿ ಕಾರ್ಯಕ್ರಮ ನಡೆಯಿತು.

ಮಡಿಕೇರಿ, ಜು.15–ಆರ್ಥಿಕ ಹೊರೆ ಅನುಭವಿಸುತ್ತಿರುವ ರಾಜ್ಯ ಸರ್ಕಾರ ಆರ್ಥಿಕ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಕೊಡಗು ಜಿಲ್ಲೆಯಲ್ಲಿ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿಗೆ ಪರೋಕ್ಷವಾಗಿ ಉತ್ತೇಜನ ನೀಡುತ್ತಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಆರೋಪಿಸಿದರು.

ಪೊನ್ನಂಪೇಟೆಯಲ್ಲಿ ನಡೆದ ಜನಜಾಗೃತಿಯ ಮಾನವ ಸರಪಳಿ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಅವರು, ಭೂ ಪರಿವರ್ತನೆ ಮತ್ತು ನೋಂದಣಿಗೆ ದೊಡ್ಡ ಮೊತ್ತದ ಶುಲ್ಕ ವಸೂಲಿ ಮಾಡುತ್ತಿರುವ ಸರ್ಕಾರ ಕೊಡಗಿನ ಕೃಷಿ ಭೂಮಿಯನ್ನು ಸುಲಭವಾಗಿ ಪರಭಾರೆಗೆ ಅವಕಾಶ ನೀಡುತ್ತಿದೆ. ಸರ್ಕಾರ ದಿನಕ್ಕೊಂದು ಕರಾಳ ಕಾನೂನನ್ನು ಜಾರಿಗೆ ತಂದುಕೊಡವರಿಗೆ ಕಿರುಕುಳ ನೀಡುತ್ತಿದೆ. ಕೊಡವ ಲ್ಯಾಂಡ್‌ನಿಂದಲೇ ಒಕ್ಕಲೆಬ್ಬಿಸುವ ಪ್ರಯತ್ನ ನಡೆಯುತ್ತಿದೆ. ದೊಡ್ಡ ದೊಡ್ಡ ಬಂಡವಾಳಶಾಹಿಗಳ ಪರ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿರುವ ಸರ್ಕಾರ ಮತ ಬ್ಯಾಂಕ್‌ಗಾಗಿ ಕೊಡಗನ್ನು ಬಲಿಪಶು ಮಾಡುತ್ತಿದೆ ಎಂದು ದೂರಿದರು.

ಹಿಂದಿನ ಸರ್ಕಾರ 30 ಎಕರೆವರೆಗಿನ ಒತ್ತುವರಿ ಜಮೀನನ್ನು 30 ವರ್ಷ ಗುತ್ತಿಗೆ ನೀಡುವ ಕ್ರಮ ಜಾರಿಗೆ ತಂದಿತ್ತು. ಇದಕ್ಕೆ ಪೂರಕವಾಗಿ ಈಗಿನ ಸರ್ಕಾರ ವಿಧಾನಸಭೆಯಲ್ಲಿ ಅನುಮೋದನೆ ನೀಡಿ ಕೃಷಿಕರನ್ನು ನಿರಾಳಗೊಳಿಸಿತ್ತು ಆದರೆ, ಇತ್ತೀಚಿನ ಬೆಳವಣಿಗೆಗಳು ವ್ಯತಿರಿಕ್ತವಾಗಿದ್ದು, ಗುತ್ತಿಗೆ ಆಧಾರದ ಯೋಜನೆ ಅನುಷ್ಠಾನಗೊಳ್ಳುವ ಬಗ್ಗೆ ಅನುಮಾನ ಕಾಡುತ್ತಿದೆ. ಕೊಡವ ಬುಡಕಟ್ಟು ಜನರಿಗೆ ಒಂದಿಲ್ಲ ಒಂದು ಕಾನೂನಿನ ಮೂಲಕ ಕಿರುಕುಳವಾಗುತ್ತಿದೆ ಎಂದರು.

ಇದೇ ವೇಳೆ ಬೃಹತ್ ಭೂ ಪರಿವರ್ತನೆ, ಭೂ ವಿಲೇವಾರಿ ವಿರುದ್ಧ ಮತ್ತು ಕೊಡವ ಲ್ಯಾಂಡ್ ಪರ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಸಿಎನ್‌ಸಿ ಚೇಂದಿರ ಶೈಲಾ, ಮುದ್ದಿಯಡ ಲೀಲಾವತಿ, ಲೆಫ್ಟಿನೆಂಟ್ ಕರ್ನಲ್ ಬಿ.ಎಂ.ಪಾರ್ವತಿ, ಮತ್ರಂಡ ಬೋಜಮ್ಮ, ಮಾಚಿಮಾಡ ಲಲ್ಲಿ, ಮಾಣಿಪಂಡ ರತಿ, ಮಲ್ಚಿರ ಕವಿತಾ, ಕಾಯಮಾಡ ಕಮಲ, ಕೇಚೆಟ್ಟಿರ ಕಾಮುನಿ, ಕಾಳಮಂಡ ನಯನ, ಕಾಳಮಂಡ ಕಲ್ಪಕ್, ಮಲ್ಚಿರ ಪ್ರತೀಮ, ಬೊಳ್ಳಮ್ಮ, ಸುಳ್ಳಿಮಾಡ ವಿನು, ಆಲೆಮಾಡ ರೋಶನ್, ಆಲೆಮಾಡ ನವೀನ, ಮತ್ರಂಡ ನವೀನ್, ಕೊಟ್ಟುಕತ್ತೀರ ಸೋಮಣ್ಣ, ಬೊವ್ವೇರಿಯಂಡ ಮೊಣ್ಣಪ್ಪ, ಕಟ್ಟೆಂಗಡ ಪ್ರಶಾಂತ್, ಸುಳ್ಳಿಮಾಡ ಆರ್ಯ ಮತ್ತಿತರರು ಪಾಲ್ಗೊಂಡಿದ್ದರು.

ಜು.31ರೊಳಗೆ ಬೆಳೆ ವಿಮೆ ನೋಂದಾಯಿಸಿ

ಮಡಿಕೇರಿ: ಬೆಳೆ ವಿಮೆ ನಷ್ಟವನ್ನು ಜು.31ರೊಳಗೆ ನೋಂದಾಯಿಸಿಕೊಳ್ಳಬೇಕು. ಮುಂಗಾರು ಹಂಗಾಮಿನ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯನ್ನು ಕೊಡಗು ಜಿಲ್ಲೆಯ ಎಲ್ಲಾ ತಾಲೂಕಿನಲ್ಲಿ ಕಾಳು ಮೆಣಸು ಹಾಗೂ ಅಡಕೆ ಬೆಳೆಗಳಿಗೆ ಅನುಷ್ಠಾನಗೊಳಿಸಲಾಗುವುದು. ಮಳೆ ಪ್ರಮಾಣ, ತಾಪಮಾನ ಮತ್ತಿತರ ಮಾಹಿತಿಗಳನ್ನು ಸ್ಥಳೀಯವಾಗಿ ಲಭ್ಯವಿರುವ ಟೆಲಿಮೆಟ್ರಿಕ್ ಮಳೆ ಮಾಪನ ಕೇಂದ್ರಗಳಲ್ಲಿ ದಾಖಲಿಸುವ ಅಂಶಗಳ ಆಧಾರದ ಮೇಲೆ ಬೆಳೆ ವಿಮೆ ನಷ್ಟ ತೀರ್ಮಾನಿಸಲಾಗುವುದು. ವಿಮೆ ನೋಂದಣಿಗೆ ಜು.31 ಕೊನೆಯ ದಿನವಾಗಿದೆ.

ಮಾಹಿತಿಗೆ ಸಮೀಪದ ಬ್ಯಾಂಕ್ ಶಾಖೆ ಅಥವಾ ಕ್ಷೇಮಾ ಜನರಲ್ ಇನ್ಶೂರೆನ್ಸ್ ಕಂಪನಿ (ನವೀನ್: 7760076574, ಹರೀಶ್: 8970456510) ಸಂಪರ್ಕಿಸಬಹುದು.

ವಿ.ಎಸ್.ಸಜಿಗೆ ಸನ್ಮಾನ...

ಮಡಿಕೇರಿ ಸಂತ ಮರಿಯಮ್ಮ ದೇವಾಲಯದಲ್ಲಿ ಕುಶಾಲನಗರ ನಗರಾಭಿವೃದ್ಧಿ ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯ ವಿ.ಎಸ್.ಸಜಿ ಅವರನ್ನು ಸಿರೋ ಮಲಬಾರ್ ಕ್ರೈಸ್ತ ಸಭೆ ವತಿಯಿಂದ ಸನ್ಮಾನಿಸಲಾಯಿತು. ಧರ್ಮಗುರು ಜೋಜಿ ವಡಕ್ಕೇವೀಟ್ಟಿಲ್, ಧರ್ಮಕೇಂದ್ರ ಕಾರ್ಯದರ್ಶಿಗಳಾದ ಫ್ರಾನ್ಸಿಸ್, ಜೋಸ್, ಪ್ರಮುಖರಾದ ಜೋಯಿ, ಜೋಸ್ ಚೂಳಕ್ಕಲ್, ಶ್ಯಾಂ ಬಾಬು ಇದ್ದರು.



ಜು.20, ರಥೋತ್ಸವ: ವಿವಿಧ ಪೂಜಾ ಕಾರ್ಯ

ಚಾಮರಾಜನಗರ: ಕೆಂಪನಂಜಾಂಬ ಅಮ್ಮನವರ ಸಮೇತ ಚಾಮರಾಜೇಶ್ವರಸ್ವಾಮಿ ಮಹಾ ರಥೋತ್ಸವ ಜು.20ರಂದು ನಗರದಲ್ಲಿ ನಡೆಯಲಿದ್ದು, ವಿವಿಧ ಪೂಜಾ ಕೈಂಕರ್ಯ ನೆರವೇರಿಸಲಾಗುವುದು.

ಜು.16ರಂದು ಅನಂತ ಪೀಠಾರೋಹಣೋತ್ಸವ, 17ರಂದು ಪುಷ್ಪಮಂಟ ಪಾರೋಹಣೋತ್ಸವ, 18ರಂದು ವೃಷಭಾರೋಹಣೋತ್ಸವ, 19ರಂದು ವಸಂತೋತ್ಸವ ಪೂರ್ವಕ ಗಜವಾಹನೋತ್ಸವ ನಡೆಯಲಿದೆ. 20ರಂದು ಮಧ್ಯಾಹ್ನ 12.07 ರಿಂದ 12.30ರೊಳಗೆ ಮನ್ಮಹಾರಥಾರೋಹಣ ಜರುಗಲಿದೆ. ನಂತರ ಹಂಸಾರೋಹಣಾನಂತರ ನಟೇಶೋತ್ಸವ, 21ರಂದು ಮೃಗಯಾತ್ರಾ ಪೂರ್ವಕ ಅಶ್ವಾರೋಹಣ ನಂತರ ಮಹಾಭೂತಾರೋಹಣ, ದೇವಿ ಪ್ರಣಯ ಕಲಹ ಸಂಧಾನೋತ್ಸವ, 22ರಂದು ಹಗಲು ಚೂರ್ಣೋತ್ಸವ ಪೂರ್ವಕ ಅವಭೃತ ತೀರ್ಥಸ್ನಾನ, ಧ್ವಜಾವರೋಹಣ, ಮೌನಬಲಿ, 23ರಂದು ಪುಷ್ಪಯೋಗ ಪೂರ್ವಕ ಕೈಲಾಸಯಾನಾರೋಹಣೋತ್ಸವ, 24ರಂದು ಮಹಾಸಂಪ್ರೋಕ್ಷಣಾ ಪೂರ್ವಕ ನಂದಿವಾಹನೋತ್ಸವ ಪೂಜಾ ಕೈಂಕರ್ಯ ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಚಾಮರಾಜೇಶ್ವರ ರಥೋತ್ಸವಕ್ಕೆ ಸಿದ್ಧತೆ ಕೈಗೊಳ್ಳಿ

ಪೂರ್ವಸಿದ್ಧತಾ ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚನೆ

ಚಾಮರಾಜನಗರ, ಜು.15–ನಗರದಲ್ಲಿ ಜು.20ರಂದು ನಡೆಯುವ ಇತಿಹಾಸ ಪ್ರಸಿದ್ಧ ಶ್ರೀ ಚಾಮರಾಜೇಶ್ವರಸ್ವಾಮಿ ಮಹಾರಥೋತ್ಸವಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಶ್ರೀ ಕೆಂಪನಂಜಾಂಬ ಅಮ್ಮನವರ ಸಮೇತ ಚಾಮರಾಜೇಶ್ವರ ರಥೋತ್ಸವದ ಸಂಬಂಧ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಆಷಾಢ ಮಾಸದಲ್ಲಿ ಏಕೈಕವಾಗಿ ಚಾಮರಾಜೇಶ್ವರ ರಥೋತ್ಸವ ನಡೆಯಲಿದೆ. ಜಾತ್ರೆ ಅಂಗವಾಗಿ ದೇವಾಲಯದಲ್ಲಿ ವಿವಿಧ ಪೂಜಾ ಕೈಂಕರ್ಯ, ಧಾರ್ಮಿಕ ಕಾರ್ಯಕ್ರಮ ಈಗಾಗಲೇ ಆರಂಭವಾಗಿದ್ದು, ಜು.24ರವರೆಗೂ ಮುಂದುವರೆಯಲಿವೆ. ಹೊರ ರಾಜ್ಯಗಳಿಂದ ರಥೋತ್ಸವಕ್ಕೆ ಹೆಚ್ಚಿನ ಜನರು ಆಗಮಿಸುವುದರಿಂದ ಸಿದ್ಧತೆಗಳು ಅಚ್ಚುಕಟ್ಟಾಗಿ ಇರುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಇತ್ತೀಚೆಗೆ ಡೆಂಗ್ಯೂ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆ ಭಕ್ತರ ಹಿತದೃಷ್ಟಿಯಿಂದ ಟ್ಯಾಂಕರ್ ಹಾಗೂ ಕ್ಯಾನ್‌ಗಳ ಮೂಲಕ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಜಾತ್ರೆಯಲ್ಲಿ, ಯಾವುದೇ ಲೋಪಗಳಿಗೂ ಅವಕಾಶವಾಗದಂತೆ ಎಚ್ಚರ ವಹಿಸುವಂತೆ ನಿರ್ದೇಶನ ನೀಡಿದರು.

ರಥ ಚಲಿಸುವ ಮಾರ್ಗದಲ್ಲಿ ಸುಗಮ ಸಂಚಾರಕ್ಕೆ ರಸ್ತೆ ದುರಸ್ತಿಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು. ರಥ ಹಾದಿಯಲ್ಲಿ ಸಮರ್ಪಕವಾಗಿ ಮರಳು ಹಾಕಬೇಕು. ರಥೋತ್ಸವ ಮುಗಿದ ಬಳಿಕ ಮರಳನ್ನು ತೆರವುಗೊಳಿಸಬೇಕು. ಪ್ರಸಾದ ವಿನಿಯೋಗ ಮಾಡುವ ಸ್ಥಳದ ಸುತ್ತಲಿನ ಪ್ರದೇಶದಲ್ಲಿ ಕಸದ ಬುಟ್ಟಿಗಳನ್ನಿಟ್ಟು ಸೂಕ್ತವಾಗಿ ಕಸ ವಿಲೇವಾರಿ ಮಾಡಿ ಸ್ವಚ್ಛತೆ ಕಾಪಾಡಬೇಕು. ರಥ ಸಾಗುವ ದಾರಿಯಲ್ಲಿ ಹಾದುಹೋಗಿರುವ ವಿದ್ಯುತ್ ತಂತಿ ಹಾಗೂ ಇತರೆ ಕೇಬಲ್‌ಗಳನ್ನು ತೆರವುಗೊಳಿಸಬೇಕು. ದೇವಸ್ಥಾನದಲ್ಲಿ ಪೂಜಾ ಕೈಂಕರ್ಯ ಮುಗಿಯುವವರೆಗೆ ನಿರಂತರ ವಿದ್ಯುತ್ ಪೂರೈಕೆ ಮಾಡುವಂತೆ ಸೆಸ್ಕ್ ಅಧಿಕಾರಿಗಳಿಗೆ ತಿಳಿಸಿದರು.

ಜಾತ್ರೆಯಲ್ಲಿ ಹೆಚ್ಚಿನ ಭಕ್ತರು ಆಗಮಿಸುವುದರಿಂದ ಸೂಕ್ತ ಬಂದೋಬಸ್ತ್, ಸಂಚಾರದಟ್ಟಣೆ ನಿಯಂತ್ರಣ ಮತ್ತು ವಾಹನ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು. ಜಾತ್ರೆಯಲ್ಲಿ ಯಾವುದೇ ಅವಘಡಗಳು ನಡೆಯದಂತೆ ಎಚ್ಚರ ವಹಿಸಬೇಕು. ಈ ಸಂಬಂಧ ಎಲ್ಲಾ ಅಧಿಕಾರಿಗಳು ತಹಸೀಲ್ದಾರ್ ಜೊತೆ ಚರ್ಚಿಸಿ ಸಮನ್ವಯ ಸಾಧಿಸಿ ರಥೋತ್ಸವ ಯಶಸ್ವಿಗೆ ಸಹಕರಿಸುವಂತೆ ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ತಹಸೀಲ್ದಾರ್ ಗಿರಿಜ, ನಗರಸಭೆ ಪೌರಾಯುಕ್ತ ಎಸ್.ವಿ. ರಾಮದಾಸ್, ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಮೇಶ್ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಚಾಮರಾಜೇಶ್ವರ ರಥೋತ್ಸವದ ಪೂರ್ವಸಿದ್ಧತಾ ಸಭೆಯಲ್ಲಿ ಡಿಸಿ ಶಿಲ್ಪನಾಗ್ ಮಾತನಾಡಿದರು.

ಸಂಚಾರ, ರಸ್ತೆ ಸುರಕ್ಷತೆ ಆಂದೋಲನ



ಚಾಮರಾಜನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಸಂಚಾರ ಮತ್ತು ರಸ್ತೆ ಸುರಕ್ಷತೆ ಜಾಗೃತಿ ಆಂದೋಲಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ ಚಾಲನೆ ನೀಡಿದರು.

ಚಾಮರಾಜನಗರ, ಜು.15–ಜಿಲ್ಲಾ ಪೊಲೀಸ್ ವತಿಯಿಂದ ಖಾಸಗಿ ವಾಹನ ಚಾಲಕರು ಹಾಗೂ ಮಾಲೀಕರಿಗೆ ಸಂಚಾರ ಮತ್ತು ರಸ್ತೆ ಸುರಕ್ಷತೆ ಜಾಗೃತಿ ಆಂದೋಲವನ್ನು ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ, ಚಾಲಕರಿಗೆ ಸಂಚಾರ ನಿಯಮ ಮತ್ತು ಸುರಕ್ಷತೆ ಬಗ್ಗೆ ಮಾಹಿತಿ ನೀಡಿದರು. ಜೊತೆಗೆ ಮಾಲೀಕರು ಹಾಗೂ ಚಾಲಕರ ಕುಂದುಕೊರತೆ ಆಲಿಸಿ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗೂಡ್ಸ್ ಆಟೋ, ಪ್ಯಾಸೆಂಜರ್ ಆಟೋ, ಕ್ಯಾಬ್, ಲಾರಿ ಹಾಗೂ ಇನ್ನಿತರೆ ಖಾಸಗಿ ವಾಹನಗಳ ಮಾಲೀಕರು ಮತ್ತು ಚಾಲಕರು ಭಾಗವಹಿಸಿದ್ದರು.



ಹೆಚ್ಚಾಗಿ ಮಳೆ ಬೀಳುತ್ತಿದ್ದ ಕಾರಣ ಚಾಮರಾಜನಗರದ ಬಂಡೀಪುರ ಅರಣ್ಯದಲ್ಲಿ ಚಿರತೆ ತನ್ನ ಮರಿಯನ್ನು ಬಾಯಲ್ಲಿ ಕಚ್ಚಿಕೊಂಡು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸುತ್ತಿರುವುದು. ಚಿತ್ರ: ಅರವಿಂದ್ ಕಾರ್ತಿಕ್ (ಪ್ರವಾಸಿಗ)

ಹರದನಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿಗೆ ಚಾಲನೆ

ಚಾಮರಾಜನಗರ, ಜು.15–ತಾಲೂಕಿನ ಹರದನಹಳ್ಳಿಯಲ್ಲಿ 50 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಬಳಿಕ ಮಾತನಾಡಿ ಶಾಸಕರು, ತಾಲೂಕಿನ ಹರದನಹಳ್ಳಿಯಿಂದ ಅರಕಲವಾಡಿಗೆ ಹೋಗುವ ರಸ್ತೆಯಲ್ಲಿ 100 ಮೀಟರ್ ನವೀಕರಣ, 180 ಮೀಟರ್ ಹೊಸ ರಸ್ತೆ ನಿರ್ಮಾಣ ಕಾಮಗಾರಿಗೆ ಲೆಕ್ಕಶೀರ್ಷಿಕೆಯಡಿ 50 ಲಕ್ಷ ರೂ. ಮಂಜೂರಾಗಿದ್ದು, ದಿನಗಳಲ್ಲಿ ಇದು ಉತ್ತಮ ರಸ್ತೆಯಾಗಲಿದೆ. ಇದರಿಂದ ಈ ಭಾಗದ ಜನರಿಗೆ ಅನುಕೂಲವಾಗಲಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಮಂಜುನಾಥ್, ಜಿಪಂ ಮಾಜಿ ಅಧ್ಯಕ್ಷ ಕಾವೇರಿ ಶಿವಕುಮಾರ್, ತಾಪಂ ಮಾಜಿ ಸದಸ್ಯ ಮಹದೇವಶೆಟ್ಟಿ, ಪಿಡಬ್ಲ್ಯೂಡಿ ಎಇ ರಮೇಶ್, ಗ್ರಾಪಂ ಸದಸ್ಯ ಕೇಶವಮೂರ್ತಿ, ಮುಖಂಡ ಮನ್ಸೂರ್ ಅಹಮದ್ ಇತರರು ಹಾಜರಿದ್ದರು.



ಚಾಮರಾಜನಗರ ತಾಲೂಕಿನ ಹರದನಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಅಂಗನವಾಡಿ ಮೂಲಸೌಕರ್ಯಕ್ಕೆ ಕ್ರಮ ವಹಿಸಲು ಸೂಚನೆ

ಚಾಮರಾಜನಗರ, ಜು.15–ಅಂಗನವಾಡಿ ಕೇಂದ್ರಗಳ ಕುಂದುಕೊರತೆ ಪರಿಶೀಲನಾ ವರದಿಯೊಂದಿಗೆ ಮಾಹಿತಿ ನೀಡಿದ್ದು, ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ್ ತಿಳಿಸಿದ್ದಾರೆ.

ಇವರು ಚಾಮರಾಜನಗರದ 3 ಅಂಗನವಾಡಿ, ಯಳಂದೂರು ತಾಲೂಕಿನ 3, ಗುಂಡ್ಲುಪೇಟೆಯ 2 ಹಾಗೂ ಹನೂರು ತಾಲೂಕಿನ 3 ಅಂಗನವಾಡಿಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿ ಅಲ್ಲಿನ ಕುಂದುಕೊರತೆ ಆಲಿಸಿ ವರದಿ ತಯಾರಿಸಲಾಗಿದೆ. ಜಿಲ್ಲೆಯ ಒಟ್ಟು ಅಂಗನವಾಡಿಗಳಲ್ಲಿ ಸ್ವಂತ ಕಟ್ಟಡಗಳಲ್ಲಿ 1086, ಬಾಡಿಗೆ ಕಟ್ಟಡಗಳಲ್ಲಿ 215 ಹಾಗೂ ಶಾಲಾ ಕಟ್ಟಡ ಮತ್ತು ಇತರೆ ಸರ್ಕಾರಿ ಕಟ್ಟಡ ಗಳಲ್ಲಿ 141 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಕೆಲ ಅಂಗನವಾಡಿಗಳಲ್ಲಿ ವಿದ್ಯುತ್ ಸಂಪರ್ಕ, ಕುಡಿಯುವ ನೀರಿನ ಸೌಲಭ್ಯ ಹಾಗೂ ಪ್ರತ್ಯೇಕ ಶೌಚಾಲಯದ ಕೊರತೆ, ಆವರಣಗಳು ಸ್ವಚ್ಛತೆಯಿಂದ ಇಲ್ಲದಿರುವುದು ಹಾಗೂ ಸಿಬ್ಬಂದಿ ಕೊರತೆ ಕಂಡು ಬಂದಿದೆ ಎಂದು ತಿಳಿಸಿದ್ದಾರೆ.

ಅಂಗನವಾಡಿ ಜತೆಗೆ 3 ವರ್ಷ ಮೇಲ್ಪಟ್ಟ ಮಕ್ಕಳು ಹಾಗೂ ಬಾಣಂತಿಯರಿಗೂ ಪೌಷ್ಟಿಕ ಆಹಾರ ನೀಡುವಂತೆ ಅಂಗನವಾಡಿ ಕೇಂದ್ರದ ಸಿಬ್ಬಂದಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ಸಾರ್ವಜನಿಕರಿಗೆ ಅನುಕೂಲವಾಗುವಂತೆ ಹಾಗೂ ಸರ್ಕಾರಿ ಸೌಲಭ್ಯಗಳ ಮಾಹಿತಿ ಒದಗಿಸುವ ಸಲುವಾಗಿ ಅಂಗನವಾಡಿ ಕೇಂದ್ರಗಳ ಆವರಣದಲ್ಲಿ ಮಾಹಿತಿ ಫಲಕವನ್ನು ತಪ್ಪದೇ ಲಗತ್ತಿಸುವಂತೆ ಸೂಚನೆ ನೀಡಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ತವ್ಯ ಲೋಪ ಹಿನ್ನೆಲೆ ಕಾನ್‌ಸ್ಟೇಬಲ್ ಅಮಾನತು

ಚಾಮರಾಜನಗರ, ಜು.15– ಕರ್ತವ್ಯ ನಿರ್ಲಕ್ಷ್ಯ, ಬೇಜವಾಬ್ದಾರಿತನ ಹಾಗೂ ಸರಕು ಸಾಗಾಣೆ ಲಾರಿ ಚಾಲಕರಿಂದ ಹಣ ಪಡೆದ ಹಿನ್ನೆಲೆಯಲ್ಲಿ ಚಾಮರಾಜನಗರ ಪೊಲೀಸ್ ಠಾಣೆಯ ಕಾನ್‌ಸ್ಟೇಬಲ್ ಉಮಾಶಂಕರ ಅವರನ್ನು ಅಮಾನತು ಗೊಳಿಸಲಾಗಿದೆ.

ಠಾಣೆ ವ್ಯಾಪ್ತಿ ಕಳ್ಳತನ ಪ್ರಕರಣಗಳು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಉಮಾಶಂಕರ ಅವರನ್ನು ಜು.11ರಂದು ರಾತ್ರಿ ಗಸ್ತು ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಆದರೆ, ಈತ ಚಾಮರಾಜನಗರ ಅಂಚೆ ಕಚೇರಿ ಮುಂಭಾಗ ಸರಕು ಸಾಗಣೆ ಲಾರಿ ತಡೆದು, ಚಾಲಕರಿಂದ ಹಣ ಪಡೆಯುತ್ತಿರುವುದು ವಿಡಿಯೋ ಚಿತ್ರೀಕರಣಗಳಿಂದ ಮೇಲ್ನೋಟಕ್ಕೆ ಕಂಡು ಬಂದಿದೆ ಈ ಹಿನ್ನೆಲೆಯಲ್ಲಿ ಹಣ ವಸೂಲಿಯಲ್ಲಿ ತೊಡಗಿದ್ದ ಉಮಾಶಂಕರನನ್ನು ಅಮಾನತುಗೊಳಿಸಿ ಎಸ್ಪಿ ಡಾ. ಬಿ.ಟಿ.ಕವಿತಾ ಆದೇಶ ಹೊರಡಿಸಿದ್ದಾರೆ.


ಬ್ಯಾಂಕ್‌ಗೆ ಬೀಗ ಜಡಿದು ರೈತರ ಪ್ರತಿಭಟನೆ

ಚಾಮರಾಜನಗರ, ಜು.15–ನಗರದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್ ಸಾಲ ನೀಡಲು ಸತಾಯಿಸುತ್ತಿದೆ ಎಂದು ಆರೋಪಿಸಿ ರೈತರು ಬ್ಯಾಂಕ್‌ಗೆ ಬೀಗ ಜಡಿದು ಪ್ರತಿಭಟನೆ ನಡೆಸಿದರು.

ನಗರದ ನಂಜನಗೂಡು ಸರ್ಕಲ್‌ನ ಎಂಸಿಡಿಸಿಸಿ ಬ್ಯಾಂಕ್‌ಗೆ ಅಧ್ಯಕ್ಷ ಕೆರೆಹಳ್ಳಿ ನವೀನ್ ನೇತೃತ್ವದಲ್ಲಿ ರೈತರು ಸಾಲದ ಮೊತ್ತವನ್ನು ರೈತರ ಖಾತೆಗೆ ಜಮಾ ಮಾಡುವಂತೆ ದಿಢೀರ್ ಬಾಗಿಲು ಬಂದ್ ಮಾಡಿ ಧರಣಿ ನಡೆಸಿರು. ಬೆಳಗ್ಗೆಯಿಂದ ಸಂಘದ ಅಧ್ಯಕ್ಷ ನವೀನ್, ಸಿಇಓ ರಾಜೇಂದ್ರ ಹಾಗೂ ಸಾಲ ಪಡೆದುಕೊಳ್ಳಲು ಬಂದಿದ್ದ ರೈತರು ಸಾಯಂಕಾಲದವರೆಗೆ ಕಾದು ಬಸವಳಿದರು. ಬ್ಯಾಂಕಿನ ಮ್ಯಾನೇಜರ್ ಹಾಗೂ ಮೈಸೂರು ವಿಭಾಗದ ಪ್ರಧಾನ ವ್ಯವಸ್ಥಾಪಕ ವಿನೋದ್ ಕುಮಾರ್ ಅವರು ಸತಾಯಿಸಿದರು. ಸಾಯಂಕಾಲವಾದರು ಸಾಲದ ಮೊತ್ತವನ್ನು ರೈತರ ಖಾತೆಗೆ ಜಮಾ ಮಾಡದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಕೂಡಿ ಹಾಕಿ ಬೀಗ ಜಡಿದರು.

ಕಾಂಪೌಂಡ್ ಹಾರಿದ ಪ್ರಧಾನ ವ್ಯವಸ್ಥಾಪಕ: ರೈತರು ಬ್ಯಾಂಕ್‌ಗೆ ಬೀಗ ಹಾಕಲು ಬಾಗಿಲು ಬಂದ್ ಮಾಡುತ್ತಿದ್ದಂತೆ ಪ್ರಧಾನ ವ್ಯವಸ್ಥಾಪಕ ವಿನೋದ್ ಕುಮಾರ್ ಕಾಂಪೌಂಡ್ ಹಾರಿ ಪರಾರಿಯಾದರು. ನಂತರ ಪೊಲೀಸರೊಂದಿಗೆ ಸ್ಥಳಕ್ಕೆ ಆಗಮಿಸಿ, ಬ್ಯಾಂಕಿನ ಬೀಗ ತೆಗೆಸಲು ಹರಸಾಹಸ ಮಾಡಿದರು. ಆದರೆ, ಇದ್ಯಾವುದಕ್ಕೂ ಲೆಕ್ಕಿಸದ ರೈತರು ಬಾಗಿಲು ಬಂದ್ ಮಾಡಿದರು.

ಬಳಿಕ ಸ್ಥಳಾಕ್ಕಾಗಮಿಸಿದ ಡಿವೈಎಸ್ಪಿ ಲಕ್ಷ್ಮಯ್ಯ, ರೈತರು ಹಾಗೂ ಬ್ಯಾಂಕ್ ಅಧಿಕಾರಿಗಳೊಂದಿಗೆ ಚರ್ಚಿಸಿ, 10 ದಿನ ಕಾಲವಕಾಶ ನೀಡಿ, ರೈತರ ಖಾತೆಗೆ ಹಣ ಜಮಾ ಮಾಡುವಂತೆ ಸೂಚನೆ ನೀಡಿರು. ಬಳಿಕ ರೈತರು ಪ್ರತಿಭಟನೆ ಕೈ ಬಿಟ್ಟರು. ಪ್ರತಿಭಟನೆಯಲ್ಲಿ ಸಂಘದ ನಿರ್ದೇಶಕರಾದ ರಾಜಕುಮಾರ್, ಕೆಂಪರಾಜು, ರೇವಣ್ಣ, ರೈತರಾದ ಜಯಮ್ಮ, ಮಹೇಶ್, ಚಂದ್ರಯ್ಯ, ಮುತ್ತಿಗೆ ದೊರೆ, ಮಧು, ಬಸುಮರಿ ಇದ್ದರು.



ಚಾಮರಾಜನಗರ ಎಂಡಿಸಿಸಿ ಬ್ಯಾಂಕ್‌ಗೆ ರೈತರು ಬೀಗ ಜಡಿದು ಪ್ರತಿಭಟನೆ ನಡೆಸಿದರು.

ನಂಜಮ್ಮಣ್ಣಮ್ಮ ನಿಧನ

ಚಾಮರಾಜನಗರ, ಜು.15–ತಾಲೂಕಿನ ಅರಕಲವಾಡಿ ಗ್ರಾಮದ ಲೇಟ್ ಶಾಂತಪ್ಪ (ಮಾರುತಿ ಬಸ್ ಕಾಸಪ್ಪ) ಪತ್ನಿ ನಂಜಮ್ಮಣಮ್ಮ (ಚಿನ್ನಮ್ಮ 62) ಭಾನುವಾರ ರಾತ್ರಿ ನಿಧನರಾದರು. ಮೃತರು ಪುತ್ರಿ, ಪುತ್ರ ಅಗಲಿದ್ದಾರೆ. ಸೋಮವಾರ ಅರಕಲವಾಡಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.



ಇಂದು ದ್ವಿತೀಯ ಪಿಯುಸಿ ಪರೀಕ್ಷೆ–03 ಫಲಿತಾಂಶ

ಬೆಂಗಳೂರು:ಕರ್ನಾಟಕ ಶಾಲಾ ಪರೀಕ್ಷೆ & ಮೌಲ್ಯನಿರ್ಣಯ ಮಂಡಳಿ ನಡೆಸಿದ್ದ 2024ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ–3 ಫಲಿತಾಂಶವನ್ನು ನಾಳೆ ಪ್ರಕಟಿಸಲಿದೆ. ಜುಲೈ 16ರ ಮಧ್ಯಾಹ್ನ 3 ಗಂಟೆಗೆ ಅಧಿಕೃತ http//karresults.nic.in ವೆಬ್ ಸೈಟ್‌ನಲ್ಲಿ ಫಲಿತಾಂಶ ಲಭ್ಯವಾಗಲಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ & ಮೌಲ್ಯನಿರ್ಣಯ ಮಂಡಳಿಯ ಅಧ್ಯಕ್ಷೆ ಎನ್.ಮಂಜುಶ್ರೀ ತಿಳಿಸಿದ್ದಾರೆ.

ಜೂ.24ರಿಂದ ಜು.5ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ–03 ನಡೆಸಲಾಗಿತ್ತು. ಕರ್ನಾಟಕದ ನಾನಾ ಜಿಲ್ಲಾ ಕೇಂದ್ರಗಳಲ್ಲಿ ಪರೀಕ್ಷೆ ನಡೆದಿದ್ದು, ಬಳಿಕ ಮೌಲ್ಯಮಾಪನ ಮಾಡಲಾಗಿತ್ತು. ನಾಳೆ ಫಲಿತಾಂಶ ಪ್ರಕಟಿಸಲಾಗುತ್ತಿದೆ. ಮೊದಲು, ಅಧಿಕೃತ ಕೆಎಸ್‌ಇಎಬಿ (KSEAB) ವೆಬ್ ಸೈಟ್‌ಗೆ ಭೇಟಿ ನೀಡಿ, ಇತ್ತೀಚಿನ ಸುದ್ದಿ ವಿಭಾಗದಲ್ಲಿ 2ನೇ ಪಿಯುಸಿ ಪರೀಕ್ಷೆ–3 ಫಲಿತಾಂಶ ಲಿಂಕ್ ಮೇಲೆ ಕ್ಲಿಕ್ ಮಾಡಬೇಕು, ನೋಂದಣಿ ಸಂಖ್ಯೆ ಅಥವಾ ಜನ್ಮದಿನಾಂಕದ ಮೂಲಕ ಪೋರ್ಟಲ್‌ಗೆ ಲಾಗ್ ಇನ್ ಮಾಡಿ, ಒಮ್ಮೆ ವಿವರಗಳನ್ನು ಸಲ್ಲಿಸಿದ ಬಳಿಕ ಕ್ಯಾಪ್ಚಾವನ್ನು ನಮೂದಿಸಿ ಸಬ್‌ಮಿಟ್ ಬಟನ್ ಅನ್ನು ಕ್ಲಿಕ್ ಮಾಡಿದರೆ 2ನೇ ಪಿಯುಸಿ ಪೂರಕ ಪರೀಕ್ಷೆ ಫಲಿತಾಂಶಗಳು ಪರದೆಯ ಮೇಲೆ ಗೋಚರಿಸುತ್ತದೆ.

ಒಂದನೇ ಪುಟದಿಂದ

ವಾಕ್ಸಮರ

ಡೆತ್ ನೋಟ್‌ನಲ್ಲಿ ಯಾರು ಸುಳ್ಳು ಬರೆಯಲ್ಲ, ಸಾಯುವಾಗ ಯಾರೂ ಸುಳ್ಳು ಹೇಳಲ್ಲ. ಡೆತ್ ನೋಟ್ ನಲ್ಲಿ ಅಕ್ರಮದ ಎಲ್ಲ ವಿವರ ಇದೆ. ಹೇಗೆ ಡೀಲ್ ನಡೆದಿದೆ ಅಂತ ಅವರು ವಿವರಿಸಿರುವುದಾಗಿ ಅಶೋಕ್ ಹೇಳಿದರು.

ಇವರಿಗೇ ಶಾಪ ತಟ್ಟದೇ ಇರಲ್ಲ: ಚಂದ್ರಶೇಖರನ್ ಅವರದ್ದು ಆತ್ಮಹತ್ಯೆ ಅಲ್ಲ, ಕೊಲೆ. ಸರ್ಕಾರಿ ಪ್ರಾಯೋಜಕತ್ವದ ಕೊಲೆ ಇದು. ಒಬ್ಬ ದಲಿತ ಅಧಿಕಾರಿ ಒತ್ತಡಕ್ಕೆ ಒಳಗಾಗಿ ಅವಮಾನ ತಡೆಯದೇ ಆತ್ಮಹತ್ಯೆ ಮಾಡ್ಕೊಂಡ್ರು. ಈ ಜೀವಕ್ಕೆ ಬೆಲೆ ಇಲ್ವಾ, ಸರ್ಕಾರಕ್ಕೆ ಕಣ್ಣಿಲ್ವಾ, ಚಂದ್ರಶೇಖರನ್ ಸತ್ತು 30 ದಿನ ಆಯ್ತಲ್ಲ, ಸರ್ಕಾರ ಏನ್ ಮಾಡ್ತಿದೆ. ಚಂದ್ರಶೇಖರನ್ ಸಾವನ್ನಪ್ಪದೇ ಇದ್ದಿದ್ದರೆ 187 ಕೋಟಿ ಅಕ್ರಮ ಯಾರಿಗೂ ಗೊತ್ತಾಗ್ತಿರಲಿಲ್ಲ. ಅಮಾಯಕ ಚಂದ್ರಶೇಖರನ್ ಹಗರಣವನ್ನ ಬಯಲಿಗೆಳೆದಿದ್ದಾರೆ. ಸಾಕ್ಷಿ ಸಿಕ್ಕಿದೆ, ದುಡ್ಡು ಸಿಕ್ಕಿದೆ, ಬೇನಾಮಿ ಖಾತೆಗಳ ವಿವರ ಗೊತ್ತಾಗಿದೆ, ಕೆಲವರ ಬಂಧನ ಆಗಿದೆ ಇವರಿಗೆ ಶಾಪ ತಟ್ಟದೇ ಇರಲ್ಲ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಚಿಕಿತ್ಸೆಗೆ ಸರ್ಕಾರದಿಂದಲೇ ದರ ನಿಗದಿ

ಸರ್ಕಾರಿ ಆಸ್ಪತ್ರೆಯಲ್ಲಿ ಬಿಪಿಎಲ್, ಎಪಿಎಲ್ ಕಾರ್ಡ್‌ದಾರರಿಗೆ ಉಚಿತ ಚಿಕಿತ್ಸೆ, ಪರೀಕ್ಷೆ ಇದ್ದು, ಖಾಸಗಿಯಲ್ಲಿ ದರ ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

ಹೆಣ್ಣು ಭ್ರೂಣ ಹತ್ಯೆ ಆರೋಪಿಗಳ ವಿರುದ್ಧ ಪಿಸಿಪಿಎನ್‌ಡಿಟಿ ಕೇಸ್: ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಪಿಸಿಪಿಎನ್‌ಡಿಟಿ (PCPNDT) ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗುತ್ತಿದೆ. ಉತ್ತಮ ವಕೀಲರ ನಿಯೋಜನೆ ಮೂಲಕ ಆರೋಪಿಗಳಿಗೆ ಜಾಮೀನು ಸಿಗದಂತೆ ನೋಡಿಕೊಳ್ಳಲು ಸೂಚಿಸಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಯುಬಿ ವೆಂಕಟೇಶ್ ಮತ್ತು ಬಿಜೆಪಿ ಸದಸ್ಯ ಸಿಟಿ ರವಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹೆಣ್ಣು ಭ್ರೂಣ ಹತ್ಯೆ ನಿಯಂತ್ರಣಕ್ಕೆ ಎಲ್ಲ ಕ್ರಮ ವಹಿಸಿದ್ದೇವೆ. ಇದನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಎಲ್ಲ ರೀತಿಯ ಅಗತ್ಯ ಮಾಹಿತಿ ಸಂಗ್ರಹಿಸಿ ಆರೋಪಿಗಳನ್ನು ಹಿಡಿಯಬೇಕಿದ್ದು, ಆ ಕೆಲಸ ಮಾಡುತ್ತಿದ್ದೇವೆ ಎಂದರು.

ಇದಕ್ಕೆ ತೃಪ್ತರಾಗದ ಸದಸ್ಯ ಯುಬಿ ವೆಂಕಟೇಶ್, ಸರ್ಕಾರದ ಉತ್ತರ ಸರಿಯಾಗಿಯೇ ಇದೆ ಆದರೆ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಶಿಕ್ಷೆ ಹೆಚ್ಚು ಮಾಡಿ ಭಯ ಹುಟ್ಟಿಸಿ ಮಟ್ಟ ಹಾಕಿ ಎಂದು ಸಲಹೆ ನೀಡಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ದಿನೇಶ್ ಗುಂಡೂರಾವ್, ನಾವು ಕೇಸ್ ಹಾಕುತ್ತೇವೆ, ಕೋರ್ಟ್‌ನಲ್ಲಿ ಅವರಿಗೆ ಜಾಮೀನು ಸಿಗಲಿದೆ, ಜಾಮೀನು ಸಿಗಲು ಕಷ್ಟವಾಗುವ ಕಲಂ ಅಡಿಯಲ್ಲಿ ಕೇಸ್ ಹಾಕಬೇಕಿದೆ. ಪಿಸಿಪಿಎನ್‌ಡಿಟಿ (PCPNDT) ಕಾಯ್ದೆಯಡಿ ಕ್ರಮ ವಹಿಸಲಿದ್ದೇವೆ. ಆರೋಪಿಗಳನ್ನು ಹಿಡಿಯುವವರೆಗೂ ನಾವು ಗಟ್ಟಿಯಾಗಿರುತ್ತೇವೆ. ಆದರೆ ನಂತರ ಅವರು ಜಾಮೀನು ತರುತ್ತಾರೆ, ಇಲ್ಲಿ ನಾವು ಗಟ್ಟಿಯಾಗಬೇಕಿದೆ. ಆ ನಿಟ್ಟಿನಲ್ಲಿ ಕ್ರಮ ವಹಿಸಲಾಗುತ್ತದೆ. ಮೊದಲು ಪೊಲೀಸರು ಕೇಸ್ ಬುಕ್ ಮಾಡುತ್ತಿದ್ದರು ಆದರೆ ಈಗ ನಾವು ಆರೋಗ್ಯ ಇಲಾಖೆ ಸಕ್ಷಮ ಪ್ರಾಧಿಕಾರವಾಗಿದ್ದು ಅದರಿಂದ ದೂರು ಕೊಡಿಸಲಿದ್ದೇವೆ ಎಂದು ತಿಳಿಸಿದರು. ಡಿಹೆಚ್‌ಓ ಮೂಲಕ ಕೇಸ್ ಬುಕ್ ಮಾಡುತ್ತೇವೆ. ಈಗಾಗಲೇ 23 ಆಸ್ಪತ್ರೆ ಮೇಲೆ ಪ್ರಕರಣ ದಾಖಲಿಸಿದ್ದೇವೆ. ಮೈಸೂರಿನ ಮಾತಾ ಆಸ್ಪತ್ರೆ ಪರವಾನಗಿ ರದ್ದು ಮಾಡಿದ್ದೇವೆ. ಕೋರ್ಟ್ ಮುಖಾಂತರ ಪ್ರಕರಣಗಳು ತೀರ್ಮಾನವಾಗಲಿದೆ. ಫಾಲೋಅಪ್‌ಗೆ ಅಧಿಕಾರಿಗಳಿಗೆ ಸೂಚಿಸಿದ್ದೇವೆ. ಒಳ್ಳೆಯ ವಕೀಲರ ನೇಮಕಕ್ಕೂ ಸೂಚಿಸಲಾಗಿದೆ. ಭ್ರೂಣ ಹತ್ಯೆ ಕೊಲೆಗೆ ಸಮಾನ ಎನ್ನುವ ಕುರಿತು ಕಾನೂನು ತರಲು ಹಿಂದೆ ಚಿಂತನೆ ಇತ್ತು, ಈಗ ಎಲ್ಲವನ್ನೂ ಪರಿಶೀಲಿಸಲಾಗುತ್ತದೆ ಎಂದರು.

ಪಶು ಔಷಧ ಮನುಷ್ಯರಿಗೆ ನೀಡಲ್ಲ: ಪಶುಗಳಿಗೆ ನೀಡುವ ಔಷಧವನ್ನು ಮನುಷ್ಯರಿಗೆ ನೀಡಲ್ಲ. ಔಷಧಗಳ ಲೇಬಲ್ ದೋಷದಿಂದಾಗಿ ಆ ಔಷಧ ವಾಪಸ್ ಕಳಿಸಲಾಗಿದೆಯೇ ಹೊರತು ಔಷಧಿಯಲ್ಲಿ ಯಾವುದೇ ಲೋಪವಿರಲಿಲ್ಲ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದರು.

ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯ ಛಲವಾದಿ ನಾರಾಯಣಸ್ವಾಮಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪಶುಗಳಿಗೆ ಕೊಡುವ ಔಷಧ ನಾವು ಜನರಿಗೆ ಕೊಟ್ಟಿಲ್ಲ, ಸರಬರಾಜುದಾರರು ಲೋಗೋಗ್ರಾಂ ನಲ್ಲಿ ಎ.ಹೆಚ್.ಡಿ.ಹೆಚ್ ಇಲಾಖೆ ಎಂದು ಬಂದಿದೆ. ಇದನ್ನು ಕೂಡಲೇ ಏಳು ಪ್ರಯೋಗಾಲಯಕ್ಕೆ ಕಳಿಸಿ ಪರಿಶೀಲಿಸ ಲಾಗಿದ್ದು, ಔಷಧದಲ್ಲಿ ಸಮಸ್ಯೆ ಕಂಡು ಬಂದಿಲ್ಲ. ಲೇಬಲ್ ಸಮಸ್ಯೆ ಅಷ್ಟೆ, ಆದರೂ ದಂಡ ಹಾಕಿ ಮರು ಪೂರೈಕೆಗೆ ಸೂಚಿಸ ಲಾಗಿದೆ ಎಂದರು.

FIR ರದ್ದುಗೊಳಿಸಲು 'ಸುಪ್ರೀಂ' ನಕಾರ

ನ್ಯಾಯಾಲಯದ ಮೊರೆ ಹೋಗಿದ್ದರು.

2013ರಿಂದ 2017ರ ಅವಧಿಯಲ್ಲಿ ಶಿವಕುಮಾರ್ ತಮ್ಮ ಆದಾಯ ಮೂಲಕ್ಕಿಂತ ಹೆಚ್ಚು ಸಂಪತ್ತು ಗಳಿಸಿದ್ದಾರೆಂದು ಸಿಬಿಐ ಆರೋಪಿಸಿದ್ದು, ಆ ಕುರಿತಂತೆ ಎಫ್‌ಐಆರ್ ದಾಖಲಿಸಿತ್ತು. ಆ ಪ್ರಕರಣವನ್ನು ಕೈಬಿಡುವಂತೆ ಸಿಬಿಐಗೆ ನಿರ್ದೇಶನ ನೀಡಬೇಕೆಂದು ಕೋರಿ ಶಿವಕುಮಾರ್ ಮನವಿ ಸಲ್ಲಿಸಿದ್ದರು.

ಶಿವಕುಮಾರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ, ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 17ಎ ಅಡಿಯಲ್ಲಿ ಅನುಮತಿ ಪಡೆಯದೆ ತನಿಖೆ ಆರಂಭಿಸಲಾಗಿದೆ. 2018ರ ತಿದ್ದುಪಡಿಯ ದಿನಾಂಕದ ಮೊದಲು ಸೆಕ್ಷನ್ 17ಎ ಸೇರಿಸಲಾದ ಅಪರಾಧಗಳಿಗೆ ಸೆಕ್ಷನ್ 17ಎ ಅನ್ವಯಿಸುತ್ತದೆಯೇ ಎಂಬ ವಿಷಯವನ್ನು, ಅವರು, ಚಂದ್ರಬಾಬು ನಾಯ್ಡು ಪ್ರಕರಣವನ್ನು ಪೀಠದ ಮುಂದಿಟ್ಟರು. ವಾದ–ಪ್ರತಿವಾದ ಆಲಿಸಿದ ನ್ಯಾಯಮೂರ್ತಿಗಳು, ವಿಭಜಿತ ತೀರ್ಪಿನ ಆಧಾರದ ಮೇಲೆ ಪ್ರಕ್ರಿಯೆಗಳನ್ನು ರದ್ದುಗೊಳಿಸಲಾಗುವುದಿಲ್ಲ ಎಂದರು.

ಮುಂದುವರೆದು ಮುಕುಲ್ ರೋಹಟಗಿ ಅವರು, ಅರ್ಜಿಯ ಕುರಿತು ನೋಟಿಸ್ ಜಾರಿ ಮಾಡಬೇಕೆಂಬ ಮನವಿಗೆ ಪೀಠ ನಿರಾಕರಿಸಿತು. ಈ ಹಿಂದಿನ ಸಿದ್ದರಾಮಯ್ಯ ಅವರ ರಾಜ್ಯ ಸರ್ಕಾರದಲ್ಲಿ ಶಿವಕುಮಾರ್ ಇಂಧನ ಸಚಿವರಾಗಿದ್ದ ಸಂದರ್ಭದಲ್ಲಿ 74 ಕೋಟಿ ರೂ.ಗಳಷ್ಟು ದಾಖಲೆರಹಿತ ಆದಾಯ ಗಳಿಸಿದ್ದಾರೆ ಎಂಬುದು ಪ್ರಮುಖ ಆರೋಪವಾಗಿತ್ತು. ಅದರಂತೆ, 74.93 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಗಳಿಸಿದ್ದಾರೆಂದು ಸಿಬಿಐ ಆರೋಪಿಸಿತ್ತು. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ತನಿಖೆ ನಡೆಸಲು ಅನುಮತಿ ಕೋರಿ 2019ರಲ್ಲಿ ರಾಜ್ಯ ಸರ್ಕಾರಕ್ಕೆ ಸಿಬಿಐ ಪ್ರಸ್ತಾಪ ಸಲ್ಲಿಸಿತ್ತು.

ಪ್ರಕರಣವನ್ನು ಸಿಬಿಐಗೆ ವಹಿಸಿದ ನಿರ್ಧಾರವನ್ನು ಹಿಂತೆಗೆದುಕೊಂಡಿರುವುದನ್ನು ಪ್ರಶ್ನಿಸಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ಇತರರು ಹೈಕೋರ್ಟ್ ಮೊರೆ ಹೋಗಿದ್ದರು.

ಈ ಹಂತದಲ್ಲಿ ವಾದ ಮಂಡಿಸಿದ ಸಿಬಿಐ, ಒಮ್ಮೆ ತನಿಖೆಗೊಳಪಡಿಸಲಾದ ಪ್ರಕರಣವನ್ನು ಹಿಂಪಡೆಯಲಾಗದು ಎಂದು ಹೈಕೋರ್ಟ್‌ನಲ್ಲಿ ವಾದ ಮಂಡಿಸಿತ್ತು. ಇದೇ ವೇಳೆ ಸುಪ್ರೀಂಕೋರ್ಟ್‌ಗೂ ಸಿಬಿಐ ಮೇಲ್ಮನವಿ ಸಲ್ಲಿಸಿತ್ತು.

ಮುಂದುವರೆದ ಮಳೆ ಅಬ್ಬರ

ಹರಿವಿನ ಪ್ರಮಾಣ 17,180 ಕ್ಯೂಸೆಕ್‌ಗೆ ಏರಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ನದಿ ಪಾತ್ರಕ್ಕೆ ಒಟ್ಟು 20 ಸಾವಿರ ಕ್ಯೂಸೆಕ್ ನೀರನ್ನು ಹರಿಸಲಾಯಿತು. ಹಾರಂಗಿ ಜಲಾಶಯ ಜುಲೈ ಮೊದಲ ವಾರದಲ್ಲೇ ಬಹುತೇಕ ಭರ್ತಿಯಾಗಿ, ಉತ್ತಮ ಮಳೆಯಾಗುವ ಮುನ್ಸೂಚನೆ ಇದ್ದ ಕಾರಣ 10 ಅಡಿ ಅಂತರ ಕಾಯ್ದುಕೊಂಡು ನದಿ ಪಾತ್ರಕ್ಕೆ 1 ಸಾವಿರ ಕ್ಯುಸೆಕ್ ನೀರು ಹರಿಸಲಾಗಿತ್ತು. ಬಳಿಕ ಮಳೆ ಕಡಿಮೆಯಾದ ಹಿನ್ನೆಲೆಯಲ್ಲಿ ಕೇವಲ 200 ಕ್ಯೂಸೆಕ್ ನೀರನ್ನು ಬಿಡಲಾಗುತ್ತಿತ್ತು. ಇದೀಗ ಮತ್ತೆ ಮಳೆ ಬಿರುಸು ಪಡೆದ ಕಾರಣ 2ನೇ ವಾರ ಜಲಾಶಯ ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗಿದೆ. 2859 ಅಡಿ ನೀರಿನ ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ ಇದೀಗ 2854.87 ಅಡಿ ನೀರು ಸಂಗ್ರಹವಾಗಿದೆ. ಜಲಾಶಯದ ಸುರಕ್ಷತೆ ಮತ್ತು ನದಿಯಲ್ಲಿ ಪ್ರವಾಹ ಏರ್ಪಡುವ ಸಾಧ್ಯತೆಗಳನ್ನು ಗುರುತಿಸಿ ಜಲಾಶಯದ ಒಳಹರಿವಿನಲ್ಲಿ 5 ಅಡಿ ಅಂತರ ಕಾಯ್ದುಕೊಂಡು ಹೆಚ್ಚುವರಿ ನೀರನ್ನು ನದಿಗೆ ಹರಿಸಲಾಗುತ್ತಿದೆ.

ಸೇತುವೆ ಸಂಪರ್ಕ ಬಂದ್: ಹಾರಂಗಿ ಜಲಾಶಯದಿಂದ ಹೆಚ್ಚುವರಿ ನೀರನ್ನು ನದಿಗೆ ಹರಿಸಿದ್ದರಿಂದ ಜಲಾಶಯದ ಮುಂಭಾಗದ ಸೇತುವೆ ಮುಳುಗಡೆಯಾಗಿದ್ದು, ಹುದುಗೂರು–ಹಾರಂಗಿ ನಡುವೆ ವಾಹನ ಮತ್ತು ಜನ ಸಂಚಾರ ಬಂದ್ ಮಾಡಲಾಗಿದೆ. ಜಲಾಶಯದ ನೀರು ಸೇತುವೆಯ ಮೇಲೆ ಹರಿಯುತ್ತಿದ್ದು, ಸೇತುವೆಯ ಎರಡೂ ಬದಿಗಳಲ್ಲಿ ಬ್ಯಾರಿಕೇಡ್ ಅಳವಡಿಸಿದ ಪೊಲೀಸರು ಎಲ್ಲಾ ವಾಹನ ಮತ್ತು ಸಾರ್ವಜನಿಕರ ಸಂಚಾರವನ್ನು ಬಂದ್ ಮಾಡಿದ್ದಾರೆ. ಸ್ಥಳಕ್ಕೆ ಕುಶಾಲನಗರ ತಹಸೀಲ್ದಾರ್ ಕಿರಣ್ ಗೌರಯ್ಯ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಇತ್ತ ಕಾವೇರಿ ನದಿಯಲ್ಲೂ ಗಣನೀಯ ಪ್ರಮಾಣದಲ್ಲಿ ನೀರಿನ ಮಟ್ಟ ಏರಿಕೆಯಾಗಿದ್ದು, ಹಾರಂಗಿಯಿಂದಲೂ ನೀರನ್ನು ನದಿಗೆ ಬಿಟ್ಟಿರುವ ಪರಿಣಾಮ ಕೊಪ್ಪ ಸೇತುವೆ ಬಳಿ ಕಾವೇರಿ ನದಿ ನೀರಿನ ಮಟ್ಟ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದೆ.

ಕೆಆರ್ ಆಸ್ಪತ್ರೆಯಲ್ಲಿ ಮೈಸೂರಿನ ಪ್ರಥಮ ಸ್ಕಿನ್ ಬ್ಯಾಂಕ್ ಸೇವೆ

ರೋಟರಿ ಬೆಂಗಳೂರು ಸಂಸ್ಥೆಯಿಂದ 50 ಲಕ್ಷ ರೂ. ವೆಚ್ಚದ ಯೋಜನೆಗೆ ಪ್ರಾಯೋಜನೆ; ಸೆಪ್ಟೆಂಬರ್ 28ಕ್ಕೆ ಉದ್ಘಾಟನೆ

ಮೈಸೂರು, ಜು. 15(ಆರ್‌ಕೆ)– ಕೆಆರ್ ಆಸ್ಪತ್ರೆಯಲ್ಲಿ ಮೈಸೂರಿನ ಪ್ರಥಮ ಸ್ಕಿನ್ ಬ್ಯಾಂಕ್ ಸೇವೆ ಆರಂಭಿಸಲು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿಆರ್‌ಐ)ಯು ಮುಂದಾಗಿದೆ.

ರೋಟರಿ ಬೆಂಗಳೂರು ಸಂಸ್ಥೆಯು 45ರಿಂದ 50 ಲಕ್ಷ ರೂ. ವೆಚ್ಚದಲ್ಲಿ ಸ್ಕಿನ್ ಬ್ಯಾಂಕ್ ಸೌಲಭ್ಯವನ್ನು ಒದಗಿಸುತ್ತಿದ್ದು, ಕೆಆರ್ ಆಸ್ಪತ್ರೆ ಆವರಣದ ನವೀಕೃತ ಸುಟ್ಟ ಗಾಯಗಳ ಚಿಕಿತ್ಸಾ ಘಟಕದ ಕಟ್ಟಡದಲ್ಲಿ ಸ್ಕಿನ್ ಬ್ಯಾಂಕ್ ಸ್ಥಾಪಿಸಲು ಸರ್ವ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಪ್ಲಾಸ್ಟಿಕ್ ಸರ್ಜರಿ ವಿಭಾಗದ ಡಾ.ಮೋಹನ್ ತಿಳಿಸಿದ್ದಾರೆ.

ರೋಟರಿ ಬೆಂಗಳೂರು ಸಂಸ್ಥೆಯು 45ರಿಂದ 50 ಲಕ್ಷ ರೂ. ವೆಚ್ಚದಲ್ಲಿ ಕೆಆರ್ ಆಸ್ಪತ್ರೆಗೆ ಸ್ಕಿನ್ ಬ್ಯಾಂಕ್ ಸೌಲಭ್ಯ ಒದಗಿಸಲು ಮುಂದಾಗಿದ್ದು, ಸೆಪ್ಟೆಂಬರ್ 28ರಂದು ನಡೆಯಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶತಮಾನೋತ್ಸವ ಸಮಾರಂಭದ ಸಂದರ್ಭ ಸೇವೆಯನ್ನು ಉದ್ಘಾಟಿಸಲು ಚಿಂತನೆ ನಡೆಸಿದ್ದೇವೆ ಎಂದು ತಿಳಿಸಿದರು.



ಮೈಸೂರು ಮೆಡಿಕಲ್ ಕಾಲೇಜಿನ ಹೊಸ ಗ್ರಂಥಾಲಯ ಕಟ್ಟಡದ ಸಭಾಂಗಣದಲ್ಲಿ ಪ್ಲಾಸ್ಟಿಕ್, ರೀಕನ್‌ಸ್ಟ್ರಕ್ಟಿವ್ ಅಂಡ್ ಬರ್ನ್ಸ್ ಸರ್ಜರಿ ವಿಭಾಗದ ವತಿಯಿಂದ ವರ್ಲ್ಡ್ ಪ್ಲಾಸ್ಟಿಕ್ ಸರ್ಜರಿ ದಿನದ ಅಂಗವಾಗಿ ಆಯೋಜಿಸಿದ್ದ ಕಂಟಿನ್ಯೂಯಿಂಗ್ ಮೆಡಿಕಲ್ ಎಜುಕೇಷನ್ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಆರಂಭಿಸಿದ ಮೈಸೂರು ಮೆಡಿಕಲ್ ಕಾಲೇಜು ಮೈಸೂರು ರಾಜರ ಆಳ್ವಿಕೆಯ ಮೊದಲ ವೈದ್ಯಕೀಯ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ಈಗ ಶತಮಾನೋತ್ಸವವನ್ನೂ ಆಚರಿಸಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಸ್ಕಿನ್ ಬ್ಯಾಂಕ್ ಸೇವೆ ಆರಂಭಿಸುತ್ತಿರುವುದು ಸಂಸ್ಥೆಯ ಸಾಧನೆಯಾಗಿದೆ.

ಕಾಲೇಜಿನ ಹೊಸ ಗ್ರಂಥಾಲಯ ಕಟ್ಟಡದ ಸಭಾಂಗಣದಲ್ಲಿ ಪ್ಲಾಸ್ಟಿಕ್, ರೀಕನ್‌ಸ್ಟ್ರಕ್ಟಿವ್ ಅಂಡ್ ಬರ್ನ್ಸ್ ಸರ್ಜರಿ ವಿಭಾಗದ ವತಿಯಿಂದ ವರ್ಲ್ಡ್ ಪ್ಲಾಸ್ಟಿಕ್ ಸರ್ಜರಿ ದಿನದ ಅಂಗವಾಗಿ ಇಂದು ಆಯೋಜಿಸಿದ್ದ ಕಂಟಿನ್ಯೂಯಿಂಗ್ ಮೆಡಿಕಲ್ ಎಜುಕೇಷನ್ (ಸಿಎಂಇ) ಕಾರ್ಯಕ್ರಮದಲ್ಲಿ ಸ್ಕಿನ್ ಬ್ಯಾಂಕ್ ಸೇವೆ ಆರಂಭಿಸುವ ಬಗ್ಗೆ ಪ್ರಸ್ತಾಪಿಸಲಾಯಿತು.

ದಾನ ಮಾಡಿದ ಮಾನವ ಚರ್ಮವನ್ನು ಸ್ವೀಕರಿಸಿ ಪ್ರೊಸೆಸ್ ಮತ್ತು ಸಂಗ್ರಹಣೆ ಮಾಡುವುದಕ್ಕೆ ಸ್ಕಿನ್ ಬ್ಯಾಂಕ್ ಅಗತ್ಯವಾಗಿದ್ದು, ಸುಟ್ಟು ಗಾಯಾಳುಗಳಾಗುವ ರೋಗಿಗಳಿಗೆ ಪ್ಲಾಸ್ಟಿಕ್ ಸರ್ಜರಿ ಮೂಲಕ ಚಿಕಿತ್ಸೆ ನೀಡಲು ಅನುಕೂಲವಾಗುತ್ತದೆ ಎಂದು ಹೇಳಲಾಗಿದೆ.

ಕೆಆರ್ ಆಸ್ಪತ್ರೆಯಲ್ಲಿರುವ ಸುಟ್ಟು ಗಾಯಗಳ ಚಿಕಿತ್ಸಾ ವಿಭಾಗದಲ್ಲಿ ದಾಖಲಾದ ರೋಗಿಗಳಿಗೆ ಚಿಕಿತ್ಸಾ ಸೌಲಭ್ಯಗಳಿವೆಯಾದರೂ, ಸ್ಕಿನ್ ಬ್ಯಾಂಕ್ ಅಗತ್ಯವಿತ್ತು. ಆಸ್ಪತ್ರೆಯಿಂದ ಈ ಸೌಲಭ್ಯಕ್ಕಾಗಿ ಸರ್ಕಾರಕ್ಕೆ ಕಳೆದ ಹಲವು ವರ್ಷಗಳ ಹಿಂದೆಯೇ ಪ್ರಸ್ತಾವನೆ ಸಲ್ಲಿಸಲಾಗಿತ್ತಾದರೂ, ಅನುಷ್ಠಾನಗೊಂಡಿರಲಿಲ್ಲ. ಇದೀಗ ರೋಟರಿ ಬೆಂಗಳೂರು ಸಂಸ್ಥೆಯು ಸ್ಕಿನ್ ಬ್ಯಾಂಕ್ ಅನ್ನು ರೋಗಿಗಳ ಅನುಕೂಲಕ್ಕಾಗಿ ನೀಡಿದೆ.

ಇಂದು ನಡೆದ ಸಿಎಂಇ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಡ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸಾ ಸೌಲಭ್ಯ ಒದಗಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅನುದಾನ ಬಳಸುವಂತೆ ಸಲಹೆ ನೀಡಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ, ಸರ್ಜರಿ ವಿಭಾಗದ ಮುಖ್ಯಸ್ಥ ಡಾ.ಮಧು, ಸರ್ಜಿಕಲ್ ಸೊಸೈಟಿ ಅಧ್ಯಕ್ಷ ಡಾ.ದಿನೇಶ್, ಪ್ಲಾಸ್ಟಿಕ್ ಸರ್ಜರಿ ವಿಭಾಗದ ಡಾ. ಮೋಹನ್, ಕೆಆರ್, ಚೆಲುವಾಂಬ ಮತ್ತು ಪಿಕೆಟಿಬಿ ಆಸ್ಪತ್ರೆ ಮೆಡಿಕಲ್ ಸೂಪರಿಂಟೆಂಡೆಂಟ್‌ಗಳು, ಸ್ಥಾನಿಕ ವೈದ್ಯಾಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ದಂಪತಿ ಪ್ರವಾಸಕ್ಕೆ ಹೋಗಿದ್ದಾಗ ಮನೆಯಲ್ಲಿದ್ದ ಲಕ್ಷಾಂತರ ರೂ. ನಗದು–ಚಿನ್ನಾಭರಣ ದೋಚಿದ ಖದೀಮರು

ಮೈಸೂರು, ಜು.15(ಎಸ್‌ಬಿಡಿ)–ದಂಪತಿ ಧಾರ್ಮಿಕ ಸ್ಥಳಗಳಿಗೆ ಪ್ರವಾಸ ತೆರಳಿದ್ದ ವೇಳೆ ಖದೀಮರು ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ನಗದು ದೋಚಿರುವ ಘಟನೆ ಮೈಸೂರಿನ ಬಿ.ಎಂ.ಶ್ರೀನಗರದಲ್ಲಿ ನಡೆದಿದೆ. ಇಲ್ಲಿನ ಮೊದಲ ಮುಖ್ಯ ರಸ್ತೆ, 12ನೇ ಕ್ರಾಸ್ ನಿವಾಸಿ ಬಾಬುರಾವ್ ಅವರ ಮನೆಯಲ್ಲಿ ಸುಮಾರು 2.66 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 62 ಸಾವಿರ ರೂ. ಹಣವನ್ನು ಕಳ್ಳರು ದೋಚಿದ್ದಾರೆ.

ಬಾಬುರಾವ್ ಹಾಗೂ ಅವರ ಪತ್ನಿ ನಾಗರತ್ನಬಾಯಿ ಅವರು ಮನೆಗೆ ಬೀಗ ಹಾಕಿಕೊಂಡು ಜು.1ರಂದು ಸಂಬಂಧಿಕರೊಂದಿಗೆ ಕಾಶಿಗೆ ತೆರಳಿದ್ದರು. ಕಾಶಿ ನಂತರ ಅಯೋಧ್ಯೆ, ತಾಜಮಹಲ್ ಹಾಗೂ ಕೆಲವು ದೇವಸ್ಥಾನಗಳಿಗೆ ಭೇಟಿ ನೀಡಿ, ಜು.12ರಂದು ವಾಪಸ್ಸಾಗಿದ್ದಾರೆ. ಬಾಬುರಾವ್ ಮುಂಬಾಗಿಲಿನ ಡೋರ್‌ಲಾಕ್ ತೆಗೆದಿದ್ದಾರೆ. ಆದರೆ ಮತ್ತೊಂದು ಲಾಕ್ ಅದಾಗಲೇ ತೆಗೆದಿದ್ದರಿಂದ ಅನುಮಾನ ಬಂದಿದೆ. ಮನೆಯೊಳಗೆ ಹೋಗಿ ರೂಂನಲ್ಲಿ ಪರಿಶೀಲಿಸಿದಾಗ ಅಲ್ಲಿನ ಲಾಕರ್ ಒಡೆದು, ರಾಡ್‌ನಿಂದ ಮೀಟಿ ಚಿನ್ನಾಭರಣ ಹಾಗೂ ಹಣ ದೋಚಿರುವುದು ಗೊತ್ತಾಗಿದೆ. ಈ ಸಂಬಂಧ ಮೇಟಗಳ್ಳಿ ಪೊಲೀಸ್ ಠಾಣೆಗೆ ಭಾನುವಾರ ದೂರು ನೀಡಿದ್ದಾರೆ.

ಮೈಸೂರು ಕೋರ್ಟ್ ಆವರಣದಲ್ಲೇ ಕಳ್ಳತನ!

ಜನರೇಟರ್ ಬ್ಯಾಟರಿ ಕಳವು

ಮೈಸೂರು, ಜು.15(ಎಸ್‌ಬಿಡಿ)–ಮೈಸೂರು ನ್ಯಾಯಾಲಯದ ಆವರಣದಲ್ಲೇ ಖದೀಮರು ಕೈಚಳಕ ತೋರಿದ್ದಾರೆ.

ಜಯನಗರದ ಮಳಲವಾಡಿ ಹೊಸ ನ್ಯಾಯಾಲಯದ ಜನರೇಟರ್‌ನ ಬ್ಯಾಟರಿಯನ್ನೇ ಕದ್ದೊಯ್ದಿದ್ದಾರೆ. ಈ ಸಂಬಂಧ ಹಿರಿಯ ಸಿವಿಲ್ ನ್ಯಾಯಾಧೀಶರ ಹಾಗೂ ಸಿಜೆಎಂ ನ್ಯಾಯಾಲಯದ ಮುಖ್ಯ ಲಿಪಿಕಾಧಿಕಾರಿ ಅಶೋಕಪುರಂ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ನ್ಯಾಯಾಲಯದ ಕಾರ್ಯ ಕಲಾಪಗಳಿಗೆ ಅನುಕೂಲವಾಗಲೆಂದು ಜನರೇಟರ್ ಅಳವಡಿಸಲಾಗಿದೆ. ಆದರೆ ವಾರದ ಹಿಂದೆ ವಿದ್ಯುತ್ ಸಂಪರ್ಕ ಕಡಿತಗೊಂಡಾಗ ಸ್ವಯಂ ಚಾಲಿತವಾಗಿ ಜನರೇಟರ್ ಆನ್ ಆಗಿಲ್ಲ. ಕೂಡಲೇ ಜನರೇಟರ್ ಗುತ್ತಿಗೆದಾರನಿಗೆ ಮಾಹಿತಿ ನೀಡಿ, ಆತ ಕಳುಹಿಸಿದ್ದ ಎಲೆಕ್ಟ್ರಿಷಿಯನ್ ಮೂಲಕ ಪರಿಶೀಲಿಸಿದಾಗ ಜನರೇಟರ್‌ನ ಬ್ಯಾಟರಿ ಕಳುವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಅಶೋಕಪುರಂ ಪೊಲೀಸರು, ಖದೀಮನ ಪತ್ತೆಗೆ ಕ್ರಮ ವಹಿಸಿದ್ದಾರೆ.

ಲಯನ್ ಟಿ.ಹೆಚ್.ವೆಂಕಟೇಶ್ ಅವರಿಗೆ ವರುಷದ ಲಯನ್ಸ್ ಪ್ರಶಸ್ತಿ



2023–24ನೇ ಸಾಲಿನ 317 G ಜಿಲ್ಲೆಯ 97 ಲಯನ್ಸ್ ಸಂಸ್ಥೆಯ ಪರವಾಗಿ year of Lion ಪ್ರಶಸ್ತಿಯನ್ನು ಮೈಸೂರು ಅಂಬಾಸಡರಸ್ ಸಂಸ್ಥೆ ಸ್ಥಾಪಕ ಅಧ್ಯಕ್ಷರು ಮತ್ತು 317 G ಜಿಲ್ಲೆಯ ಸಂಪುಟ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದ ಲಯನ್ ಟಿ.ಹೆಚ್.ವೆಂಕಟೇಶ್ ಅವರಿಗೆ ಲಯನ್ಸ್ ಜಿಲ್ಲಾ ಪ್ರಶಸ್ತಿ ಸಮಾರಂಭದಲ್ಲಿ 2023–24ನೇ ಲಯನ್ಸ್ ಜಿಲ್ಲಾ ರಾಜ್ಯಪಾಲರಾದ ಲಯನ್ ಡಾ.ಎನ್.ಕೃಷ್ಣೇಗೌಡ ನೀಡಿದರು. ಈ ವೇಳೆ ಲಯನ್‌ನ ಹೇಮಾವತಿ ಕೃಷ್ಣೇಗೌಡ, ಲಯನ್ ಎ.ಕಾಂತರಾಜ್, ಲಯನ್ ಸಿದ್ದೇಗೌಡ, ಲಯನ್ ಟಿ.ಹೆಚ್.ವೆಂಕಟೇಶ್ ಅವರನ್ನು ಲಯನ್ಸ್ ಅಂಬಾಸಡರಸ್ ಸಂಸ್ಥೆಯ ಸದಸ್ಯರು ಅಭಿನಂದಿಸಿದರು.

ಮೈಸೂರಿನಲ್ಲಿ ನಿರಂತರ ಮಳೆಗೆ ಜನ ಜೀವನ ಅಸ್ತವ್ಯಸ್ತ

ಕೊಡಗು, ಮೈಸೂರಲ್ಲಿ ಇಂದೂ ಆರೆಂಜ್ ಅಲರ್ಟ್

- ಗಂಟೆಗೆ 30 ರಿಂದ 40 ಕಿಲೋ ಮೀಟರ್ ಗಾಳಿ ವೇಗ
- 60 ರಿಂದ 100 ಮಿಲಿ ಮೀಟರ್ ಮಳೆಯಾಗುವ ಸಾಧ್ಯತೆ
- ಶಾಲಾ-ಕಾಲೇಜು ಮಕ್ಕಳಿಗೆ ಮಳೆರಾಯನ ಕಿರಿಕಿರಿ
- ಮೈಸೂರಲ್ಲಿ ವ್ಯಾಪಾರ-ವಹಿವಾಟಿಗೂ ಸಾಕಷ್ಟು ಧಕ್ಕೆ



ಮೈಸೂರು, ಜು.15(ಬಿಎಲ್‌ಯು)– ಮುಂಗಾರಿನ ಪುನರ್ವಸು ಮಳೆ ಆರ್ಭಟಿಸುತ್ತಿದ್ದು, ಮೈಸೂರು ಹಾಗೂ ಕೊಡಗಿನಲ್ಲಿ ಜನ ಜೀವನ ಅಸ್ತವ್ಯಸ್ತಗೊಂಡಿದೆ. ಈ ದಿನದಂತೆ ನಾಳೆ ಕೂಡ ಮೈಸೂರು ಹಾಗೂ ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆ ಸುರಿಯಲಿದ್ದು, ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ.

ಜಿಟಿ ಜಿಟಿ ಮಳೆಗೆ ಸಾಂಸ್ಕೃತಿಕ ನಗರಿ ಮೈಸೂರು ಜನ ಜೀವನ ಅಸ್ತವ್ಯಸ್ತ, ಶಾಲಾ ಕಾಲೇಜು, ಕೆಲಸಕ್ಕೆ ಹೋಗುವವರಿಗೆ ವರುಣನ ಅಡ್ಡಿ, ಧೂಳು ಹಿಡಿದು ಮೂಲೆ ಸೇರಿದ್ದ ಕೊಡೆಗಳು ಕೈಗೆ, ರೈನ್ ಕೋಟ್ ಹಾಗೂ ಜರ್ಕಿನ್‌ಗಳು ಮತ್ತೆ ಬಳಕೆಗೆ, ಬಿಟ್ಟು ಬಿಡದಂತೆ ಸುರಿದ ಧಾರಾಕಾರ ಮಳೆಯಿಂದ ವ್ಯಾಪಾರ ವಹಿವಾಟಿಗೆ ಅಡ್ಡಿ, ಪುನರ್ವಸು ಮಳೆಗೆ ರೈತಾಪಿ ವರ್ಗ ಹರ್ಷ.

ಮೈಸೂರಿನಲ್ಲಿ ನಿನ್ನೆ ರಾತ್ರಿ ಆರಂಭವಾದ ಮಳೆ ಇಂದು ರಾತ್ರಿ ತನಕ ಬಿಟ್ಟು ಬಿಡದೇ ನಿರಂತರವಾಗಿ ಸುರಿದಿದೆ. ಕೆಲಹೊತ್ತು ತುಂತುರು, ಮತ್ತೆ ಕೆಲ ಸಮಯ ಧಾರಾಕಾರವಾಗಿ ಸುರಿಯುತ್ತಲೇ ಇತ್ತು. ಮೈಸೂರು ಮತ್ತು ಕೊಡಗಿನಲ್ಲಿ ಇಡೀ ದಿನ ಮಳೆ ಸುರಿದಿದೆ.

ಹವಾಮಾನ ಇಲಾಖೆ ನೀಡಿರುವ ಮಾಹಿತಿ ಪ್ರಕಾರ ನಿನ್ನೆ 13.3 ಮಿಲಿ ಮೀಟರ್ ಮಳೆ ಸುರಿದಿದೆ. ಗಾಳಿಯ ವೇಗ ಗಂಟೆಗೆ 15 ಕಿಲೋ ಮೀಟರ್ ತನಕ ಬೀಸಿದೆ.

ಮೈಸೂರಿನಲ್ಲಿ ಇಂದು ದಟ್ಟ ಮೋಡ ಆವರಿಸಿದ್ದು, ಧಾರಾಕಾರ ಮಳೆ ಸುರಿಯುತ್ತಲೇ ಇದೆ. ಮೈಸೂರು ಹಾಗೂ ಕೊಡಗು ಜಿಲ್ಲೆಯಲ್ಲಿ ನಾಳೆ ತನಕ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ. ಈ ಮೂಲಕ ನಾಳೆ 60 ರಿಂದ 100 ಮಿಲಿ ಮೀಟರ್ ಮಳೆ ಬೀಳುವ ಸಾಧ್ಯತೆ ಇದೆ. ಗಾಳಿಯು ಗಂಟೆಗೆ 30 ರಿಂದ 40 ಕಿಲೋ ಮೀಟರ್ ವೇಗದಲ್ಲಿ ಬೀಸಲಿದೆ ಎಂದು ಮೈಸೂರಿನ ನಾಗನಹಳ್ಳಿಯ ಹವಾಮಾನ ಇಲಾಖೆಯ ಸಹ ಸಂಶೋಧಕ ಡಾ.ಜಿ.ಸುಮಂತ್ ಕುಮಾರ್ ತಿಳಿಸಿದ್ದಾರೆ.

ಜಿಟಿ ಜಿಟಿ ಮಳೆಯಿಂದ ಶಾಲಾ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ತೊಂದರೆ ಅನುಭವಿಸಿದರು. ಕೆಲಸಕ್ಕೆ ಹೋಗುವವರು ಮಳೆಯಲ್ಲೇ ನೆನೆದು ಕಾಯಕ ಸ್ಥಳ ತಲುಪಿದರು. ಮಳೆಯ ಕಾರಣದಿಂದ ವ್ಯಾಪಾರ ವಹಿವಾಟು ಅಷ್ಟಕಷ್ಟೆ, ಇದರಿಂದ ಮೈಸೂರಿನ ದೇವರಾಜ ಅರಸ್ ರಸ್ತೆ, ಸಯ್ಯಾಜಿರಾವ್ ರಸ್ತೆ ಸೇರಿದಂತೆ ಇತರೆ ವ್ಯಾಪಾರ ಸ್ಥಳಗಳಲ್ಲಿ ಅಂಗಡಿಗಳು ಖಾಲಿ ಖಾಲಿ.

ಫುಟ್‌ಪಾತ್ ವ್ಯಾಪಾರಿಗಳಿಗಂತೂ ಇಂದು ವ್ಯಾಪಾರ ಶೂನ್ಯವಾಗಿತ್ತು. ವಸ್ತುಗಳಿಗೆ ಪ್ಲಾಸ್ಟಿಕ್ ಕವರ್ ಹಾಕಿ ಗ್ರಾಹಕರಿಗಾಗಿ ಕಾದರೂ ಖರೀದಿಗೆ ಅತ್ತ ಯಾರೂ ಸುಳಿಯಲಿಲ್ಲ. ಸಯ್ಯಾಜಿರಾವ್ ರಸ್ತೆಯಲ್ಲಿ ಮೋರಿಗಳಿಗೆ ಹಾಸಿರುವ ಕಲ್ಲುಗಳು ಏರುಪೇರಾಗಿರುವ ಕಾರಣ ಜೋರು ಮಳೆಗೆ ಕೆಲವರು ಜಾರಿ ಬಿದ್ದರು.

ಮಳೆಯ ಜೊತೆಗೆ ಗಾಳಿ ಇದ್ದಿದ್ದರೆ ಮರ ಗಿಡಗಳು ಧರೆಗುರುಳಿ ಅವಘಡಗಳು ಸಂಭವಿಸುತ್ತಿತ್ತು. ಆದರೆ ನಿನ್ನೆಯಿಂದ ಇಂದು ರಾತ್ರಿ ತನಕ ಸುರಿದ ಮಳೆಯಲ್ಲಿ ಹೆಚ್ಚು ಗಾಳಿ ಇರಲಿಲ್ಲ. ಗಂಟೆಗೆ ಕೇವಲ 15 ಕಿಲೋ ಮೀಟರ್ ವೇಗದಲ್ಲಿ ಬೀಸುತ್ತಿದ್ದ ಕಾರಣ ಯಾವುದೇ ಅವಘಡ ಸಂಭವಿಸಲಿಲ್ಲ. ಆದರೆ ನಾಳೆ ಗಾಳಿಯ ವೇಗ ಗಂಟೆಗೆ 30ರಿಂದ 40 ಕಿಲೋ ಮೀಟರ್ ಬೀಸಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿರುವ ಕಾರಣ ನಗರಪಾಲಿಕೆ, ಚೆಸ್ಕಾಂನವರು ಸನ್ನದ್ಧರಾಗಿರಬೇಕಾಗಿದೆ.



ಮುಂಗಾರಿನ ಪುನರ್ವಸು ಮಳೆ ಮೈಸೂರು ಹಾಗೂ ಕೊಡಗಿನಲ್ಲಿ ಆರ್ಭಟಿಸುತ್ತಿದ್ದು, ಜನ ಜೀವನ ಅಸ್ತವ್ಯಸ್ತಗೊಂಡಿದೆ. ಮಳೆ ನಡುವೆಯೇ ವಾಹನ ಸವಾರರು ಸಾಗಿದರು.

ಮೈಸೂರು, ನೆರೆ ಜಿಲ್ಲೆಗಳಲ್ಲಿ ಜು.17ರವರೆಗೆ ಮಳೆ ಸಾಧ್ಯತೆ

ಮೈಸೂರು,ಜು.15(ಪಿಎಂ)– ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಮೈಸೂರು, ಮಂಡ್ಯ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಜು.17ರವರೆಗೆ ಮಳೆಯಾಗುವ ಸಂಭವವಿದೆ ಎಂದು ನಾಗನಹಳ್ಳಿಯ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ.

ಅದರಂತೆ ಮೈಸೂರು ಜಿಲ್ಲೆಯಲ್ಲಿ ತುಂತುರುವಿನಿಂದ ಕೂಡಿದ ಸಾಧಾರಣ ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 26.6ರಿಂದ 32.4 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 16.9ರಿಂದ 17.4 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.87ರಿಂದ 88ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ. 55ರಿಂದ 70ರವರೆಗೆ ದಾಖಲಾಗುವ ಸಂಭವವಿದ್ದು, ಗಾಳಿಯು ಗಂಟೆಗೆ 19ರಿಂದ 23 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

ಮಂಡ್ಯ ಜಿಲ್ಲೆಯಲ್ಲಿ ಭಾಗಶಃ ಮೋಡ ಕವಿದ ವಾತಾವರಣವಿದ್ದು, ತುಂತುರು ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 26.6ರಿಂದ 32.8 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 18.3ರಿಂದ 18.6 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆ ಇದೆ. ಬೆಳಗಿನ ಗಾಳಿಯ ತೇವಾಂಶ ಶೇ.82ರಿಂದ 87ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ. 50ರಿಂದ 74ರವರೆಗೆ ದಾಖಲಾಗುವ ಸಾಧ್ಯತೆ ಇದ್ದು, ಗಾಳಿಯು ಗಂಟೆಗೆ 20ರಿಂದ 24 ಕಿಲೋಮೀಟರ್ ವೇಗದಲ್ಲಿ ಬೀಸುವ ಸಂಭವವಿದೆ.

ಕೊಡಗು ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣದೊಂದಿಗೆ ಸಾಧಾರಣದಿಂದ ಭಾರಿ ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 25.3ರಿಂದ 30.9 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 17.8ರಿಂದ 18.4 ಡಿಗ್ರಿ ಸೆಲ್ಸಿಯಸ್‌ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ.94ರಿಂದ 95ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ. 67ರಿಂದ 93ರವರೆಗೆ ದಾಖಲಾಗುವ ಸಾಧ್ಯತೆ ಇದ್ದು, ಗಾಳಿಯು ಗಂಟೆಗೆ 9ರಿಂದ 13 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆ ಇದೆ.

ಚಾಮರಾಜನಗರ ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣದೊಂದಿಗೆ ತುಂತುರು ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 31.9ರಿಂದ 37.9 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ ಉಷ್ಣಾಂಶ 16.9ರಿಂದ 17.4 ಡಿಗ್ರಿ ಸೆಲ್ಸಿಯಸ್ ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇ. 81ರಿಂದ 85ರವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇ.46ರಿಂದ 62ರವರೆಗೆ ದಾಖಲಾಗುವ ಸಂಭವವಿದೆ. ಗಾಳಿಯು ಗಂಟೆಗೆ 17ರಿಂದ 21 ಕಿಲೋಮೀಟರ್ ವೇಗದಲ್ಲಿ ಬೀಸುವ ಸಂಭವವಿದೆ ಎಂದು ಜು.12ರಂದು ಹೊರಡಿಸಿರುವ ಪ್ರಕಟಣೆಯಲ್ಲಿ ಜು.13ರಿಂದ 17ರವರೆಗಿನ ಮಳೆ ಮುನ್ಸೂಚನೆಯನ್ನು ನೀಡಲಾಗಿದೆ.

ಭತ್ತ–ರಾಗಿ ನಾಟಿಗೆ ಸಕಾಲ: 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಗೋವಿಂದರಾಜು, ರಾಜ್ಯಾದ್ಯಂತ ಮುಂಗಾರು ಮಳೆ ಉತ್ತಮವಾಗಿದ್ದು, ಕೊಡಗು ಜಿಲ್ಲೆಯಲ್ಲಿ 5ರಿಂದ 6 ಇಂಚಿನವರೆಗೆ ಮಳೆಯಾಗುತ್ತಿದೆ. ಬೆಂಗಳೂರಿನಲ್ಲೂ ಉತ್ತಮ ಮಳೆಯಾಗುತ್ತಿದ್ದು, ಇದೇ ರೀತಿ ಮಳೆ ಮುಂದುವರೆದರೆ ಜು.31ರೊಳಗೆ ಕೆಆರ್‌ಎಸ್ ಜಲಾಶಯ ಭರ್ತಿಯಾಗಲಿದೆ ಎಂದು ತಿಳಿಸಿದರು. ಹೀಗೆ ಮಳೆ ಮುಂದುವರೆಯುವ ಲಕ್ಷಣಗಳು ಗೋಚರಿಸುತ್ತಿದ್ದು, ಈ ಅವಧಿಯಲ್ಲಿ ಸೂರ್ಯನೇ ಕಾಣದಷ್ಟು ಮೋಡ ಕವಿದ ವಾತಾವರಣ ಇರುವುದು ಸಾಮಾನ್ಯ. ಈ ರೀತಿಯ ಮಳೆಯಿಂದ ಭೂಮಿಯು ಹೆಚ್ಚು ನೀರು ಕುಡಿಯಲು ಅನುಕೂಲವಾಗಲಿದೆ. ಹೆಸರು, ಉದ್ದು ಹಾಗೂ ಅಲಸಂಧೆ ಕಾಳುಗಳು ಕೊಯ್ಲು ಪೂರ್ಣಗೊಳಿಸಿದ್ದರೆ ಯಾವುದೇ ತೊಂದರೆ ಇಲ್ಲ ಎಂದರು.

ಒಣಭೂಮಿಯಲ್ಲಿ ಬೆಳೆಯುವ ಬೆಳೆಯಾದ ಸಿರಿಧಾನ್ಯ ಬೆಳವಣಿಗೆಯಲ್ಲಿ ಸ್ವಲ್ಪ ಮಟ್ಟಿಗೆ ಕುಂಠಿತವಾಗಲಿದೆ. ಇದೇ ರೀತಿ ಮಳೆಯಾದರೆ ತರಕಾರಿ ಹಾಗೂ ಹಣ್ಣು ಬೆಳೆಗಳ ಕೊಯ್ಲು ಹಾಗೂ ಶೇಖರಣೆ ಕಷ್ಟಸಾಧ್ಯ. ಭತ್ತ ಹಾಗೂ ರಾಗಿ ನಾಟಿ ಮಾಡಿಕೊಳ್ಳಲು ಸಕಾಲವಾಗಿದ್ದು, ನಾಗನಹಳ್ಳಿ ಸಂಶೋಧನಾ ಕೇಂದ್ರದಲ್ಲಿ ಬಿತ್ತನೆ ಬೀಜ ಪಡೆದುಕೊಳ್ಳಬಹುದು. ಇದೇ ರೀತಿ ಮಳೆ ಮುಂದುವರೆದರೆ ಮೆಕ್ಕೆ ಜೋಳ ಬಿತ್ತನೆ ಮಾಡದಿರುವುದು ಸೂಕ್ತ ಎಂದು ರೈತರಿಗೆ ಸಲಹೆ ನೀಡಿದರು.

ಮೈದುಂಬಿ ಹರಿಯುತ್ತಿರುವ ಧನುಷ್ಕೋಟಿ ಜಲಪಾತ

ಚುಂಚನಕಟ್ಟೆಯತ್ತ ಹರಿದು ಬರುತ್ತಿರುವ ಪ್ರವಾಸಿಗರ ದಂಡು



ಚುಂಚನಕಟ್ಟೆಯಲ್ಲಿರುವ ಧನುಷ್ಕೋಟಿ ಜಲಪಾತ ಮೈದುಂಬಿ ಹರಿಯುತ್ತಿರುವುದು.

ಚುಂಚನಕಟ್ಟೆ, ಜು.15– ಪುನರ್ವಸು ಮಳೆಯು ಕಾವೇರಿ ಜಲಾನಯನ ಪ್ರದೇಶದಲ್ಲಿ ಬೆಂಬಿಡದೆ ಸುರಿಯುತ್ತಿರುವ ಕಾರಣ ಕಾವೇರಿ ನದಿಯು ಉಕ್ಕಿ ಹರಿಯುತ್ತಿದ್ದು ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಧನುಷ್‌ಕೋಟಿ ಜಲಪಾತ ಮೈದುಂಬಿ ಹರಿಯುತ್ತಿದೆ. ಹಾರಂಗಿ ಜಲಾಶಯದಿಂದ 20ಸಾವಿರ ಕ್ಯೂಸೆಕ್ಸ್ ನೀರನ್ನು ನದಿಗೆ ಬಿಟ್ಟಿದ್ದು, ನದಿ ನೀರಿನ ಮಟ್ಟ ಇನ್ನಷ್ಟು ಹೆಚ್ಚುವ ಸಾಧ್ಯತೆ ಇದೆ ಕಾವೇರಿ ಮೈದುಂಬಿ ಹರಿಯುತ್ತಿರುವ ಪರಿಣಾಮ ಪ್ರವಾಸಿಗರ ದಂಡೆ ಚುಂಚನಕಟ್ಟೆಯತ್ತ ಹರಿದು ಬರುತ್ತಿದ್ದು ಇನ್ನೊಂದು ವಾರದೊಳಗೆ ನದಿ ವ್ಯಾಪ್ತಿಯಲ್ಲಿ ಬರುವ ಕಟ್ಟೆಪುರ ಚಾಮರಾಜ, ಮಿರ್ಲೆ ಶ್ರೇಣಿ ನಾಲೆಗಳಿಗೆ ನೀರು ಹರಿಸಿದರೆ ಜಲಪಾತ ವೀಕ್ಷಣೆಗೆ ನೀರಿನ ಪ್ರಮಾಣ ಕಡಿಮೆಯಾಗಲಿದ್ದು, ಇನ್ನೊಂದು ವಾರದೊಳಗೆ ಜಲಪಾತವನ್ನು ಕಣ್ತುಂಬಿಕೊಳ್ಳುವ ಪ್ರವಾಸಿಗರು ಆದಷ್ಟು ಬೇಗ ಚುಂಚನಕಟ್ಟೆ ಯತ್ತ ಧಾವಿಸುತ್ತಿದ್ದಾರೆ.

ಕೇರಳದಲ್ಲಿ ಧಾರಾಕಾರ ಮಳೆ: ಕಬಿನಿ ಜಲಾಶಯ ಭರ್ತಿ

25 ಸಾವಿರ ಕ್ಯುಸೆಕ್ ನೀರು ನದಿಗೆ, ಡ್ಯಾಂ ಕೆಳಗಿನ ರಸ್ತೆಯಲ್ಲಿ ಸಂಚಾರ ನಿರ್ಬಂಧ



ಕಬಿನಿ ಜಲಾಶಯದ ಮುಂಭಾಗ ಇರುವ ಸೇತುವೆ ಸಂಪೂರ್ಣ ಮುಳುಗಡೆ ಆಗಿರುವುದು.

ಹೆಚ್.ಡಿ.ಕೋಟೆ, ಜು.15– ಕೇರಳದಲ್ಲಿ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಕಬಿನಿ ಜಲಾಶಯಕ್ಕೆ 24,000 ಕ್ಯುಸೆಕ್ ನೀರು ಹರಿದು ಬರುತ್ತಿದೆ ಎಂದು ಅಧಿಕಾರಿ ವರ್ಗ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಜಲಾಶಯದ ನಾಲ್ಕು ಕ್ರಸ್ಟ್ ಗೇಟ್‌ಗಳಿಂದ 25 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ.

ಕಬಿನಿ ಜಲಾಶಯದ ಸೋಮವಾರದ ನೀರಿನ ಮಟ್ಟ: ಗರಿಷ್ಠ ಮಟ್ಟ 2284 ಅಡಿ, ಇಂದಿನ ಮಟ್ಟ 2283 ಅಡಿಗಳಾಗಿದ್ದು, ಜಲಾಶಯಕ್ಕೆ 24 ಸಾವಿರ ಕ್ಯುಸೆಕ್ ನೀರು ಹರಿದು ಬರುತ್ತಿದೆ. ಜಲಾಶಯದಿಂದ 25 ಸಾವಿರ ಕ್ಯುಸೆಕ್ ನೀರು ಹೊರಬಿಡಲಾಗುತ್ತಿದೆ.

ರಸ್ತೆ ಸಂಚಾರ ನಿರ್ಬಂಧ: ಜಲಾಶಯದ ಮುಂಭಾಗ ಇರುವ ಸೇತುವೆ ಮೇಲೆ ನೀರು ಹರಿಯುತ್ತಿರುವ ಕಾರಣ ಸೇತುವೆ ಮೇಲೆ ಸಂಚಾರ ನಿರ್ಬಂಧಿಸಲಾಗಿದೆ. ಹ್ಯಾಂಡ್‌ಪೋಸ್ಟ್‌ನಿಂದ ಬಿದರಹಳ್ಳಿ, ತೆರಣಿಮುಂಟಿ, ನಂಜನಾಥಪುರ, ಬಸಾಪುರ, ಉಯ್ಯಂಬಳ್ಳಿ, ಕಳಸೂರು, ಕೆಂಚನಹಳ್ಳಿ, ಕಾಳೇನಹಳ್ಳ, ಮೂರ್‌ಬಾಂದ್, ಗುಂಡನ ಮಾಳ, ಬೋರೆದೇವರಮುಂಟಿ, ಭೀಮನಕೊಲ್ಲಿ, ಏನ್.ಬೇಗೂರು, ಜಕ್ಕಳ್ಳಿ, ಬೀರಂಬಳ್ಳಿ, ಬ್ರಹ್ಮಗೀರಿ, ಗೆಂಡತ್ತೂರು ಕಡೆಗೆ ತೆರಳುವ ಜನತೆಗೆ ಮಾತ್ರ ದ್ವಿಚಕ್ರವಾಹನದಲ್ಲಿ ಜಲಾಶಯದ ಅಣೆಕಟ್ಟಿನ ಮೇಲೆ ತೆರಳುವ ವ್ಯವಸ್ಥೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಾಲಾ–ಕಾಲೇಜು ರಜೆ ಘೋಷಣೆ: ನಿರಂತರ ಸುರಿಯುತ್ತಿರುವ ಮಳೆಯ ಹಿನ್ನೆಲೆಯಲ್ಲಿ ಶಾಲಾ–ಕಾಲೇಜುಗಳು ರಜಾ ಘೋಷಣೆ ಮಾಡಿದ್ದಾರೆ.




ಹೆಚ್. ಮತಕೆರೆ ಗ್ರಾಮದ ನಿವಾಸಿ ಸೋಮನಾಯ್ಕ ಅವರ ಮನೆ ಮೇಲ್ಛಾವಣಿ, ಗೋಡೆ ಕುಸಿದಿರುವ ಚಿತ್ರ.

ಮಳೆಗೆ ಮನೆಗಳು ಕುಸಿತ: ಎರಡು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಗೆ ಹೆಚ್. ಮತಕೆರೆ ಗ್ರಾಮದ ಸೋಮನಾಯ್ಕ, ಜಯಮ್ಮ ಅವರ ಮನೆಯ ಚಾವಣಿ, ಗೋಡೆ ಕುಸಿದು, ದಂಪತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹೊನ್ನೇಗೌಡನಹಳ್ಳಿ ಗ್ರಾಮದ ಬಸವರಾಜು ಅವರ ಮನೆ ಮಳೆಗೆ ಕುಸಿದಿದೆ.

ಹೆಚ್.ಮತಕೆರೆ ಗ್ರಾಮಕ್ಕೆ ಗ್ರಾಮ ಲೆಕ್ಕಾಧಿಕಾರಿಗಳು ಭೇಟಿ ನೀಡಿ, ಮಳೆಯಿಂದ ಹಾನಿಯಾಗಿರುವ ಮನೆಗಳಿಗೆ ಸರ್ಕಾರದಿಂದ ಪರಿಹಾರ ಕೊಡಿಸಿ ಕೊಡುವ ಭರವಸೆ ನೀಡಿದ್ದಾರೆ.

ಹೆಚ್.ಮತಕೆರೆ ಗ್ರಾಮದ ಮನೆ ಕಳೆದುಕೊಂಡ ಸೋಮನಾಯಕ ಅವರ ಪತ್ನಿ ಜಯಮ್ಮ ಮಾತನಾಡಿ, ನಾವು ಬಡ ಕುಟುಂಬದ ಜನ. ಕೂಲಿನಾಲಿ ಮಾಡಿ ಜೀವನ ಸಾಗಿಸುತ್ತೇವೆ. ನಮಗೆ ವಾಸಿಸಲು ಮನೆ ಇಲ್ಲ, ಗ್ರಾಮ ಪಂಚಾಯತಿ ವತಿ ಯಿಂದಲೂ ನನಗೆ ಮನೆ ಆಗಿಲ್ಲ, ಸರ್ಕಾರದ ಸಹಾಯಧನದ ಬದಲು ನನಗೆ ಮನೆ ನಿರ್ಮಿಸಿ ಕೊಡಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.

ನಂ.ಗೂಡು ಹದಿನಾರು ಕಾಲು ಮಂಟಪ ಜಲಾವೃತ ನದಿಯಂಚಿನ ಗ್ರಾಮಗಳಿಗೆ ಪ್ರವಾಹದ ಭೀತಿ



ನಂಜನಗೂಡಿನ ಹದಿನಾರುಕಾಲು ಮಂಟಪ ಜಲಾವೃತಗೊಂಡಿರುವುದು.

ನಂಜನಗೂಡು, ಜು.15– ಕಬಿನಿ ಜಲಾಶಯ ಭರ್ತಿಯಾಗಿ ಹೆಚ್ಚುವರಿ ನೀರನ್ನು ಹೊರ ಬಿಟ್ಟಿರುವ ಕಾರಣ ಕಪಿಲಾ ನದಿ ಮೈದುಂಬಿ ಹರಿಯುತ್ತಿದ್ದು ಜೀವಕಳೆ ಬಂದಂತಾಗಿದೆ. ಅದೇ ವೇಳೆ ನದಿಯಂಚಿನ ಗ್ರಾಮಗಳಿಲ್ಲಿ ಪ್ರವಾಹದ ಭೀತಿ ಎದುರಾಗಿದೆ.

ಕಬಿನಿ ಜಲಾಶಯದ ಗರಿಷ್ಠ 2284 ಅಡಿಯಾಗಿದ್ದು, 19.52 ಟಿಎಂಸಿ ನೀರಿನ ಸಂಗ್ರಹ ಸಾಮರ್ಥ್ಯ ಹೊಂದಿದೆ. ಸೋಮವಾರದ ವೇಳೆಗೆ ಜಲಾಶಯ ಸಂಪೂರ್ಣ ಭರ್ತಿಯಾಗಿ 2282 ಅಡಿ ನೀರಿನ ಸಂಗ್ರಹಣೆಯಾಗಿದೆ. ಒಳಹರಿವಿನ ಪ್ರಮಾಣ 14,697 ಕ್ಯುಸೆಕ್ ಇದ್ದು, ಜಲಾಶಯದ ಭದ್ರತೆಯ ದೃಷ್ಟಿಯಿಂದ ಸುಮಾರು 20,000 ಕ್ಯುಸೆಕ್ ನೀರನ್ನು ಕಪಿಲಾ ನದಿಗೆ ಹರಿಸುತ್ತಿರುವ ಕಾರಣ ಕಪಿಲಾ ನದಿ ಮೈದುಂಬಿ ಹರಿಯುತ್ತಾ ಪ್ರವಾಸಿಗರ, ನೋಡುಗರ ಕಣ್ಮನ ಸೆಳೆಯುತ್ತಿದ್ದಾಳೆ.

ಕಪಿಲಾ ನದಿ ಮೈದುಂಬಿ ಹರಿಯುತ್ತಿರುವ ಕಾರಣ ಶ್ರೀಕಂಠೇಶ್ವರ ದೇವಾಲಯದ ಸ್ನಾನಘಟ್ಟ ಭಾಗಶಃ ತುಂಬಿಕೊಂಡಿದೆ. 16 ಕಾಲು ಮಂಟಪ ಭಾಗಶಃ ಮುಳುಗಡೆಯಾಗಿದೆ. ನದಿ ಅಂಚಿನಲ್ಲಿ ವಾಸಿಸುವ ಜನರಿಗೆ ಪ್ರವಾಹ ಭೀತಿ ಎದುರಾಗಿದೆ.

ತಹಸಿಲ್ದಾರ್ ಶಿವಕುಮಾರ್ ಕಾಸ್ನೂರು 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿ, ಕಬಿನಿ ಜಲಾಶಯ ಭರ್ತಿಯಾಗಿರುವ ಕಾರಣ ಹೆಚ್ಚುವರಿ ನೀರನ್ನು ಕಪಿಲಾ ನದಿಗೆ ಹರಿ ಬಿಟ್ಟಿರುವುದರಿಂದ ಕಪಿಲಾ ನದಿ ಮೈದುಂಬಿ ಹರಿಯುತ್ತಿದೆ. ಯಾವುದೇ ಕ್ಷಣದಲ್ಲಾದರೂ ನೀರಿನ ಪ್ರಮಾಣ ಹೆಚ್ಚಾಗುವ ಸಂಭವವಿರುವುದರಿಂದ ನದಿಯ ಅಂಚಿನಲ್ಲಿರುವ ಗ್ರಾಮಗಳಲ್ಲಿ ವಾಸಿಸುವ ಜನರು, ಹಾಗೂ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು. ನದಿಯ ದಡಕ್ಕೆ ಹೋಗದೆ ನಿಮ್ಮ ಜಾನುವಾರುಗಳನ್ನು ಕಾಪಾಡಿಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಕಪಿಲಾ ನದಿ ಮೈದುಂಬಿ ಹರಿಯುತ್ತಿರುವ ಕಾರಣ ಸಾರ್ವಜನಿಕರು ಕಪಿಲಾ ನದಿಯನ್ನು ಕಣ್ತುಂಬಿಕೊಂಡು ಸೆಲ್ಫಿ ಕ್ಲಿಕ್ಕಿಸಿಕೊಳ್ಳುವುದರಲ್ಲಿ ಮಗ್ನರಾಗಿದ್ದಾರೆ.

ಪಶು ಸಂಗೋಪನೆ ಸಚಿವರಿಗೆ ಸನ್ಮಾನ




ನಂಜನಗೂಡು ತಾಲೂಕಿನ ಅರಿಯೂರು ಗ್ರಾಮದಲ್ಲಿ ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ಅವರನ್ನು ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್ ಕುಮಾರ್ ಸನ್ಮಾನಿಸಿದರು. ಈ ವೇಳೆ ಶಾಸಕ ದರ್ಶನ್, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ವಿಜಯ್ ಕುಮಾರ್ ಸೇರಿದಂತೆ ಇತರರಿದ್ದರು.

ಅಂಬೇಡ್ಕರ್ ಪ್ರತಿಮೆ ಗೋಪುರಕ್ಕೆ ಅನುದಾನ ಬಿಡುಗಡೆಗಾಗಿ ಶಾಸಕರಿಗೆ ಮನವಿ

ಹಿರೀಕ್ಯಾತನಹಳ್ಳಿ, ಜು.15– ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಪ್ರತಿಮೆಯ ಗೋಪುರಕ್ಕೆ ಅನುದಾನ ಬಿಡುಗಡೆ ಕೋರಿ ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಪುತ್ಥಳಿ ನಿರ್ಮಾಣ ಸಮಿತಿ ಮನವಿ ಸಲ್ಲಿಸಿತು.

ನಂತರ ಮಾತನಾಡಿದ ಅಂಬೇಡ್ಕರ್ ಪುತ್ಥಳಿಯ ಗೋಪುರ ನಿರ್ಮಾಣದ ಸಮಿತಿ ಅಧ್ಯಕ್ಷ ನಾಗರಾಜ್ ಮಲ್ಲಾಡಿ, ಗ್ರಾಮದಲ್ಲಿ 1 ಕೋಟಿಗೂ ಹೆಚ್ಚು ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವ ಅಂಬೇಡ್ಕರ್ ಪ್ರತಿಮೆಯ ಕಾಮಗಾರಿಗೆ ಶಾಸಕರು ಸರ್ಕಾರದಿಂದ ಮೂವತ್ತು ಲಕ್ಷ ಅನುದಾನ ಮಂಜೂರು ಮಾಡಿಸಿದ್ದು, ಈಗಾಗಲೇ 24 ಲಕ್ಷ ರೂ. ಬಿಡುಗಡೆಯಾಗಿದೆ. ಉಳಿದ 6 ಲಕ್ಷ ರೂ ಬಿಡುಗಡೆ ಮಾಡಿಸಲಿದ್ದಾರೆ ಎಂದರು. ಗೋಪುರದ ಪಕ್ಕ ಇರುವ ಹಳೆ ಕಟ್ಟಡ ನೆಲಸಮ ಮಾಡಿ, 50 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಪತ್ನಿ ದಿವಂಗತ ರಮಾಬಾಯಿ ಅವರ ಹೆಸರಿನಲ್ಲಿ ಹೈಟೆಕ್ ಗ್ರಂಥಾಲಯ ನಿರ್ಮಿಸಲಾಗುವುದು. ಜೊತೆಗೆ ಪಕ್ಕದಲ್ಲಿ ಬುದ್ಧನ ಪ್ರತಿಮೆಯನ್ನು ಸ್ಥಾಪಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪ್ರತಿಮೆ ನಿರ್ಮಾಣ ಸಮಿತಿಯ ಉಪಾಧ್ಯಕ್ಷ ನಿಂಗರಾಜ ಮಲ್ಲಾಡಿ, ಸಮಿತಿ ಸದಸ್ಯರಾದ ಶ್ರೀಧರ್, ಪುಟ್ಟರಾಜು, ನಟರಾಜು, ಸಂತೋಷ್, ಕುಮಾರ್, ರಾಜಸತ್ತಯ್ಯ, ಗ್ರಾಪಂ ಉಪಾಧ್ಯಕ್ಷ ದಿಲೀಪ್ ಇನ್ನಿತರರಿದ್ದರು.



ಕಟ್ಟೆಮಳಲವಾಡಿ ಗ್ರಾಮದ ಅಂಬೇಡ್ಕರ್ ಪ್ರತಿಮೆ ಗೋಪುರ ನಿರ್ಮಾಣ ಸಮಿತಿ ಸದಸ್ಯರು ಶಾಸಕ ಜಿ.ಡಿ.ಹರೀಶ್ ಗೌಡರಿಗೆ ಅನುದಾನ ಬಿಡುಗಡೆಗೆ ಮನವಿ ಸಲ್ಲಿಸಿದರು.

ಶ್ರೀಗುರುಮಲ್ಲೇಶ್ವರ ಮಹಿಳಾ ಸೊಸೈಟಿಗೆ 8.76ಲಕ್ಷ ಲಾಭ



ನಂಜನಗೂಡಿನ ಶ್ರೀ ಗುರುಮಲ್ಲೇಶ್ವರ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ಸೊಸೈಟಿಯ ವಾರ್ಷಿಕ ಮಹಾಸಭೆಯನ್ನು ಸೊಸೈಟಿ ಅಧ್ಯಕ್ಷೆ ನಂದಿನಿ ಮಹೇಶ್ ಉದ್ಘಾಟಿಸಿದರು.

ನಂಜನಗೂಡು, ಜು.15–ನಂಜನಗೂಡಿನ ಶ್ರೀಗುರುಮಲ್ಲೇಶ್ವರ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸೊಸೈಟಿಯು ಈ ಬಾರಿ 8.76 ಲಕ್ಷ ರೂ. ಲಾಭಗಳಿಸಿದೆ ಎಂದು ಸೊಸೈಟಿ ಅಧ್ಯಕ್ಷೆ ನಂದಿನಿ ಮಹೇಶ್ ಹೇಳಿದರು.

ನಗರದ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ಭಾನುವಾರ ನಡೆದ ಸೊಸೈಟಿಯ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಹಿಳೆಯರು ತಮ್ಮ ಕುಟುಂಬವನ್ನು ಮುನ್ನಡೆಸುವ ನಿಟ್ಟಿನಲ್ಲಿ ಆರ್ಥಿಕವಾಗಿ ಸಬಲರಾಗಬೇಕು ಎಂಬ ಕನಸಿನೊಂದಿಗೆ ಕಳೆದ 10 ವರ್ಷಗಳ ಹಿಂದೆ ತೆರೆಯಲಾದ ಈ ಸೊಸೈಟಿಯಲ್ಲಿ ಸಾವಿರಾರು ಮಹಿಳೆಯರು ಷೇರುದಾರರಾಗಿ ಸಾಲ ಪಡೆದು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ನೆರವಾಗುತ್ತಿದೆ. ಇದರಿಂದ ಮಹಿಳೆಯರು ಆರ್ಥಿಕ ಶಿಸ್ತು ಹಾಗೂ ಹಣ ಉಳಿತಾಯ ಮಾಡುವ ನಿಟ್ಟಿನಲ್ಲಿ ಜಾಗೃತರಾಗಿದ್ದಾರೆ ಎಂದರು.

ಸೊಸೈಟಿಯು ಕೇವಲ ಆರ್ಥಿಕ ವ್ಯವಹಾರವನ್ನಷ್ಟೇ ಮಾಡದೇ ಸಾಮಾಜಿಕ, ಆರೋಗ್ಯ ಹಾಗೂ ಶೈಕ್ಷಣಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಜಾಗೃತ ಸಮಾಜ ಕಟ್ಟುವಲ್ಲಿ ಶ್ರಮಿಸುತ್ತಿದೆ. ಸಂಘಕ್ಕೆ ಈಗಾಗಲೇ ಮಹದೇಶ್ವರ ಲೇಔಟ್ ಬಳಿ ಮುಡಾದಿಂದ ನಿವೇಶನ ಖರೀದಿ ಮಾಡಿದ್ದು, ಮುಂದಿನ ಆಡಳಿತ ಮಂಡಳಿಯಲ್ಲಿ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡುವ ಮೂಲಕ ಸ್ವಂತ ಕಾರ್ಯಾಲಯ ಹೊಂದುವ ಕಾಲ ಸನ್ನಿಹಿತವಾಗಿದೆ ಎಂದು ತಿಳಿಸಿದರು.

ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಅಂಬಿಕಾ ಹುಸ್ಕೂರು ಮಾತನಾಡಿ, ಎಲ್ಲಾ ಕಾಲಘಟ್ಟದಲ್ಲಿ ಮಹಿಳೆಯರನ್ನು ಅತ್ಯಂತ ತಾರತಮ್ಯವಾಗಿ ನಡೆಸಿಕೊಂಡಿರುವುದನ್ನು ಕಾಣಬಹುದಾಗಿದೆ. ಇದಕ್ಕಾಗಿ ಬಸವಾದಿ ಶರಣರು ಮಹಿಳೆಯರಿಗೆ ಸಮಾನ ಅವಕಾಶ ಹಾಗೂ ಗೌರವದಿಂದ ಕಾಣುವ ಮೂಲಕ ಮಹಿಳೆಯರೂ ಕೂಡ ಪುರುಷರಷ್ಟೇ ಸಮಾನರು ಎಂಬುದನ್ನು ಸಾರಿ ಹೇಳಿದ್ದಾರೆ. ಅವರ ಆಶಯದಂತೆ ಮಹಿಳೆಯರು ಕೂಡ ಎಲ್ಲಾ ರಂಗದಲ್ಲೂ ತಮ್ಮ ಛಾಪು ಮೂಡಿಸಿದ್ದಾರೆ. ಸಹಕಾರ ಕ್ಷೇತ್ರದಲ್ಲೂ ತಮ್ಮದೇ ಕಾರ್ಯಚಟುವಟಿಕೆಗಳ ಮೂಲಕ ಯಶಸ್ವಿಯಾಗಿದ್ದಾರೆ ಎಂದು ಹೇಳಿದರು.

ಸೊಸೈಟಿಯ ಮುಖ್ಯ ಕಾರ್ಯನಿರ್ವಾಹಕಿ ನೇತ್ರಾವತಿ ವಾರ್ಷಿಕ ಬಜೆಟ್ ಮಂಡನೆ ಮಾಡಿದರು. ಇದೇ ಸಂದರ್ಭ ಪ್ರಸಕ್ತ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕಾರ್ಯಕ್ರಮದಲ್ಲಿ ಸೊಸೈಟಿಯ ಉಪಾಧ್ಯಕ್ಷೆ ಉಷಾ, ನಿರ್ದೇಶಕರಾದ ಕೋಮಲ ಮಹಾಲಿಂಗಸ್ವಾಮಿ, ಗುಣವತಿ, ಭ್ರಮರಾಂಬಿಕಾ, ಸುಜಾತ, ಶ್ರೀಧರಿ, ಚೈತ್ರ, ಶಿವಮ್ಮ ಉಪಸ್ಥಿತರಿದ್ದರು.

ಬೆನಕನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಮಂಜುಳಾ ಶಿವಸ್ವಾಮಿ



ತಿ.ನರಸೀಪುರ ತಾಲೂಕಿನ ಬೆನಕನಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಮಂಜುಳಾ ಶಿವಸ್ವಾಮಿ, ಉಪಾಧ್ಯಕ್ಷರಾಗಿ ಸಿ.ಎಂ.ಮಮತಾ ಅವರು ಸೋಮವಾರ ನಡೆದ ಚುನಾವಣೆಯಲ್ಲಿ ಆಯ್ಕೆಗೊಂಡರು.

ತಿ.ನರಸೀಪುರ.ಜು.15– ತಾಲೂಕಿನ ಬೆನಕನಹಳ್ಳಿ ಗ್ರಾಪಂ ನೂತನ ಅಧ್ಯಕ್ಷರಾಗಿ ಮಂಜುಳಾ ಶಿವಸ್ವಾಮಿ, ಉಪಾಧ್ಯಕ್ಷರಾಗಿ ಸಿ.ಎಂ. ಮಮತಾ ಆಯ್ಕೆಗೊಂಡರು.

ಗ್ರಾಪಂನ ಹಿಂದಿನ ಅಧ್ಯಕ್ಷ ಮಂಟೇಲಿಂಗ, ಉಪಾಧ್ಯಕ್ಷೆ ಎಸ್.ದೀಪ ಆಂತರಿಕ ಒಪ್ಪಂದದಂತೆ ರಾಜೀನಾಮೆ ನೀಡಿದ್ದರಿಂದ ತೆರವಾದ ಸ್ಥಾನಗಳಿಗೆ ಚುನಾವಣೆ ನಿಗದಿಯಾಗಿತ್ತು. ಪರಿಶಿಷ್ಟ ಜಾತಿಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಮಂಜುಳ ಶಿವಸ್ವಾಮಿ ಮತ್ತು ಗಂಗಾಧರಸ್ವಾಮಿ, ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಸಿ.ಎಂ.ಮಮತಾ ಹಾಗೂ ಜ್ಯೋತಿ ನಾಮಪತ್ರ ಸಲ್ಲಿಸಿದ್ದರು.

ನಂತರ ನಡೆದ ಚುನಾವಣೆಯಲ್ಲಿ ತಲಾ 9 ಮತಗಳನ್ನು ಪಡೆದುಕೊಂಡ ಮಂಜುಳ ಶಿವಸ್ವಾಮಿ ಅಧ್ಯಕ್ಷೆಯಾಗಿ, ಸಿ.ಎಂ.ಮಮತಾ ಉಪಾಧ್ಯಕ್ಷೆಯಾಗಿ ಚುನಾಯಿತರಾದರು. ತಲಾ 6 ಮತಗಳನ್ನು ಪಡೆದ ಗಂಗಾಧರಸ್ವಾಮಿ ಹಾಗೂ ಜ್ಯೋತಿ ಪರಾಭವಗೊಂಡರು. ಚುನಾವಣೆ ಸಭೆಯಲ್ಲಿ ಪಂಚಾಯಿತಿಯ 15 ಮಂದಿ ಸದಸ್ಯರು ಭಾಗವಹಿಸಿದ್ದರು.

ಚುನಾವಣಾಧಿಕಾರಿಯಾಗಿ ಜಿಪಂ ಎಇಇ ಚರಿತ, ಸಹಾಯಕ ಚುನಾವಣಾಧಿಕಾರಿಯಾಗಿ ನಾಗರಾಜು ಕಾರ್ಯನಿರ್ವಹಿಸಿದರು. ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ಅಧ್ಯಕ್ಷ, ಉಪಾಧ್ಯಕ್ಷರ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಈ ವೇಳೆ ತಾಲೂಕು ಎಸ್ಸಿ/ಎಸ್ಟಿ ಹಿತರಕ್ಷಣಾ ಸಮಿತಿ ಸದಸ್ಯ ಸೋಸಲೆ ಮಹದೇವಸ್ವಾಮಿ, ಪಂಚಾಯಿತಿ ಸದಸ್ಯ ಕಾರ್ ಮಲ್ಲಪ್ಪ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದರು.

ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ, ತಾಪಂ ಮಾಜಿ ಅಧ್ಯಕ್ಷ ಬೆ.ಗು.ಶಿವಸ್ವಾಮಿ, ಗ್ರಾ.ಪಂ ಸದಸ್ಯರಾದ ಚೆನ್ನಮಲ್ಲಿಕಾರ್ಜುನಸ್ವಾಮಿ(ಮಲ್ಲಪ್ಪ), ಗೌರಮ್ಮ, ಗಂಗಾಧರಸ್ವಾಮಿ, ರಶ್ಮಿ, ಬಿ.ಮಧುಕುಮಾರ್, ಪರಿಮಳ, ವಿ.ಪ್ರಮೋದ್, ಆರ್.ಲೋಕೇಶ್, ಪಿಡಿಓ ಜಿ.ಗಾಯತ್ರಿ, ಕಾರ್ಯದರ್ಶಿ ಸತೀಶ್ ಕುಮಾರ್, ಮಾಜಿ ಸದಸ್ಯ ಸುನೀಲ್, ಮುಖಂಡರಾದ ರಾಜಣ್ಣ, ರಾಜು, ಜೆಎಸ್‌ಎಸ್ ಸಂತೋಷ್ ಇನ್ನಿತರರು ಹಾಜರಿದ್ದರು.

ಹುಣಸೂರು ವೀರಶೈವ ಮಹಾಸಭಾಗೆ ಸೋಮಶೇಖರ್ ಅಧ್ಯಕ್ಷ



ಅಖಿಲ ಭಾರತ ವೀರಶೈವ ಮಹಾಸಭಾ ಹುಣಸೂರು ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಎಸ್.ಸೋಮಶೇಖರ್ ಅವಿರೋಧವಾಗಿ ಆಯ್ಕೆಯಾದರು.

ಹುಣಸೂರು, ಜು.15– ಅಖಿಲ ಭಾರತ ವೀರಶೈವ ಮಹಾಸಭಾ ಹುಣಸೂರು ತಾಲೂಕು ಘಟಕದ ನೂತನ ಅಧ್ಯಕ್ಷರಾಗಿ ಎಸ್.ಸೋಮಶೇಖರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮಹಾಸಭಾ ಕಾರ್ಯಕಾರಿ ಸಮಿತಿ ಸದಸ್ಯರಾಗಿ ರಮೇಶ್‌ಕುಮಾರ್, ಭಾಗ್ಯ, ದೇವರಾಜು, ಜಯಣ್ಣ, ಎಂ.ಆರ್.ಜಗದೀಶ್, ಸೋಮಣ್ಣ, ಕೆ.ಸಿ.ಮಹದೇವಪ್ಪ, ಪರಮೇಶ, ಹೆಚ್.ಬಿ.ಶೇಖರಾಜು, ಚಂದ್ರಶೇಖರ್, ಲೋಕೇಶ್. ಬಿ.ಹೆಚ್.ಪುಟ್ಟನಿಂಗಪ್ಪ, ಪರಮೇಶ್, ಮಹಿಳಾ ನಿರ್ದೇಶಕರ ಸ್ಥಾನಕ್ಕೆ ಬಸಮ್ಮಣ್ಣಿ, ಎಂ.ಸುಮಿತ್ರ, ವಿನೋದ, ಭಾಗ್ಯ, ವಿ.ರಾಣಿ, ಗೌರಮ್ಮ ಮತ್ತು ಎಸ್.ಆರ್. ಮಂಜುಳ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಮೋದೂರು ಮಹೇಶಾರಾಧ್ಯ ಘೋಷಿಸಿದ್ದಾರೆ.

ರೋಟರಿ ಕ್ಲಬ್ ಅಧ್ಯಕ್ಷರಾಗಿ ರೂಪೇಶ್‌ಕುಮಾರ್ ಪದಗ್ರಹಣ



ನಂಜನಗೂಡು ರೋಟರಿ ಕ್ಲಬ್‌ನ ನೂತನ ಅಧ್ಯಕ್ಷರಾಗಿ ಪಿ.ಎಚ್.ರೂಪೇಶ್‌ಕುಮಾರ್ ಪದಗ್ರಹಣ ಮಾಡಿದರು.

ನಂಜನಗೂಡು, ಜು.15– ನಂಜನಗೂಡು ರೋಟರಿ ಕ್ಲಬ್‌ನ ನೂತನ ಅಧ್ಯಕ್ಷರಾಗಿ ಪಿ.ಎಚ್.ರೂಪೇಶ್‌ಕುಮಾರ್ ಕಾರ್ಯದರ್ಶಿಯಾಗಿ ಡಾ.ಧರ್ಮರಾಜ್ ಅಧಿಕಾರ ಸ್ವೀಕರಿಸಿದರು.

ನಗರದ ಯಾತ್ರೀ ಭವನ ಕಲ್ಯಾಣ ಮಂಟಪದಲ್ಲಿ ನಡೆದ ಪದಗ್ರಹಣ ಕಾರ್ಯಕ್ರಮದಲ್ಲಿ ನಿಯೋಜಿತ ಗೌರ್ನರ್ ಪಿ.ಕೆ.ರಾಮಕೃಷ್ಣ ನಿರ್ಗಮಿತ ಅಧ್ಯಕ್ಷ ರಮೇಶ್‌ರವರಿಂದ ನೂತನ ಅಧ್ಯಕ್ಷ ರೂಪೇಶ್ ಕುಮಾರ್‌ರವರಿಗೆ ಪದವಿ ಹಸ್ತಾಂತರಿಸಿದರು. ನೂತನ ಅಧ್ಯಕ್ಷ ರೂಪೇಶ್ ಕುಮಾರ್ ಮಾತನಾಡಿ, ಮುಂದಿನ ದಿನಗಳಲ್ಲಿ ಹಿರಿಯ ನಾಗರಿಕರ ಶ್ರೇಯೋಭಿವೃದ್ಧಿಗಾಗಿ ಸಂಧ್ಯಾ ಸುರಕ್ಷ ಕಾರ್ಯಕ್ರಮ ರೂಪಿಸುತ್ತೇನೆ. ಬಡವರಿಗೆ ನೆರವಾಗುವಂತಹ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗುವುದು, ಸಮಾಜದ ಏಳಿಗೆ ಹಿತದೃಷ್ಟಿಯಿಂದ ಮದ್ಯವ್ಯಸನಿಗಳನ್ನು ಕುಡಿತದ ಚಟ ಬಿಡಿಸುವಂತಹ ಶಿಬಿರಗಳ ಆಯೋಜನೆ, ಕ್ಯಾನ್ಸರ್ ತಡೆಗಟ್ಟುವ ಬಗ್ಗೆ ಜಾಗೃತಿ ಕಾರ್ಯಕ್ರಮ, ಶುದ್ಧ ಕುಡಿಯುವ ನೀರಿನ ಘಟಕ, ಅಂಗನವಾಡಿಗಳ ಅಭಿವೃದ್ಧಿ, ನಿರುದ್ಯೋಗ ಹೋಗಲಾಡಿಸುವ ಸಲುವಾಗಿ ಕೌಶಲ ಅಭಿವೃದ್ಧಿ ಚಟುವಟಿಕೆಗಳ ಆಯೋಜನೆ, ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸುವುದು, ಮುಖ್ಯವಾಗಿ ಇಂದಿನ ಯುವ ಪೀಳಿಗೆ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದು ಅದನ್ನು ದೂರ ಮಾಡುವ ಸಲುವಾಗಿ ಮಾನಸಿಕ ಆರೋಗ್ಯ ಕಾರ್ಯಕ್ರಮ ರೂಪಿಸುವುದು ಸೇರಿದಂತೆ ಶಿಕ್ಷಣಕ್ಕೆ ನೆರವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಿ ಸೇವೆ ಮಾಡುತ್ತೇನೆ ಎಂದರು.

ಗೌರ್ನರ್ ರಾಮಕೃಷ್ಣ, ರೋಟರಿ ಸಂಸ್ಥೆಯ ಮೂಲಕ ಬಡವರಿಗೆ, ಅಂಗವಿಕಲರಿಗೆ, ಶಿಕ್ಷಣಕ್ಕೆ ನೆರವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಿ ಸಮುದಾಯದ ಜನರಿಗೆ ಸೇವೆ ಒದಗಿಸಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಅತಿ ಹೆಚ್ಚು ಅಂಕ ಪಡೆದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ದಳವಾಯಿ ಶಾಲೆಗೆ 250 ಊಟದ ತಟ್ಟೆಗಳನ್ನು ಕೊಡುಗೆಯಾಗಿ ವಿತರಿಸಲಾಯಿತು.

ಸಮಾರಂಭದಲ್ಲಿ ಕಾರ್ಯದರ್ಶಿ ಡಾ.ಧರ್ಮರಾಜ್, ರೋಟರಿ ಕ್ಲಬ್ ಸದಸ್ಯರಾದ ರಮೇಶ್, ಸಿ.ಪ್ರಕಾಶ್‌ಚಂದ್ ಜೈನ್, ಶ್ರೀಕಂಠಪ್ರಸಾದ್, ಡಾ.ಶ್ರೀಕಾಂತ್, ಕೆ.ಜಿ.ಮಹೇಶ್, ಕೆ.ಜಿ.ರಾಮಚಂದ್ರ, ಮುರಳಿಧರನ್, ಕೆ.ಎ.ಪುಟ್ಟರಾಜು, ಎಂ.ರಾಜಶೇಖರಮೂರ್ತಿ, ಕೃಷ್ಣಮೂರ್ತಿ, ಶಿವಾನಂದ, ವಿಜಯಶಂಕರ್, ಧೀರಜ್‌ಕುಮಾರ್, ಕನಕರಾಜು, ಪಿ.ಶ್ರೀನಿವಾಸರೆಡ್ಡಿ, ಸುರೇಂದ್ರ, ಎನ್.ಚಂದ್ರು, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಕಲ್ಯಾಣಮ್ಮ ನಿಧನ



ಹುಣಸೂರು, ಜು.15– ಕಾಂಗ್ರೆಸ್ ಯುವ ಮುಖಂಡ ಹಾಗೂ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಗಾಗೇನಹಳ್ಳಿ ಕುಮಾರ್‌ರವರ ತಾಯಿ ಕಲ್ಯಾಣಮ್ಮ (85) ಇಂದು ಸಂಜೆ ನಿಧನರಾದರು.

ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಾಳೆ (ಮಂಗಳವಾರ) ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ರಾಜ್ಯಸಭೆಯಲ್ಲಿ ಬಿಜೆಪಿ ಸ್ಥಾನ ಇಳಿಕೆ: ಮೇಲ್ಮನೆಯ 11 ಸ್ಥಾನಗಳಿಗೆ ಶೀಘ್ರ ಚುನಾವಣೆ

ನವದೆಹಲಿ: ಹಲವು ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ರಾಜ್ಯಸಭೆಯಲ್ಲಿ ಬಿಜೆಪಿಯ ಸಂಖ್ಯೆ 86ಕ್ಕೆ ಇಳಿಕೆ ಕಂಡಿದೆ. ಲೋಕಸಭೆ ಚುನಾವಣೆಯಲ್ಲಿ ಹಲವರು ಆಯ್ಕೆಯಾದ ಬಳಿಕ ಮೇಲ್ಮನೆಗೆ ರಾಜೀನಾಮೆ ನೀಡಿದ್ದಾರೆ.



ರಾಜ್ಯಸಭೆಯ ಪ್ರಸ್ತುತ ಸಂಖ್ಯಾಬಲ 226 ಆಗಿದ್ದು, ಅದರಲ್ಲಿ ಬಿಜೆಪಿ 86, ಕಾಂಗ್ರೆಸ್ 26 ಮತ್ತು ತೃಣಮೂಲ ಕಾಂಗ್ರೆಸ್ (ಟಿಎಂಸಿ) 13 ಸ್ಥಾನಗಳನ್ನು ಹೊಂದಿವೆ. ಸದ್ಯ 19 ಸ್ಥಾನಗಳು ಖಾಲಿ ಇವೆ. ಇದರಲ್ಲಿ 4 ಜನರನ್ನು ರಾಷ್ಟ್ರಪತಿಗಳು ನೇರವಾಗಿ ಆಯ್ಕೆ ಮಾಡುತ್ತಾರೆ. ಇನ್ನು 4 ಸ್ಥಾನಗಳು ಜಮ್ಮು- ಕಾಶ್ಮೀರಕ್ಕೆ ಸೇರಿದ್ದಾಗಿವೆ. ಕಾಶ್ಮೀರ ಸದ್ಯ ರಾಜ್ಯ ಸ್ಥಾನಮಾನ ಹೊಂದಿಲ್ಲದ ಕಾರಣ, ಚುನಾವಣೆ ನಡೆಯುತ್ತಿಲ್ಲ. ಹೀಗಾಗಿ 11 ಸ್ಥಾನಗಳಿಗೆ ಮಾತ್ರ ಚುನಾವಣಾ ಆಯೋಗ ಶೀಘ್ರವೇ ಚುನಾವಣೆ ನಡೆಸಬೇಕಿದೆ.

ಬಿಜೆಪಿಗೆ ಸೀಟು ಹೆಚ್ಚುವ ಭರವಸೆ: ರಾಜ್ಯಸಭೆಯಲ್ಲಿ ಬಿಜೆಪಿಯ ಸ್ಥಾನಗಳು ಸದ್ಯ ಇಳಿದರೂ, ಮುಂದಿನ ದಿನಗಳಲ್ಲಿ ನಡೆಯುವ ಚುನಾವಣೆಯಲ್ಲಿ ಗೆಲುವು ಸಾಧಿಸುವ ಭರವಸೆ ಇದೆ. ಹಲವು ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಕಾರಣ ತನ್ನ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವ ಬಗ್ಗೆ ಪಕ್ಷ ಯೋಜನೆ ರೂಪಿಸಿದೆ.

ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಬಿಹಾರ, ಮಹಾರಾಷ್ಟ್ರ ಮತ್ತು ಅಸ್ಸಾಂನಲ್ಲಿ ತಲಾ ಎರಡು ಮತ್ತು ಹರಿಯಾಣ, ಮಧ್ಯ ಪ್ರದೇಶ, ರಾಜಸ್ಥಾನ ಮತ್ತು ತ್ರಿಪುರದಲ್ಲಿ ತಲಾ ಒಂದು ಸ್ಥಾನಗಳನ್ನು ಗೆಲ್ಲುವ ವಿಶ್ವಾಸದಲ್ಲಿದೆ. ನಾಲ್ಕು ನಾಮನಿರ್ದೇಶಿತ ಸದಸ್ಯರನ್ನು ಹೊಸದಾಗಿ ನೇಮಿಸಬೇಕಿದೆ. ಸಹಜವಾಗಿ ನಾಮನಿರ್ದೇಶಿತ ಸದಸ್ಯರು ಸದನದಲ್ಲಿ ಸ್ವತಂತ್ರರಾಗಿದ್ದರೂ, ಸಾಂಪ್ರದಾಯಿಕವಾಗಿ ತಮ್ಮನ್ನು ಆಯ್ಕೆ ಮಾಡುವ ಸರ್ಕಾರವನ್ನು ಬೆಂಬಲಿಸುತ್ತಾರೆ. ಹೀಗಾಗಿ ಸರ್ಕಾರಕ್ಕೆ ಮೇಲ್ಮನೆಯಲ್ಲಿ ಸಹಜವಾಗಿ ಬಹುಮತವಿರಲಿದೆ.

ಕಾಂಗ್ರೆಸ್‌ಗೆ ಪ್ಲಸ್-ಮೈನಸ್: ಕಾಂಗ್ರೆಸ್ ಪಕ್ಷವು ರಾಜಸ್ಥಾನದಲ್ಲಿ ಸ್ಥಾನ ಕಳೆದುಕೊಂಡರೆ, ತೆಲಂಗಾಣದಲ್ಲಿ ಪಡೆದುಕೊಳ್ಳಲಿದೆ. ರಾಜಸ್ಥಾನದಿಂದ ರಾಜ್ಯಸಭೆಗೆ ಪ್ರತಿನಿಧಿಸುತ್ತಿದ್ದ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ. ಹೀಗಾಗಿ ಅವರು ಮೇಲ್ಮನೆಗೆ ರಾಜೀನಾಮೆ ನೀಡಿದ್ದಾರೆ. ರಾಜ್ಯದಲ್ಲಿ ಬಹುಮತ ಹೊಂದಿರುವ ಪಕ್ಷವು ಸ್ಥಾನವನ್ನು ತನ್ನದಾಗಿಸಿಕೊಳ್ಳಲಿದೆ.

ತೆಲಂಗಾಣದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಒಂದು ಸ್ಥಾನವನ್ನು ಪಡೆದುಕೊಳ್ಳುವ ಸಾಧ್ಯತೆ ಇದೆ. ಇತ್ತ ಹರಿಯಾಣದಲ್ಲಿ ಕಾಂಗ್ರೆಸ್ ರಾಜ್ಯಸಭಾ ಸಂಸದ ದೀಪೇಂದರ್ ಸಿಂಗ್ ಹೂಡಾ ಲೋಕಸಭೆಗೆ ಆಯ್ಕೆಯಾಗಿದ್ದು, ತೆರವಾದ ಸ್ಥಾನವನ್ನು ಬಿಜೆಪಿ ಗೆಲ್ಲುವ ವಿಶ್ವಾಸದಲ್ಲಿದೆ.

11 ಸ್ಥಾನ ತೆರವು: ಈಚೆಗೆ ಮುಗಿದ ಲೋಕಸಭೆ ಚುನಾವಣೆಯಲ್ಲಿ 10 ರಾಜ್ಯಸಭೆ ಸದಸ್ಯರು ಸ್ಪರ್ಧಿಸಿ ಗೆಲುವು ಸಾಧಿಸಿದ್ದರೆ, ಬಿಆರ್‌ಎಸ್‌ನ ಕೇಶವ್‌ರಾವ್ ಅವರು ಕಾಂಗ್ರೆಸ್ ಸೇರಿದ್ದಾರೆ. ಇದರಿಂದ ಒಟ್ಟು 11 ಸ್ಥಾನಗಳು ತೆರವಾಗಿವೆ. ಚುನಾವಣಾ ಆಯೋಗವು ಈ ಸ್ಥಾನಗಳಿಗೆ ಶೀಘ್ರದಲ್ಲೇ ಚುನಾವಣಾ ದಿನಾಂಕ ಘೋಷಿಸಲಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಇಂಡಿಯನ್ 2 (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹಿಂದೂಸ್ತಾನಿ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಇಂಡಿಯನ್ 2 (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಇಂಡಿಯನ್ 2 (ತ)	4 ಪ್ರದರ್ಶನಗಳು
ರಾಜಕಮಲ್	
ಸರ್ಫಿರಾ (ಹಿಂ)	4 ಪ್ರದರ್ಶನಗಳು
ಸಂಗಂ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಲಿಡೋ	
ಶಾಸ್ತ್ರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಇಂಡಿಯನ್ 2 (ತ)	4 ಪ್ರದರ್ಶನಗಳು
ಪ್ರಭಾ	
ಜಾಕಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ತೆ): ಬೆ.9.35ಕ್ಕೆ, ಇಂಡಿಯನ್ 2 (ತ): ಮ.1ಕ್ಕೆ, ಇನ್‌ಸೈಡ್ ಔಟ್ 2 (3ಡಿ)(ಇಂ): ಸಂ.4.35ಕ್ಕೆ, ಕಲ್ಕಿ 2898 ಎಡಿ (ಕ): ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸರ್ಫಿರಾ (ಹಿಂ): ಬೆ.9.45ಕ್ಕೆ, ಮ.12.50ಕ್ಕೆ, ರಾ.7.20ಕ್ಕೆ, ರಾ.10.20ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.55ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಬೆ.9.30ಕ್ಕೆ, ಮ.12.55ಕ್ಕೆ, ಫ್ಲೈ ಮಿ ಟು ದಿ ಮೂನ್ (ಇಂ): ಸಂ.4.20ಕ್ಕೆ, ರಾ.10.25ಕ್ಕೆ, ಕಲ್ಕಿ 2898 ಎಡಿ (3ಡಿ) (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.9.25ಕ್ಕೆ, ಮ.3.10ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಡೆಸ್ಪಿಕಬಲ್ ಮಿ 4 (3ಡಿ) (ಇಂ): ಮ.1ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ಹಿಂ): ಬೆ.11.15ಕ್ಕೆ, ಸಂ.6.45ಕ್ಕೆ, ಕಲ್ಕಿ 2898 ಎಡಿ (3ಡಿ) (ತೆ): ಮ.3ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.10.15ಕ್ಕೆ, ಮ.2ಕ್ಕೆ, ಸಂ.5.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ತೆ): ಬೆ.10.45ಕ್ಕೆ, ಸಂ.6.15ಕ್ಕೆ, ಕಲ್ಕಿ 2898 ಎಡಿ (ಹಿಂ): ಮ.2.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.10.40ಕ್ಕೆ, ಮ.3.20ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಕಿಲ್ (ಹಿಂ): ಮ.12.55ಕ್ಕೆ, ಸಂ.5.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಕಲ್ಕಿ 2898 ಎಡಿ (ಕ): ಬೆ.10.30ಕ್ಕೆ, ಸಂ.6ಕ್ಕೆ, ಲವ್ ಲಿ (ಕ): ಮ.1.55ಕ್ಕೆ.
ಸ್ಕ್ರೀನ್ 2	ಇಂಡಿಯನ್ 2 (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ)(ತೆ): ಬೆ.11.10ಕ್ಕೆ, ಮ.2.40ಕ್ಕೆ, ಇಂಡಿಯನ್ 2 (ತ): ಸಂ.6.05ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಇಂಡಿಯನ್ 2 (ತ): ಬೆ.10ಕ್ಕೆ, ಕಲ್ಕಿ 2898 ಎಡಿ (ಕ): ಮ.1.25ಕ್ಕೆ, ರಾ.7.45ಕ್ಕೆ, ಖಾಲಿ ಕುಡುಕರು (ಕ): ಸಂ.4.50ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕಣಿಯನಹುಂಡಿ ರೈತರು ರೈತ ಕಲ್ಯಾಣ ಸಂಘಕ್ಕೆ ಸೇರ್ಪಡೆ



ಎಚ್.ಡಿ.ಕೋಟೆ ತಾಲೂಕಿನ ಕಣಿಯನಹುಂಡಿ ಗ್ರಾಮದ ಹಲವು ರೈತರು ರೈತ ಕಲ್ಯಾಣ ಸಂಘದ ಕಾಯಕ, ಸಿದ್ಧಾಂತಗಳನ್ನು ಒಪ್ಪಿ, ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಅಧ್ಯಕ್ಷತೆಯಲ್ಲಿ ಸಂಘಕ್ಕೆ ಸೇರ್ಪಡೆಯಾದರು.

ಗುಜರಾತ್‌ನಲ್ಲಿ ಅಪಘಾತ: 6 ಮಂದಿ ದುರ್ಮರಣ

ಆನಂದ್ (ಗುಜರಾತ್): ಗುಜರಾತ್‌ನ ಆನಂದ್ ಬಳಿ ಬಸ್‌ಗೆ ಲಾರಿಯೊಂದು ಡಿಕ್ಕಿ ಹೊಡೆದಿದ್ದು, ಘಟನೆಯಲ್ಲಿ 6 ಮಂದಿ ದುರ್ಮರಣವನ್ನಪ್ಪಿರುವ ಘಟನೆ ಅಹಮದಾಬಾದ್-ವಡೋದರಾ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಸೋಮವಾರ ನಡೆದಿದೆ.

ಇಂದು ಬೆಳಿಗ್ಗೆ 4.30ರ ಸುಮಾರಿಗೆ ಐಷಾರಾಮಿ ಬಸ್‌ಗೆ ಲಾರಿ ಡಿಕ್ಕಿ ಹೊಡೆದಿದೆ. 3 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇನ್ನೂ ಮೂವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಬಸ್ ಮಹಾರಾಷ್ಟ್ರದಿಂದ ರಾಜಸ್ಥಾನಕ್ಕೆ ಹೋಗುತ್ತಿತ್ತು. ಆನಂದ್ ಬಳಿ ಬಸ್ ಪಂಕ್ಚರ್ ಆಗಿತ್ತು. ಇದರಿಂದಾಗಿ ಬಸ್ಸಿನ ಚಾಲಕ ಹಾಗೂ ಪ್ರಯಾಣಿಕರು ಬಸ್ಸಿನಿಂದ ಕೆಳಗಿಳಿದು ನಿಂತಿದ್ದರು. ಈ ವೇಳೆ ಹಿಂದಿನಿಂದ ಬಂದ ಲಾರಿಯೊಂದು ಬಸ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಥಳದಲ್ಲಿಯೇ ಮೂವರು ಸಾವನ್ನಪ್ಪಿ, 8 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಜನಪ್ರತಿನಿಧಿಗಳಾದವರು ಜನರ ಕಷ್ಟಗಳಿಗೆ ಸ್ಪಂದಿಸಬೇಕು

ಮೈಸೂರು, ಜು.15- ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ ಅವರ ಹುಟ್ಟುಹಬ್ಬವನ್ನು ಉಚಿತ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸುವ ಮೂಲಕ ಜೆ.ಗೋಪಿ ಸ್ನೇಹ ಬಳಗದ ವತಿಯಿಂದ ತೊಣಚಿಕೊಪ್ಪಲು ಜನತಾ ನಗರದ ಗಣೇಶ್ ಭಂಡಾರ ಬಳಿ ಅರ್ಥ ಪೂರ್ಣವಾಗಿ ಆಚರಿಸಲಾಯಿತು.

ಈ ವೇಳೆ ಮಾಜಿ ಶಾಸಕ ಎಂ.ಕೆ ಸೋಮಶೇಖರ್ ಮಾತನಾಡಿ, ಗೋಪಿ ಅವರು ಪಾಲಿಕೆ ಸದಸ್ಯರಾಗಿ ವಾರ್ಡಿನಲ್ಲಿ ಜನಮನ್ನಣೆ ಗಳಿಸಿದ್ದರು. ಸದಾ ಜನರ ಮಧ್ಯೆ ಇದ್ದು ಬಡಾವಣೆಯಲ್ಲಿ ಯಾವುದೇ ಸಮಸ್ಯೆ ಬಂದರೂ ತಕ್ಷಣ ಕಾರ್ಯೋನ್ಮುಖರಾಗಿ ಪರಿಹಾರ ನೀಡುತ್ತಾರೆ. ಇವತ್ತಿನ ದಿನ ರಾಜಕಾರಣ ಎನ್ನುವಂತದ್ದು ಒಂದು ಫ್ಯಾಷನ್ ಆಗಿ ಬಿಟ್ಟಿದೆ. ಕೇವಲ ಪ್ರಚಾರಕ್ಕಾಗಿ ರಾಜಕಾರಣಕ್ಕೆ ಬಂದರೆ ಹೆಚ್ಚು ದಿನ ಉಳಿಯಲು ಸಾಧ್ಯವಿಲ್ಲ. ಬದಲಾಗಿ ಜನರ ಮಧ್ಯೆ ಇದ್ದು ಜನರ ಕಷ್ಟ ಸುಖಗಳಲ್ಲಿ ಸ್ಪಂದಿಸಬೇಕು. ಆಗ ಮಾತ್ರ ಒಬ್ಬ ಉತ್ತಮ ಜನಪ್ರತಿನಿಧಿಯಾಗಲು ಸಾಧ್ಯ. ರಾಜಕಾರಣದ ಜೊತೆ ಜೊತೆಗೆ ವೈಯಕ್ತಿಕ ಬದುಕಿಗೂ ಆದ್ಯತೆ ನೀಡಬೇಕು. ದೇಶ, ರಾಜ್ಯದ ವಿದ್ಯಮಾನಗಳನ್ನು ಅರಿಯಬೇಕು. ಮಾನವೀಯತೆಯನ್ನು ಅಂತರ್ಗತ ಮಾಡಿಕೊಳ್ಳಬೇಕು. ಆಗ ಮಾತ್ರ ಯಶಸ್ವಿ ರಾಜಕಾರಣಿಯಾಗಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಜೆ.ಗೋಪಿ ಸ್ನೇಹ ಬಳಗದ ಅಧ್ಯಕ್ಷ ಬಿ.ರಾಜು, ಉಪಾಧ್ಯಕ್ಷ ಕೆಂಚಪ್ಪ, ವಿ ಬಸವರಾಜು, ತಮ್ಮಣ್ಣ, ದನಿ ಬೀರಯ್ಯ, ಬಿ ಜಗದೀಶ್, ಪರಮೇಶ್ ಕೆಂಪನಂಜಯ್ಯ, ಜೆ.ಮಹೇಶ್, ಚಿನ್ನದಗುಡಿ ಹುಂಡಿ ಸೋಮು, ಲಖನ್, ರಾಜೇಶ್, ಕೋಟೆ ಹುಂಡಿ ಬೀರಲಿಂಗಯ್ಯ, ಮಹೇಶ್, ಅಶೋಕ್, ಗಿರೀಶ್, ಸಿದ್ದರಾಮು, ಫಾರೂಖ್ ಮತ್ತಿತರರು ಉಪಸ್ಥಿತರಿದ್ದರು.



ಆರೋಗ್ಯ ತಪಾಸಣೆ ಶಿಬಿರದಲ್ಲಿ ಮಾಜಿ ಶಾಸಕ ಎಂ.ಸೋಮಶೇಖರ್ ಅವರನ್ನು ಕಾಣಬಹುದು.

ಪರಿಸರ, ನಗರ ಸೌಂದರ್ಯ, ಸಂಚಾರ ನಿಯಮ ಪಾಲನೆಯಲ್ಲಿ ಹುಬ್ಬಳ್ಳಿ-ಧಾರವಾಡಕ್ಕಿಂತ ಮೈಸೂರು ಉತ್ತಮ

ಧಾರವಾಡ ಐಐಟಿಯ ಗೌರವ ಪ್ರಾಧ್ಯಾಪಕ ಪ್ರೊ.ಎಂ.ಎಸ್.ಶಿವಪ್ರಸಾದ್ ಅಭಿಮತ

ಮೈಸೂರು, ಜು.15(ಎಸ್‌ಪಿಎನ್)- ನಾವು ವಾಸಿಸುವ ಪರಿಸರ, ನಗರದ ಸೌಂದರ್ಯ ಹಾಗೂ ಸಂಚಾರ ನಿಯಮ ಪಾಲನೆಯಲ್ಲಿ ಉತ್ತಮವಾಗಿರಬೇಕು. ಈ ಅಂಶಗಳ ಅನುಷ್ಠಾನದಲ್ಲಿ ಮೈಸೂರು ನಗರ, ಹುಬ್ಬಳ್ಳಿ-ಧಾರವಾಡಕ್ಕಿಂತಲೂ ಉತ್ತಮವಾಗಿದೆ ಎಂದು ಧಾರವಾಡದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ(ಐಐಟಿ) ಸಂಸ್ಥೆಯ ಡೀನ್ ಮತ್ತು ಗೌರವ ಪ್ರಾಧ್ಯಾಪಕ ಪ್ರೊ.ಎಂ.ಎಸ್. ಶಿವಪ್ರಸಾದ್ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರದಲ್ಲಿರುವ ಸುರುಚಿ ರಂಗಮನೆಯಲ್ಲಿ ಕಲಾ ಸುರುಚಿ, ಕುತೂಹಲಿ ಕನ್ನಡ ಹಾಗೂ ದಿ ಅಕಾಡೆಮಿ ಟ್ರಸ್ಟ್ ಸಹಯೋಗದೊಂದಿಗೆ 'ಸೈನ್ಸ್ ಸಂಜೆ' ಶೀರ್ಷಿಕೆಯಡಿ ಆಯೋಜಿಸಿದ್ದ 'ಸೂಪರ್ ಸೌರಕೋಶ ಹಾಗೂ ಎಲ್‌ಇಡಿ ನ್ಯಾನೊ ಜಗತ್ತಿನಲ್ಲಿ ಹುಡುಕಾಟ' ವಿಷಯ ಕುರಿತು ಮಾತನಾಡಿದರು. ಕಲೆ, ಸಾಹಿತ್ಯ, ವಿಜ್ಞಾನ ಆವಿಷ್ಕಾರಗಳ ಚರ್ಚೆ, ಸಾಂಸ್ಕೃತಿಕ ಸ್ಥಾನ ಪಲ್ಲಟಗಳ ಕುರಿತು ಮೈಸೂರು, ಹುಬ್ಬಳ್ಳಿ-ಧಾರವಾಡ ನಗರದಲ್ಲಿ ಆರೋಗ್ಯಕರ ಚರ್ಚೆಯಾಗುತ್ತವೆ. ಇಂತಹ ಯಾವುದೇ ವಿಷಯಗಳು ಜನರ ನಡುವೆ ಚರ್ಚೆಯಾ ದರೆ, ಆ ನಗರದ ಪರಿಸರ ಉತ್ತಮವಾಗಿರು ತ್ತದೆ. ಅಲ್ಲದೆ, ಒಂದು ನಗರದ ಸೌಂದರ್ಯ ಎಂದರೆ, ವಿಶಾಲ ರಸ್ತೆಗಳು, ಉತ್ತಮ ಸಂಚಾರ, ರಸ್ತೆಯ ಇಕ್ಕೆಲಗಳಲ್ಲಿ ಹಸಿರಿನ ಕಲರವ ಹಾಗೂ ಪ್ರವಾಸಿ ಸ್ಥಳಗಳ ನಿರ್ವಹಣೆ ಸೇರಿದಂತೆ



'ಸೈನ್ಸ್ ಸಂಜೆ' ಶೀರ್ಷಿಕೆಯಡಿ ಆಯೋಜಿಸಿದ್ದ 'ಸೂಪರ್ ಸೌರಕೋಶ ಹಾಗೂ ಎಲ್‌ಇಡಿ ನ್ಯಾನೊ ಜಗತ್ತಿನಲ್ಲಿ ಹುಡುಕಾಟ' ವಿಷಯ ಕುರಿತು ಧಾರವಾಡದ ಐಐಟಿಯ ಗೌರವ ಪ್ರಾಧ್ಯಾಪಕ ಪ್ರೊ.ಎಂ.ಎಸ್.ಶಿವಪ್ರಸಾದ್ ಮಾತನಾಡಿದರು.

ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬಹುದು ಎಂದರು.

ಹುಬ್ಬಳ್ಳಿ-ಧಾರವಾಡದಲ್ಲಿ ಸಂಚಾರ ನಿಯಮ ನಿರ್ವಹಣೆಯಲ್ಲಿ ಸ್ವಲ್ಪ ಏರುಪೇರಾಗಿದ್ದು, ಅಲ್ಲಿನ ಸವಾರರು ಸಂಚಾರ ನಿಯಮ ಪಾಲನೆಯಲ್ಲಿ ಹಿಂದಿ ದ್ದಾರೆ. ಆದರೆ, ಮೈಸೂ ರಿನ ಪ್ರಮುಖ ರಸ್ತೆ, ವೃತ್ತಗಳಲ್ಲಿನ ಸಿಗ್ನಲ್ ಲೈಟ್ ನಿರ್ವಹಣೆ ಚೆನ್ನಾಗಿದ್ದು, ಇಲ್ಲಿನ ಬಹುತೇಕ ಸವಾರರು ಸಂಚಾರ ನಿಯಮ ಪಾಲಿಸುವ ಕುರಿತು ಪ್ರಶಂಸೆ ವ್ಯಕ್ತಪಡಿಸಿದರು. ಇದಕ್ಕೆ ಪೂರಕವಾಗಿ ಘಟನಾವಳಿಯನ್ನು ಉದಾಹರಿಸುತ್ತ, ನಿನ್ನೆ(ಶುಕ್ರವಾರ) ಕಾರ್ಯ ನಿಮಿತ್ತ ಮೈಸೂರಿನ ಹೊರವಲಯದಲ್ಲಿ ಕಾರಿನಲ್ಲಿ ಸಂಚಾರ ಮಾಡುತ್ತಿದ್ದೆವು.

ಆಗ ನಮ್ಮ ಕಾರಿನ ಚಾಲಕ ಸಿಗ್ನಲ್ ಬಂದಾಗ ಕಾರನ್ನು ಕ್ರಮಬದ್ಧವಾಗಿ ನಿಲ್ಲಿಸಿದರು. ಆಗ ಮಾತಿಗೆ ನಮ್ಮ ಕಾರಿನ ಚಾಲಕನ ಬಳಿ ಇಲ್ಲಿನ ಸಂಚಾರ ನಿರ್ವಹಣೆ ಚೆನ್ನಾಗಿದೆ ಎಂದು ಹೇಳಿದೆ. ಅದಕ್ಕೆ ಪ್ರತಿಯಾಗಿ ಆತ, ರಜಾ ದಿನಗಳಲ್ಲಿ ಬೆಂಗಳೂರು ಮತ್ತು ಹೊರಗಿನಿಂದ ಬರುವ ಪ್ರವಾಸಿ ವಾಹನದ ಚಾಲಕರು ಸಿಗ್ನಲ್ ಇದ್ದರೂ ಜಂಪ್ ಮಾಡಿಕೊಂಡು ಹೋಗುತ್ತಾರೆ ಎಂದರಲ್ಲದೆ, ಟ್ರಾಫಿಕ್ ಜಾಮ್ ಆಗುವ ಅಂಶವನ್ನು ನನ್ನ ಕಿವಿಗೆ ಹಾಕಿದ ಎಂದು ವಿವರಿಸಿದರು. ಮುಂದುವರೆದು ಪ್ರಸ್ತುತ ಜಗತ್ತಿನಲ್ಲಿ ಎಲೆಕ್ಟ್ರಾನಿಕ್ ತಂತ್ರಜ್ಞಾನ ಮುಂದುವರೆದಂತೆ ಅದರ ಬಳಕೆಯಲ್ಲೂ ಹಲವು ಬದಲಾವಣೆಯಾಗಿದೆ. ಉದಾಹರಣೆಗೆ ಈ ಹಿಂದೆ ಮನೆ ಮತ್ತು ಬೀದಿ ದೀಪಗಳಲ್ಲಿ ಬಲ್ಬ್ ಅಥವಾ ಟ್ಯೂಬ್‌ಲೈಟ್‌ಗಳ ಬಳಕೆ ಇತ್ತು ಈಗ ಎಲ್‌ಇಡಿ ಬಲ್ಬ್‌ಗಳ ಬಳಕೆ ಹೆಚ್ಚಾಗಿದೆ. ಇದರ ಜೊತೆಗೆ ಸೋಲಾರ್ ಮತ್ತು ಎಲ್‌ಇಡಿ ಬಲ್ಬ್‌ಗಳ ಉಪಯೋಗವು ಹೆಚ್ಚಾಗುತ್ತಿವೆ ಎಂದರು.

ಸೌರಕೋಶದ ಇತಿಹಾಸವು ಹಲವು ವೈಜ್ಞಾನಿಕ ಆವಿಷ್ಕಾರಗಳಿಂದ ಕೂಡಿದೆ. ಆಧುನಿಕ ಸೌರಕೋಶ ಬಳಕೆ 1850ರಿಂದ ಇಲ್ಲಿಯ ವರೆಗೆ ಹಂತಹಂತವಾಗಿ ಸಂಶೋಧನೆ ಗೊಂಡ ಅಂಶಗಳನ್ನು ಪರಿಗಣಿಸುವುದಾದರೆ ಸೌರಶಕ್ತಿ ಉತ್ಪಾದನೆಯಲ್ಲಿ ಗಣನೀಯ ಸಾಧನೆಯಾಗಿದೆ. ಸೋಲಾರ್ ಸೆಲ್ ತಂತ್ರ ಜ್ಞಾನದಲ್ಲಿ ಭಾರತವು ನವೀಕರಿಸಬಹುದಾದ ಸೌರಶಕ್ತಿಯ ಬೆಳವಣಿಗೆಯಲ್ಲಿ ಸಾಧನೆಯಾಗಿರುವ ಅಂಶ ಹಾಗೂ ಸೌರಶಕ್ತಿ ಬಳಸಿಕೊಂಡು ಎಲ್‌ಇಡಿ ಬಳಕೆಯಾಗುತ್ತಿ ರುವ ಕುರಿತು ಎಳೆ ಎಳೆಯಾಗಿ ಬಿಡಿಸಿದರು.

ಪ್ರಸ್ತುತ ಲೈಟ್-ಎಮಿಟಿಂಗ್ ಡಯೋಡ್ (ಎಲ್‌ಇಡಿ) ವಿದ್ಯುತ್ ಉಪಕರಣದಲ್ಲಿ ವ್ಯಾಪಕ ವಾಗಿ ಬಳಸಲಾಗುವ ಪ್ರಮಾಣಿತ ಬೆಳಕಿನ ಮೂಲವಾಗಿದೆ.

ಇದು ನಿಮ್ಮ ಮೊಬೈಲ್ ಫೋನ್‌ನಿಂದ ಹಿಡಿದು ದೊಡ್ಡ ಜಾಹೀ ರಾತು ಫಲಕಗಳವರೆಗೆ ಬಳಕೆಯಾ ಗುತ್ತಿದೆ ನ್ಯಾನೊ ಹಂತದಲ್ಲಿ ಈಗ ಕೇವಲ ಶೇ 15ರಷ್ಟು ಪರಿಣಾಮಕಾರಿ ಅಳವಡಿಕೆಯಾಗಿದೆ. ಹಾಗೆಯೇ ಎಲ್‌ಇಡಿ ಬಳಕೆಯಲ್ಲೂ ಸಾಕಷ್ಟು ಸುಧಾರಣೆಯಾಗಿದೆ ಎಂದರು.

ಕಾವೇರಿ ನೀರು ಬಿಡುಗಡೆ ವಿಚಾರ ಚೆನ್ನೈನಲ್ಲಿ ನಾಳೆ ತಮಿಳುನಾಡಿನ ಸರ್ವಪಕ್ಷಗಳ ಸಭೆ

ಚೆನ್ನೈ: ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆಯ ವಿರುದ್ಧ ಕರ್ನಾಟಕ ಸರ್ಕಾರ ಕೈಗೊಂಡ ನಿರ್ಣಯವನ್ನು ತಮಿಳುನಾಡು ಸರ್ಕಾರ ತೀವ್ರವಾಗಿ ಖಂಡಿಸಿದೆ.

ಅಂತರರಾಜ್ಯ ನದಿ ನೀರು ಬಿಕ್ಕಟ್ಟು ಪರಿಹಾರಕ್ಕಾಗಿ ಮುಂದೆ ಯಾವ ಕ್ರಮ ಕೈಗೊಳ್ಳಬೇಕು ಎಂಬುದರ ನಿರ್ಧಾರಕ್ಕಾಗಿ ಮಂಗಳವಾರ ಶಾಸಕರ ಸರ್ವಪಕ್ಷಗಳ ಸಭೆ ಕರೆಯಲಾಗಿದೆ ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ತಿಳಿಸಿದ್ದಾರೆ.

ಜುಲೈ 15ರ ಪ್ರಕಾರ ಕರ್ನಾಟಕದ ನಾಲ್ಕು ಜಲಾಶಯಗಳಲ್ಲಿ 75.586 ಟಿಎಂಸಿ ಅಡಿ ನೀರು ಶೇಖರಣೆಯಾಗಿದೆ. ಆದರೆ, ತಮಿಳುನಾಡಿನ ಮೆಟ್ಟೂರು ಜಲಾಶಯದಲ್ಲಿ ಕೇವಲ 13.808 ಟಿಎಂಸಿ ಅಡಿ ನೀರಿದೆ ಎಂದು ಅವರು ಸೋಮವಾರ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ, ಅಗತ್ಯವಿರುವಷ್ಟು ಮಳೆಯಾಗಲಿದೆ. ಆದಾಗ್ಯೂ, ಕಾವೇರಿ ನೀರು ನಿಯಂತ್ರಣ ಸಮಿತಿ (ಸಿಡಬ್ಲ್ಯುಆರ್‌ಸಿ) ನಿರ್ದೇಶನದ ಪ್ರಕಾರ ನೀರು ಬಿಡಲು ನಿರಾಕರಿಸುತ್ತಿದೆ. ಈ ಮೂಲಕ ತಮಿಳುನಾಡು ರೈತರಿಗೆ ದ್ರೋಹ ಬಗೆಯುತ್ತಿದೆ. ಇದನ್ನು ಯಾವುದೇ ಕಾರಣಕ್ಕೂ ಸಹಿಸಲಾಗದು ಎಂದಿದ್ದಾರೆ. ಜುಲೈ ತಿಂಗಳ ಅಂತ್ಯದವರೆಗೆ ಪ್ರತಿದಿನ ಒಂದು ಟಿಎಂಸಿ ಅಡಿಯಷ್ಟು ನೀರು ಬಿಡಬೇಕು ಎಂದು ಸಿಡಬ್ಲ್ಯುಆರ್‌ಸಿ ಕರ್ನಾಟಕ ಸರ್ಕಾರಕ್ಕೆ ಸೂಚಿಸಿತ್ತು.

ಸರ್ಕಾರಿ ನೌಕರರ ಮೈಸೂರು ಜಿಲ್ಲಾ ಶಾಖೆಯಿಂದ ಪ್ರತಿಭಾ ಪುರಸ್ಕಾರ



ಕಲಾಮಂದಿರದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ಸರ್ಕಾರಿ ನೌಕರರ ಮಕ್ಕಳು, ನೂತನ ಸಂಸದರು, ಶಾಸಕರನ್ನು ಅಭಿನಂದಿಸಲಾಯಿತು.

ಮೈಸೂರು,ಜು.15-ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ನಗರದ ಕಲಾಮಂದಿರದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ 90ಕ್ಕಿಂತ ಹೆಚ್ಚು ಅಂಕಗಳಿಸಿದ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಾಗೂ ನೂತನವಾಗಿ ಆಯ್ಕೆಯಾದ ಸಂಸದರು ಮತ್ತು ವಿಧಾನಪರಿಷತ್ ಶಾಸಕರಿಗೆ ಅಭಿನಂದನೆ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಸರ್ಕಾರಿ ನೌಕರರ ಪ್ರಮುಖ ಬೇಡಿಕೆಗಳನ್ನು ಪಡೆಯುವುದು ಸಂಘಟನೆಯ ಗುರಿಯಾಗಿದೆ ಈ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಸಂಘಟನೆ ಮಾಡುತ್ತದೆ. ನಿಮ್ಮೆಲ್ಲರ ಸಹಕಾರವಿರಲಿ ಎಂದು ಪ್ರತಿಭಾನ್ವಿತ ಮಕ್ಕಳಿಗೆ ಶುಭಾಶಯ ಕೋರಿದರು.

ಕೊಡಗು ಮತ್ತು ಮೈಸೂರು ಲೋಕಸಭಾ ಕ್ಷೇತ್ರದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ವಿಧಾನಪರಿಷತ್ ಶಾಸಕ ಕೆ.ವಿವೇಕಾನಂದ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಿಲ್ಲಾಧ್ಯಕ್ಷ ಗೋವಿಂದರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ತಿಮ್ಮೇಗೌಡ, ರಾಜ್ಯ ಖಜಾಂಚಿ ಡಾ.ಸಿದ್ದರಾಮಣ್ಣ, ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ್ ಬಳ್ಳಾರಿ, ಹಿರಿಯ ಉಪಾಧ್ಯಕ್ಷ ಎಂ.ವಿ.ರುದ್ರಪ್ಪ, ಮೈಸೂರು ಜಿಲ್ಲಾ ಕಾರ್ಯದರ್ಶಿ ರೇವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಸೇವಾ ಕಾರ್ಯಗಳೊಂದಿಗೆ ಮಾಜಿ ಕಾರ್ಪೊರೇಟರ್ ಎಂ.ಶಿವಣ್ಣ ಹುಟ್ಟುಹಬ್ಬ



ಲಷ್ಕರ್ ಮೊಹಲ್ಲಾ ಗರಡಿಕೇರಿ ಶಾಲಾ ಮಕ್ಕಳಿಗೆ ಮಾಜಿ ಕಾರ್ಪೊರೇಟರ್ ಎಂ.ಶಿವಣ್ಣ ಸಿಹಿ ತಿಂಡಿ ವಿತರಿಸಿದರು.

ಮೈಸೂರು, ಜು. 15- ಮಾಜಿ ಕಾರ್ಪೊರೇಟರ್ ಹಾಗೂ ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ. ಶಿವಣ್ಣ ಅವರ ಹುಟ್ಟುವನ್ನು ಆದಿಪೂಜಿತ ಗೆಳೆಯ ಬಳಗ, ಸಿಂಹಾದ್ರಿ ಗ್ರೂಪ್ ಮತ್ತು ಸಿದ್ಧಿ ವಿನಾಯಕ ಸೇವಾ ಸಂಘದ ವತಿಯಿಂದ ವಿವಿಧ ಸೇವಾ ಕಾರ್ಯಗಳೊಂದಿಗೆ ಆಚರಿಸಲಾಯಿತು.

ಸೋಮವಾರ ಬೆಳಗ್ಗೆ ಶಿವಣ್ಣ ಅವರು ಚಾಮುಂಡಿಬೆಟ್ಟದ ದೇವಸ್ಥಾನ, ಉತ್ತನಹಳ್ಳಿ ಜ್ವಾಲಾಮುಖಿ ದೇವಸ್ಥಾನ, ಲಷ್ಕರ್ ಮೊಹಲ್ಲಾ ಗರಡಿಕೇರಿಯಲ್ಲಿರುವ ಶ್ರೀ ಮಲೆ ಮಹದೇಶ್ವರ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಲಷ್ಕರ್ ಮೊಹಲ್ಲಾ ಗರಡಿಕೇರಿಯಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಗೆ ತೆರಳಿ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಿಸಿ, ಸಿಹಿ ಹಂಚಿದರು. ಈ ವೇಳೆ ಹಿರಿಯರಾದ ಎನ್. ರಾಚಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್. ಮೂರ್ತಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ಮಾಜಿ ಮೇಯರ್ ಅನಂತು, ಶ್ರೀಮತಿ ರಾಜಲಕ್ಷ್ಮಿ ಶಿವಣ್ಣ, ಶ್ರೀ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಎಂ.ಎನ್.ರವಿಕುಮಾರ್, ಗುಡ್ಡಪ್ಪ, ಪ್ರಕಾಶ್, ಸುರೇಶ್‌ಬಾಬು, ಎಂ. ಶಂಕರ್, ಉಮೇಶ್, ಎಂ.ಎಸ್.ಮಾದೇಶ್ ಲೀಲಾವತಿ, ಮಮತಾ ಇನ್ನಿತರರಿದ್ದರು. ಎಂ.ಶಿವಣ್ಣ ಹುಟ್ಟು ಹಬ್ಬದ ಅಂಗವಾಗಿ ಗರಡಿಕೇರಿ ಅಭಿಮಾನಿಗಳ ವತಿಯಿಂದ ಶಾಲೆಗೆ ಸುಣ್ಣ ಬಣ್ಣ ಬಳಿಯಲಾಗಿತ್ತು. ಶಾಲೆಯಲ್ಲಿ ಪ್ರತ್ಯೇಕ ತರಗತಿ ನಡೆಸಲು ಪಾರ್ಟಿಶನ್ ವ್ಯವಸ್ಥೆ, ನೀರಿನ ಸಂಪರ್ಕ, ಶೌಚಾಲಯ ಪುನ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿತ್ತು.

ಹಸಿರು ನಮ್ಮ ಉಸಿರು


ಟಿ20 ವಿಶ್ವಕಪ್ ಗೆಲುವು; ಕನ್ನಡಿಗ ದ್ರಾವಿಡ್‌ಗೆ ಸದನದಲ್ಲಿ ಗೌರವ ಸಲ್ಲಿಸಲು ನಿರ್ಣಯ


ಬೆಂಗಳೂರು: 2024ರ ಟಿ20 ವಿಶ್ವಕಪ್ ಗೆಲುವಿಗೆ ಕಾರಣರಾದ ಟೀಂ ಇಂಡಿಯಾದ ನಿರ್ಗಮಿತ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಸದನದಲ್ಲಿ ಅಭಿನಂದನಾ ಗೌರವ ಸಲ್ಲಿಸಲು ಅಧಿವೇಶನದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಬಿಜೆಪಿ ಶಾಸಕ ಸುರೇಶ್ ಕುಮಾರ್, ಭಾರತ ಟಿ20 ವಿಶ್ವಕಪ್ ಗೆಲುವಿನ ವೇಳೆ ಟೀಂ ಇಂಡಿಯಾದ ಮುಖ್ಯಕೋಚ್ ಆಗಿದ್ದ ಕನ್ನಡಿಗ ರಾಹುಲ್ ದ್ರಾವಿಡ್ ಅವರನ್ನು ಸನ್ಮಾನಿಸುವಂತೆ ಮನವಿ ಮಾಡಿದರು. ಈ ಮನವಿಯನ್ನು ಸದನದ ಎಲ್ಲಾ ಸದಸ್ಯರು ಸ್ವಾಗತಿಸಿದರು. ಬಳಿಕ ಈ ವಿಚಾರವಾಗಿ ಪ್ರತಿಕ್ರಿಯಿಸಿದ ಸ್ಪೀಕರ್ ಖಾದರ್ ಕರ್ನಾಟಕದ ಜನತೆ ಪರವಾಗಿ ದ್ರಾವಿಡ್ ಅವರಿಗೆ ಅಭಿನಂದನೆ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು.









ಸಾರ್ವಜನಿಕ ಸೂಚನೆ

ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಲಾಗಿರುವ ಮತ್ತು ವಿವರಿಸಲಾಗಿರುವ ಸ್ವತ್ತನ್ನು ಅದರ ಮಾಲೀಕರಾದ ಮೆ. ಪ್ರೈಮ್ ಪ್ರಾಪರ್ಟಿ ಹೋಲ್ಡಿಂಗ್ಸ್, ಪಾಲುದಾರಿಕೆ ಸಂಸ್ಥೆ, ರಿಜಿಸ್ಟರ್ಡ್ ಆಫೀಸ್; ನಂ. 1051, 80 ಅಡಿ ರಸ್ತೆ, 7ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034, ಎಂಬುವರ ಜೊತೆ ಜಂಟಿ ಅಭಿವೃದ್ಧಿ ಒಪ್ಪಂದದ ಕರಾರು ಮತ್ತು ಷೆಡ್ಯೂಲ್ ಸ್ವತ್ತಿನ ಅಭಿವೃದ್ಧಿಗಾಗಿ ಇಚ್ಛಿಸಿದ್ದು, ಸ್ವತ್ತಿನ ಮಾಲೀಕರು ಪ್ರತಿನಿಧಿಸಿದಂತೆ ಷೆಡ್ಯೂಲ್ ಸ್ವತ್ತು ಅವರ ಸಂಪೂರ್ಣ ಸ್ವತ್ತಾಗಿದ್ದು ಅವರ ವಿನಃ ಬೇರೆ ಯಾರಿಗೂ ಯಾವುದೇ ರೀತಿಯಾದ ಹಕ್ಕು–ಬಾಧ್ಯತೆಗಳು ಇರುವುದಿಲ್ಲ ಹಾಗೂ ನನ್ನ ಕಕ್ಷಿದಾರರ ವಿನಃ ಬೇರೆ ಯಾರೊಂದಿಗೂ ಷೆಡ್ಯೂಲ್ ಸ್ವತ್ತುಗಳನ್ನು ಯಾವ ರೀತಿಯಲ್ಲೂ ಪರಭಾರೆ, ಆಧಾರ, ಕರಾರು ಒಪ್ಪಂದ ಮಾಡಿಕೊಂಡಿಲ್ಲವೆಂದು ಹಾಗೂ ಷೆಡ್ಯೂಲ್ ಸ್ವತ್ತು ಯಾವ ವಿಧವಾದ ಸಾಲ ವಗೈರೆಗಳಿಗೆ ಒಳಪಟ್ಟಿರುವುದಿಲ್ಲ ಮತ್ತು ಯಾವುದೇ ವ್ಯಾಜ್ಯಗಳು, ನ್ಯಾಯಾಲಯದ ಕೋರ್ಟ್ ಅಟ್ಯಾಚ್‌ಮೆಂಟ್, ಡಿಕ್ರಿ ವಗೈರೆ ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಷೆಡ್ಯೂಲ್ ಸ್ವತಿನ ಬಗ್ಗೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು–ಬಾಧ್ಯತೆ, ಅಭ್ಯಂತರಗಳಿದ್ದಲ್ಲಿ ಈ ದಿನದಿಂದ ಹತ್ತು (10) ದಿವಸದೊಳಗೆ ಈ ಕೆಳಕಂಡ ವಿಳಾಸಕ್ಕೆ ತಮ್ಮ ಅಭ್ಯಂತರಗಳನ್ನು ದಾಖಲಾತಿಗಳೊಂದಿಗೆ ತಿಳಿಸುವುದು. ತಪ್ಪಿದಲ್ಲಿ ಈ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗೂ ಯಾವುದೇ ರೀತಿಯ ಹಕ್ಕು–ಬಾಧ್ಯತೆ, ತಂಟೆ–ತಕರಾರು ಹಾಗೂ ಅಭ್ಯಂತರಗಳಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಮೇಲೆ ತಿಳಿಸಿರುವ ಜಂಟಿ ಅಭಿವೃದ್ಧಿ ವಹಿವಾಟನ್ನು ಮುಂದುವರಿಸುವರು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬ ಹೋಬಳಿ, ನಾಗನಹಳ್ಳಿ ಮತ್ತು ಕಳಸ್ತವಾಡಿ ಗ್ರಾಮಗಳ ಒಟ್ಟು ವಿಸ್ತೀರ್ಣ 10 ಎಕರೆ 37 ಗುಂಟೆ ಜಮೀನುಗಳ ವಿವರ ಈ ಕೆಳಗಿನಂತಿದೆ.

ಸಂಖ್ಯೆ	ಸರ್ವೆ ನಂ.	ಗ್ರಾಮ	ವಿಸ್ತೀರ್ಣ		ಮಾಲೀಕರು (ಪ್ರೈಮ್ ಪ್ರಾಪರ್ಟಿ ಹೋಲ್ಡಿಂಗ್ಸ್‌ನ ಪಾಲುದಾರರು)	ಗಡಿಗಳು			
			ಎಕರೆ	ಗುಂಟೆ		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	167 (ಪರಿವರ್ತಿತ)	ನಾಗನಹಳ್ಳಿ	1	18	ಶ್ರೀ ರಾಜಿ ಮ್ಯಾಥ್ಯೂ	ಜಾರ್ಜ್ ಸಿರಿಯಾಕ್ ಚೋಲೆನ್ಕೇರಿಲ್ ಎಂಬುವರಿಗೆ ಸೇರಿದ ಸ.ನಂ.168	ರಸ್ತೆ	ಲಕ್ಷ್ಮಣ ಅವರಿಗೆ ಸೇರಿದ ಜಮೀನು	ಸ.ನಂ. 175 ಮತ್ತು 169
2.	168 (1 ಎಕರೆ 5 ಗುಂಟೆಗಳು ಪರಿವರ್ತಿತ) ಮತ್ತು 169/1 (12 ಗುಂಟೆಗಳು ಪರಿವರ್ತಿತ)	ನಾಗನಹಳ್ಳಿ	1	17	ಶ್ರೀ ಜಾರ್ಜ್ ಸಿರಿಯಾಕ್ ಚೋಲೆನ್ಕೇರಿಲ್	ರಾಮಣ್ಣ ಮತ್ತು ಎಂ.ತಂಬದಪ್ಪ ಅಲಿಯಾಸ್ ಮಾದಯ್ಯ ಎಂಬುವರಿಗೆ ಸೇರಿದ ಜಮೀನು(ಕಳಸ್ತವಾಡಿ ಗ್ರಾಮದ ಸ.ನಂ.315) ಕಳಸ್ತವಾಡಿ ಗ್ರಾಮದ ಗಡಿ	ನಾಗನಹಳ್ಳಿ ಕುಮಾರ್ ಮತ್ತು ಸುರೇಶ್ ಎಂಬುವರಿಗೆ ಸೇರಿದ ಜಮೀನು	ನಾಗನಹಳ್ಳಿ ಲಕ್ಷ್ಮಣೇಗೌಡ ಮತ್ತು ಕಳಸ್ತವಾಡಿ ವೆಂಕಟೇಶ ಎಂಬುವರಿಗೆ ಸೇರಿದ ಜಮೀನು (ಸ.ನಂ.166)	ಚಿಕ್ಕಜವರಯ್ಯ ಎಂಬುವರಿಗೆ ಸೇರಿದ ಜಮೀನು
3.	169/2 (ಪರಿವರ್ತಿತ)	ನಾಗನಹಳ್ಳಿ	1	31	ಶ್ರೀ ಜಾರ್ಜ್ ಸಿರಿಯಾಕ್ ಚೋಲೆನ್ಕೇರಿಲ್	ಚಾರ್ಲ್ಸ್ ಜೆ ಥೈಲ್ ಎಂಬುವರಿಗೆ ಸೇರಿದ ಜಮೀನು ಸ.ನಂ. 313/P2 ಜಿಮ್ಮಿ ಜಾರ್ಜ್ ಎಂಬುವರಿಗೆ ಸೇರಿದ ಜಮೀನು ಸ.ನಂ. 313/P	ಜಾರ್ಜ್ ಸಿರಿಯಾಕ್ ಚೋಲೆನ್ಕೇರಿಲ್ ಮತ್ತು ನಾಗನಹಳ್ಳಿ ಸುರೇಶ್ ಎಂಬುವರಿಗೆ ಸೇರಿದ ಜಮೀನು (ಸ.ನಂ. 175)	ಸ. ನಂ. 169/1 ಮತ್ತು ಸ.ನಂ.168 ರಲ್ಲಿ ಜಾರ್ಜ್ ಸಿರಿಯಾಕ್ ಚೋಲೆನ್ಕೇರಿಲ್ ಎಂಬುವರಿಗೆ ಸೇರಿದ ಜಮೀನು	ಸ. ನಂ. 170, 171 ಮತ್ತು 172 ರಲ್ಲಿ ರಾಜಿ ಮ್ಯಾಥ್ಯೂ ಎಂಬುವರಿಗೆ ಸೇರಿದ ಜಮೀನು
4.	174/2 (27ಗುಂಟೆಗಳು ಪರಿವರ್ತಿತ) 171 (2ಗುಂಟೆಗಳು ಪರಿವರ್ತಿತ) ಮತ್ತು 170 (16 ಗುಂಟೆಗಳು ಕೃಷಿ)	ನಾಗನಹಳ್ಳಿ	1	5	ಶ್ರೀ ರಾಜಿ ಮ್ಯಾಥ್ಯೂ	ಉಳಿದ ಜಮೀನು ಪುಟ್ಟಮ್ಮ ಎಂಬುವರಿಗೆ ಸೇರಿದ್ದು	ಚಿಕ್ಕವೆಂಕಟಪ್ಪ ಕಿಟ್ಟಿ ಎಂಬುವರಿಗೆ ಸೇರಿದ ಜಮೀನು	ಚಿಕ್ಕಜವರಪ್ಪ ಎಂಬುವರಿಗೆ ಸೇರಿದ ಜಮೀನು	ನಾರಾಯಣ ಎಂಬುವರಿಗೆ ಸೇರಿದ ಜಮೀನು
	171 (9 ಗುಂಟೆಗಳು ಪರಿವರ್ತಿತ) ಮತ್ತು 172 (21ಗುಂಟೆಗಳು ಪರಿವರ್ತಿತ)	ನಾಗನಹಳ್ಳಿ	0	30		ಮಾದಯ್ಯ ಎಂಬುವರಿಗೆ ಸೇರಿದ ಜಮೀನು	ನಿಂಗೇಗೌಡ ಎಂಬುವರಿಗೆ ಸೇರಿದ ಜಮೀನು	ಚಿಕ್ಕಜವರಪ್ಪ ಎಂಬುವರಿಗೆ ಸೇರಿದ ಜಮೀನು	ನಾರಾಯಣ ಎಂಬುವರಿಗೆ ಸೇರಿದ ಜಮೀನು
5.	175/2 (ಪರಿವರ್ತಿತ)	ನಾಗನಹಳ್ಳಿ	0	30	ಶ್ರೀ ಜಾರ್ಜ್ ಸಿರಿಯಾಕ್ ಚೋಲೆನ್ಕೇರಿಲ್	ಸ. ನಂ. 169, 170 ಮತ್ತು 174	ರಸ್ತೆ	ಸ. ನಂ. 167	ಅದೇ ಸ.ನಂ. 175 ರ, ಉಳಿದ ಭೂಮಿ
6.	311 (ಪರಿವರ್ತಿತ)	ಕಳಸ್ತವಾಡಿ	1	19	ಶ್ರೀ ರಾಜಿ ಮ್ಯಾಥ್ಯೂ	ಮಾದಯ್ಯ ಅಲಿಯಾಸ್ ತಂಪದಯ್ಯ ಎಂಬುವರಿಗೆ ಸೇರಿದ ಜಮೀನು	ಚಾರ್ಲ್ಸ್ ಜೆ ಥೈಲ್ ಎಂಬುವರಿಗೆ ಸೇರಿದ ಜಮೀನು ಸ. ನಂ. 313/P2	ನಾಗನಹಳ್ಳಿ ಅಂದಣ್ಣಯ್ಯ ಎಂಬುವರಿಗೆ ಸೇರಿದ ಸ.ನಂ.312 ರಲ್ಲಿನ ಜಮೀನು ಮತ್ತು ಸ.ನಂ.331 ಮತ್ತು 332	ಶ್ರೀನಿವಾಸ್ ಎಂಬುವರಿಗೆ ಸೇರಿದ ಜಮೀನು (ಸ.ನಂ.310)
7.	313/P (ಕೃಷಿ)	ಕಳಸ್ತವಾಡಿ	1	1	ಶ್ರೀ ಜಿಮ್ಮಿ ಜಾರ್ಜ್	ಸ. ನಂ. 312 ಮತ್ತು 314	ನಾಗನಹಳ್ಳಿ ಗ್ರಾಮದ ಸ. ನಂ. 169	ಸ. ನಂ. 315	ಸ. ನಂ. 313/P2
8.	313/P2 (ಕೃಷಿ)	ಕಳಸ್ತವಾಡಿ	1	1	ಶ್ರೀ ಚಾರ್ಲ್ಸ್ ಜೆ ಥೈಲ್	ಸ. ನಂ. 312 ಮತ್ತು 314	ನಾಗನಹಳ್ಳಿ ಗ್ರಾಮದ ರಾಜಿ ಮ್ಯಾಥ್ಯೂ ಎಂಬುವರಿಗೆ ಸೇರಿದ ಸ. ನಂ. 172 ; ನಾಗನಹಳ್ಳಿ ಗ್ರಾಮದ ಗಡಿ	ಜಿಮ್ಮಿ ಜಾರ್ಜ್ ಎಂಬುವರಿಗೆ ಸೇರಿದ ಸ. ನಂ. 313/P ಯಲ್ಲಿನ ಜಮೀನು	ನಾಗನಹಳ್ಳಿ ಗ್ರಾಮದ ನಾಗರಾಜು ಎಂಬುವರಿಗೆ ಸೇರಿದ ಸ. ನಂ. 173 ಮತ್ತು ಚಿಕ್ಕಜವರಾಯ ಎಂಬುವರಿಗೆ ಸೇರಿದ ಜಮೀನು (ಸ. ನಂ. 311)
9.	ಖಾತ ಸಂ. 206/2 (ಪೂರ್ವದಿಂದ ಪಶ್ಚಿಮಕ್ಕೆ 77 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 70 ಅಡಿ) 5390 ಚ.ಅಡಿ	ಕಳಸ್ತವಾಡಿ	0	5	ಮೆ. ಪ್ರೈಮ್ ಪ್ರಾಪರ್ಟಿ ಹೋಲ್ಡಿಂಗ್ಸ್, (ಪಾಲುದಾರಿಕೆ ಸಂಸ್ಥೆ)	ಮೈಸೂರು – ಬೆಂಗಳೂರು ಹೆದ್ದಾರಿ ರಸ್ತೆ	ರಾಜಿ ಮ್ಯಾಥ್ಯೂ ಎಂಬುವರಿಗೆ ಸೇರಿದ ಜಮೀನು ಸ. ನಂ. 311	ಖಾಸಗಿ ಭೂಮಿ	ಶ್ರೀನಿವಾಸ್ ಎಂಬುವರಿಗೆ ಸೇರಿದ ಜಮೀನು

ಜಯಂತ್ ಎಂ. ಪಟ್ಟಣ್‌ಶೆಟ್ಟಿ, ವಕೀಲರು
ಜಯಂತ್ ಪಟ್ಟಣ್‌ಶೆಟ್ಟಿ ಅಸೋಸಿಯೆಟ್ಸ್ ಎಲ್ ಎಲ್ ಪಿ,
102, ನೆಲಮಹಡಿ, ರಾಮ್ಸ್ ಇನ್‌ಫ್ಯಾಂಟ್ರಿ ಮ್ಯಾನರ್, ನಂ.70, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು–560001 ದೂರವಾಣಿ : 080 41238516 / 41238367

ಸ್ಥಳ : ಬೆಂಗಳೂರು
ದಿನಾಂಕ : 15–07–2024

ಸಾರ್ವಜನಿಕ ಸೂಚನೆ

ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಲಾಗಿರುವ ಮತ್ತು ವಿವರಿಸಲಾಗಿರುವ ಸ್ವತ್ತನ್ನು ಅದರ ಜಂಟಿ ಮಾಲೀಕರಾದ ದಿವಂಗತ ಚೈನ್ರಾಯ್ ಕೇವಲ್‌ರಾಮ್ ಅವರ ಪುತ್ರ ಶ್ರೀ ಸಿ. ಸುನೀಲ್ ಕುಮಾರ್ ಮತ್ತು ದಿವಂಗತ ತ್ಯಾಂಪಣ್ಣ ಚೌಟ ಅವರ ಪುತ್ರ ಶ್ರೀ ಕೆ. ಮನೋಜ್ ಕುಮಾರ್ ಚೌಟ, ಎಂಬುವರ ಜೊತೆ ಜಂಟಿ ಅಭಿವೃದ್ಧಿ ಒಪ್ಪಂದದ ಕರಾರು ಮತ್ತು ಷೆಡ್ಯೂಲ್ ಸ್ವತ್ತಿನ ಅಭಿವೃದ್ಧಿಗಾಗಿ ಇಚ್ಛಿಸಿದ್ದು, ಸ್ವತ್ತಿನ ಮಾಲೀಕರು ಪ್ರತಿನಿಧಿಸಿದಂತೆ ಷೆಡ್ಯೂಲ್ ಸ್ವತ್ತು ಅವರ ಸಂಪೂರ್ಣ ಸ್ವತ್ತಾಗಿದ್ದು ಅವರ ವಿನಃ ಬೇರೆ ಯಾರಿಗೂ ಯಾವುದೇ ರೀತಿಯಾದ ಹಕ್ಕು–ಬಾಧ್ಯತೆಗಳು ಇರುವುದಿಲ್ಲ ಹಾಗೂ ನನ್ನ ಕಕ್ಷಿದಾರರ ವಿನಃ ಬೇರೆ ಯಾರೊಂದಿಗೂ ಷೆಡ್ಯೂಲ್ ಸ್ವತ್ತುಗಳನ್ನು ಯಾವ ರೀತಿಯಲ್ಲೂ ಪರಭಾರೆ, ಆಧಾರ, ಕರಾರು ಒಪ್ಪಂದ ಮಾಡಿಕೊಂಡಿಲ್ಲವೆಂದು ಹಾಗೂ ಷೆಡ್ಯೂಲ್ ಸ್ವತ್ತು ಯಾವ ವಿಧವಾದ ಸಾಲ ವಗೈರೆಗಳಿಗೆ ಒಳಪಟ್ಟಿರುವುದಿಲ್ಲ ಮತ್ತು ಯಾವುದೇ ವ್ಯಾಜ್ಯಗಳು, ನ್ಯಾಯಾಲಯದ ಕೋರ್ಟ್ ಅಟ್ಯಾಚ್‌ಮೆಂಟ್, ಡಿಕ್ರಿ ವಗೈರೆ ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು–ಬಾಧ್ಯತೆ, ಅಭ್ಯಂತರಗಳಿದ್ದಲ್ಲಿ ಈ ದಿನದಿಂದ ಹತ್ತು (10) ದಿವಸದೊಳಗೆ ಈ ಕೆಳಕಂಡ ವಿಳಾಸಕ್ಕೆ ತಮ್ಮ ಅಭ್ಯಂತರಗಳನ್ನು ದಾಖಲಾತಿಗಳೊಂದಿಗೆ ತಿಳಿಸುವುದು. ತಪ್ಪಿದಲ್ಲಿ ಈ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗೂ ಯಾವುದೇ ರೀತಿಯ ಹಕ್ಕು–ಬಾಧ್ಯತೆ, ತಂಟೆ–ತಕರಾರು ಹಾಗೂ ಅಭ್ಯಂತರಗಳಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಮೇಲೆ ತಿಳಿಸಿರುವ ಜಂಟಿ ಅಭಿವೃದ್ಧಿ ವಹಿವಾಟನ್ನು ಮುಂದುವರಿಸುವರು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ ಇಲವಾಲ ಹೋಬಳಿಯ ಕೆ.ಹೆಮ್ಮನಹಳ್ಳಿ ಗ್ರಾಮದಲ್ಲಿರುವ ವಾಸದ ಉಪಯೋಗಕ್ಕಾಗಿ ಪರಿವರ್ತಿತವಾಗಿರುವ ಒಟ್ಟು ವಿಸ್ತೀರ್ಣ 05 ಎಕರೆ 12 ಗುಂಟೆ ಜಮೀನುಗಳ ವಿವರ ಈ ಕೆಳಗಿನಂತಿದೆ.

ಸಂಖ್ಯೆ	ಸರ್ವೆ ನಂ.	ವಿಸ್ತೀರ್ಣ		ಗಡಿಗಳು			
		ಎಕರೆ	ಗುಂಟೆ	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1.	81/1	2	8	ಸರ್ವೆ ನಂ. 79 ರ ಜಮೀನು	ಸರ್ವೆ ನಂ. 81/2 ರ ಜಮೀನು	ಸರ್ವೆ ನಂ. 82/2 ಮತ್ತು 82/5 ರ ಜಮೀನುಗಳು	ಸರ್ವೆ ನಂ. 77 ಮತ್ತು 80 ರ ಜಮೀನುಗಳು
2.	82/4	1	16	ಸರ್ವೆ ನಂ. 83 ರ ಜಮೀನು	ಸರ್ವೆ ನಂ. 82/3 ರ ಜಮೀನು	ರಸ್ತೆ	ಸರ್ವೆ ನಂ.82/5, 82/2 ಮತ್ತು 82/6 ರ ಜಮೀನುಗಳು
3.	82/5	1	28	ಸರ್ವೆ ನಂ. 82/2 ರ ಜಮೀನು	ಸರ್ವೆ ನಂ. 82/6 ರ ಜಮೀನು	ಸರ್ವೆ ನಂ. 82/4 ರ ಜಮೀನು	ಸರ್ವೆ ನಂ.81/1 ಮತ್ತು 81/2 ರ ಜಮೀನುಗಳು

ಜಯಂತ್ ಎಂ. ಪಟ್ಟಣ್‌ಶೆಟ್ಟಿ, ವಕೀಲರು
ಜಯಂತ್ ಪಟ್ಟಣ್‌ಶೆಟ್ಟಿ ಅಸೋಸಿಯೆಟ್ಸ್ ಎಲ್ ಎಲ್ ಪಿ
102, ನೆಲ ಮಹಡಿ, ರಾಮ್ಸ್ ಇನ್‌ಫ್ಯಾಂಟ್ರಿ ಮ್ಯಾನರ್, ನಂ. 70, ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು–560001
ದೂರವಾಣಿ : 080 41238516 / 41238367

ಸ್ಥಳ : ಬೆಂಗಳೂರು
ದಿನಾಂಕ : 15–07–2024